# ಅಧ್ಯಯನ 14 Study XIV

# ನೂತನ ಸೃಷ್ಟಿಯ ಪ್ರಾಪಂಚಿಕ ಹಂಗುಗಳು

## SUNDRY EARTHLY OBLIGATIONS OF THE NEW CREATION

**•"ಎಲ್ಲರ ದೃಷ್ಟಿಯಲ್ಲಿ ಯಾವುದು ಗೌರವವಾದದ್ದೋ ಅದನ್ನೇ ಯೋಚಿಸಿ ಸಾಧಿಸಿರಿ"–" ಯಾರ ಋಣದಲ್ಲಿರಬೇಡಿರಿ, ಯಾವ ಪುನರಾಪೇಕ್ಷೆ ಇಲ್ಲದೆ ಎರವಲು ನೀಡಿರಿ" – " ಕ್ರಿಸ್ತೀಯ ಸೌಜನ್ಯ" – "ನಾಳಿನ ವಿಷಯವಾಗಿ ಚಿಂತೆಮಾಡಬೇಡಿ"–"ನನ್ನ ಗುರಿ ಕ್ರಿಸ್ತನು, ಕ್ರಿಸ್ತನೊಬ್ಬನೇ" – "ಹಣವಂತರು ದೇವರ ರಾಜ್ಯದಲ್ಲಿ ಸೇರುವುದಕ್ಕಿಂತ, ಒಂಟೆಯು ಸೂಜಿಯ ಕಣ್ಣಿನಲ್ಲಿ ನುಗ್ಗುವುದು ಸುಲಭ"– ವಿಮೆ–ಪರಸ್ಪರ ಲಾಭಕ್ಕಾಗಿ ಇರುವ ಸಂಸ್ಥೆಗಳು, ಮುಂತಾದವುಗಳು – ಧರ್ಮಶೀಲ ಮಧ್ಯೆ ಪ್ರವೇಶಿಸುವಿಕೆ –"ದೇವರನ್ನು ಸ್ತುತಿಸುವುದು, ಮನುಷ್ಯರನ್ನು ಶಪಿಸುವುದು" ಸಾಮಾಜಿಕ ಹಂಗುಗಳು –" ಎಲ್ಲಾ ಮನುಷ್ಯರನ್ನೂ ಗೌರವಿಸಿರಿ"–"ನೂತನ ಸೃಷ್ಟಿಯವರು ಸಾರ್ವಜನಿಕ ಮತದಾನದಲ್ಲಿ ಭಾಗವಹಿಸಬಹುದೋ?" – ನೂತನ ಸೃಷ್ಟಿಗಳು ಮತ್ತು ನೈತಿಕ ಸುಧಾರಣೆಗಳು – ಬೆಳೆಬಾಳುವ ಉಡುಪುಗಳನ್ನು ಧರಿಸುವುದು – ನಾವು "ಮಹಿಮೆ, ಗೌರವ ಮತ್ತು ನಿರ್ಲಯತ್ವ" ಇವುಗಳ ಶೃಂಗಾರಕ್ಕಾಗಿ ಕಾದುಕೊಳ್ಳೋಣ.**

### "ಎಲ್ಲರ ದೃಷ್ಟಿಯಲ್ಲಿ ಯಾವುದು ಗೌರವವಾದುದ್ದೋ ಅದನ್ನೇ ಯೋಚಿಸಿ ಸಾಧಿಸಿರಿ"

**ರೋಮಾ.12:17**

### "Provide Things Honest in the Sight of All Men"-Rom. 12:17

ನೂತನ ಸೃಷ್ಟಿಗಳು ಲೋಕದವುಗಳಿಗೆ ಸತ್ತವರಾಗಿದ್ದು, ಕ್ರಿಸ್ತನ ಮೂಲಕ ದೇವರಲ್ಲಿ ಜೀವಿಸುವವರಾಗಿದ್ದಾರೆ ಎಂಬುದನ್ನು ಪ್ರಕಟಿಸುವಾಗ ಇದರ ರೂಪಾಲಂಕಾರವು ಸಂಪೂರ್ಣವಾಗಿ ರೂಪಾಂತರಗೊಂಡ ನಿರೀಕ್ಷೆಗಳಿಗೆ, ಧ್ಯೇಯ ಮತ್ತು ಆಕಾಂಕ್ಷೆಗಳಿಗೆ ಅನ್ವಯವಾಗುತ್ತದೆ. ಆದರೆ ನೂತನ ಮನಸ್ಸು ಇನ್ನೂ ಸಹಾ ಮಾನವ ದೇಹದ ಮೂಲಕ ಕಾರ್ಯನಿವಹಿಸುವ ಒತ್ತಾಯಕ್ಕೆ ಸಿಲುಕಿದ್ದು ನೂತನ ದೇಹವನ್ನು ಪ್ರಥಮ ಪುನರುತ್ಥಾನದಲ್ಲಿ ಕಂಡುಕೊಳ್ಳಲು ಕಾಯುತ್ತಿರುತ್ತದೆ. ಜೊತೆಗಾರರ ಬಗ್ಗೆ, ಲೋಕದ ಬಗ್ಗೆ ತನಗಿರುವ ಕೆಲವೊಂದು ಜವಾಬ್ದಾರಿಗಳನ್ನು ಗ್ರಹಿಸತಕ್ಕದ್ದು. ಅದಕ್ಕೆ ಈ ಲೋಕದ ಕುಟುಂಬಗಳ ಬಗ್ಗೆ, "ನಂಬಿಗಸ್ತ ಮನೆವಾರ್ತೆ"ಯವರ ಬಗ್ಗೆ ಐಹಿಕ ವಿಷಯಗಳಲ್ಲಿ ಜವಾಬ್ದಾರಿಗಳಿರುವಾಗ ಇವುಗಳನ್ನು ಸಡಲಿಸುವ ಅಥವಾ ಬಲಹೀನಗೊಳಿಸುವ ಬದಲು ಮನಸ್ಸಿನ ಪರಿವರ್ತನೆಯ ಕಾರಣ ವೃದ್ಧಿಗೊಳ್ಳುತ್ತವೆ. ಅದೇ ರೀತಿ ತನ್ನ ಸಹ ಒಡನಾಡಿಗಳೊಡನೆ ಕೆಲವೊಂದು ಕರ್ತವ್ಯಗಳಲ್ಲಿಯೂ ವೃದ್ಧಿಗೊಳ್ಳುತ್ತವೆ.

ಮಾನವ ಜಾತಿಯವರೆಲ್ಲರೂ ನ್ಯಾಯ, ನೀತಿವಂತಿಕೆಯ ತತ್ವಗಳನ್ನು ತಮ್ಮ ಪರಸ್ಪರ ವ್ಯವಹಾರಗಳಲ್ಲಿ ತಿಳಿದವರಾಗಿರಬೇಕು; ಆದರೆ ನೂತನ ಸೃಷ್ಟಿಗಳು ಕ್ರಿಸ್ತನ ಶಾಲೆಯಲ್ಲಿ ದೈವನಿಯಮದ ಈ ತತ್ವಗಳ ಬಗ್ಗೆ ವಿಶೇಷ ಬೋಧನೆಗಳನ್ನು ಪಡೆದಿರುವುದರಿಂದ, ಈ ಗುಣಲಕ್ಷಣಗಳನ್ನು ತಮ್ಮ ದೈನಂದಿನ ಜೀವಿತದಲ್ಲಿ ಕಾರ್ಯಗತಗೊಳಿಸುವಂತೆ ಇತರರಿಗಿಂತ ಹೆಚ್ಚು ಚುರುಕಾಗಿರಬೇಕಾಗುತ್ತದೆ. ತಮ್ಮ ಸಹ ಸೃಷ್ಟಿಗಳ ದೃಷ್ಟಿಯುಲ್ಲೂ ಎಲ್ಲರೂ ವಿನೀತವಾದ, ಗೌರವಯುಕ್ತವಾದ ಸಂಗತಿಗಳನ್ನು ಒದಗಿಸುವುದು ಯುಕ್ತವೋ? ಸರಿಯಾದುದೋ? ಖಚಿತವಾಗಿಯೂ ಹಾಗೆಯೇ ಇದೆ; ಖಚಿತವಾಗಿಯೂ ಈ ದೆಸೆಯಲ್ಲಿ ನೂತನ ಸೃಷ್ಟಿಗಳ ಜವಾಬ್ದಾರಿಗಳು ಆತನ ಉನ್ನತ ಪರಿಸ್ಥಿತಿಯ ಕಾರಣ ಹೆಚ್ಚಾಗಿದೆ. ಇತರ ಜನರೂ ಸಹಾ ಪ್ರಾಮಾಣಿಕರಾಗಿರುವುದು, ಸತ್ಯವಂತರಾಗಿರುವುದು, ನೀತಿವಂತರಾಗಿರುವುದು, ಗೌರವ ಮತ್ತು ಉದಾರಿಗಳಾಗಿರುವದು ಸಾಧ್ಯವೋ? ದೇವಜನರಿಗೆ ಇನ್ನೂ ಸಹಾ ಈ ಎಲ್ಲಾ ದೆಸೆಗಳಲ್ಲಿ ತೀಕ್ಷ್ಣವಾದ ಅಂತಃಸ್ಫೂರ್ತಿ ಇದೆ ಮತ್ತು ಪ್ರತಿನಿತ್ಯವೂ ತಮ್ಮ ಆಲೋಚನೆಗಳಲ್ಲಿ, ಮಾತುಗಳಲ್ಲಿ ಮತ್ತು ನಡತೆಯಲ್ಲಿ ಪರಿಪೂರ್ಣ ಮಟ್ಟವನ್ನು ಕಾಪಾಡಿಕೊಳ್ಳಲು ಅವರು ಹೆಣಗುತ್ತಿರುತ್ತಾರೆ.

"ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬ ಋಣವೇ ಹೊರತು ಬೇರೆ ಯಾವ ಸಾಲವೂ ನಿಮಗಿರಬಾರದು" (ರೋಮಾ. 13:8) ಎಂಬ ಅಪೋಸ್ತಲರ ಮಾತುಗಳು ದೇವರ ನಿಯಮವಾಗಿದೆ. ಈ ಲೋಕದವರೆಲ್ಲರೂ ಈ ನಿಯಮವನ್ನು ತಿಳುಕೊಂಡಿದ್ದು ಅದನ್ನು ನಿಕಟವಾಗಿ ಪಾಲಿಸುವುದಾದರೆ ಎಷ್ಟೋ ಒಳ್ಳೆಯದು. ಸೂಕ್ತಸಮಯದಲ್ಲಿ ಈ ನಿಯಮವನ್ನು ಕಠಿಣವಾಗಿ ಪಾಲಿಸಬೇಕಾಗುವುದು ಎಂಬುದು ನಮಗೆಲ್ಲಾ ತಿಳಿದದೆ. ಸೂಕ್ತಸಮಯದಲ್ಲಿ ಅಂದರೆ ಸಹಸ್ರ ವರ್ಷದ ಆಳ್ವಿಕೆಯ (ಮಿಲೇನಿಯಂ) ಯುಗದಲ್ಲಿ ಈ ನಿಯಮವನ್ನು ಕಠಿಣವಾಗಿ ಜಾರಿಗೊಳಿಸಲಾಗುವುದು ಎಂಬುದೂ ನಮಗೆ ತಿಳಿದದೆ. ಆದರೆ ನೂತನ ಸೃಷ್ಟಿಯು ಈಗ ಇದನ್ನು ತನ್ನ ನಿಯಮವನ್ನಾಗಿ ಮಾಡಿಕೊಂಡಿದೆ. ಇತರರು ಇದನ್ನು ಗ್ರಹಿಸುವಲ್ಲಿ ಮತ್ತು ಪಾಲಿಸುವಲ್ಲಿ ಎಷ್ಟೇ ವಿಫಲರಾದರೂ ದೇವಜನರು ವಿಧಿವತ್ತಾಗಿ ಈ ಬೋಧನೆಗೆ ವಿಧೇಯರಾಗಲೇ ಬೇಕಾಗುತ್ತದೆ. ಸ್ವಾಭಾವಿಕ ಇಸ್ರಾಯೇಲ್ಯರಿಗೂ, ಸೇವಕರ ಮನೆಯವರಿಗೂ ಸಹಾ ಕರ್ತನು "ನೀವು ಅನೇಕ ಜನರಿಗೆ ಸಾಲಕೊಡುವಿರೇ ಹೊರತು ಅವರಿಂದ ಸಾಲ ತೆಗೆದುಕೊಳ್ಳುವುದಿಲ್ಲ" (ಧರ್ಮೋಪದೇಶಕಾಂಡ 15:6) ಎಂಬ ಪ್ರತಿಬಂಧಕಾಜ್ಞೆಯನ್ನು ನೀಡಿದ್ದಾನೆ. ಈ ತತ್ವವು ವಿವೇಕದ ಸಾರವಾಗಿರುವ ಉತ್ತಮ ನಿರ್ಣಯವುಳ್ಳ ಪ್ರತಿಯೊಬ್ಬ ವ್ಯಕ್ತಿಯ ಪ್ರಶಂಸನೆಗೆ ಪಾತ್ರವಾಗಿದೆ. ಈ ವಿವೇಕವನ್ನು ಸಾಧ್ಯವಾದ ಕಡೆಗಳಲ್ಲಿ ಈ ಲೋಕಕ್ಕೆ ಅನ್ವಯಿಸಿದರೆ ಒಳ್ಳೇದು – ಈ ವಿವೇಕವನ್ನು ಲೋಕವು ಗ್ರಹಿಸುತ್ತದೆ. ಆದರೆ ತುಲನಾತ್ಮಕವಾಗಿ ಕೆಲವೇ ದೇವಜನರು ಅಥವಾ ಈ ಲೋಕದವರು ಮಾತ್ರವೇ ವ್ಯತ್ಯಾಸವಿಲ್ಲದಂತೆ ಇದನ್ನು ಅನುಸರಿಸಲು ಪರಿಶ್ರಮದಿಂದ ಹೆಣಗುತ್ತಾರೆ.

ಮತ್ತೊಂದು ಮಾತಿನಲ್ಲಿ ಹೇಳುವುದಾದರೆ, ನೂತನ ಸೃಷ್ಟಿಯ ಪ್ರತಿಯೊಬ್ಬ ಸದಸ್ಯನೂ ಈ ಲೋಕದ ಸಂಗತಿಗಳಲ್ಲಿ ತನ್ನ ಸಂಪಾದನೆಗೆ ತಕ್ಕಂತೆ ಜೀವಿಸಬೇಕು. ಆತನು ದಿನಕ್ಕೆ ಒಂದು ಡಾಲರ್* (*ಸುಮಾರು ಅರವತ್ತೈದು ರೂಪಾಯಿಗಳು) ಮಾತ್ರ ಗಳಿಸುವುದಾದಲ್ಲಿ, ಅತ್ಯಗತ್ಯವಾದ ದಾರುಣ ಸ್ಥಿತಿಯನ್ನು ಹೊರತು ಪಡಿಸಿ ಬೇರೆ ಒಂದು ಕ್ಷಣವೂ ಆತನು ಅದಕ್ಕಿಂತ ಹೆಚ್ಚು ಖರ್ಚುಮಾಡುವ ಆಲೋಚನೆಯನ್ನು ಮಾಡಕೂಡದು. ಆದರೆ, ಇನ್ನೂ ಉತ್ತಮ ಪರಿಸ್ಥಿತಿ ಉಂಟಾಗುವವರೆಗೂ ತನ್ನ ಪರಿಸ್ಥಿತಿಯನ್ನು ಅದಕ್ಕೆ ತಕ್ಕಂತೆ ತೊಡಗಿಸಿಕೊಳ್ಳಬೇಕು. ದೈವಾಯುಕ್ತ ಪಾಲನೆಯು ತನ್ನ ಮತ್ತು ತನ್ನ ಎಲ್ಲಾ ಕೆಲಸ ಕಾರ್ಯಗಳ ಮೇಲೆ ಇದೆ ಎಂದು ಗ್ರಹಿಸಿಕೊಂಡು, ಆತನು ತನ್ನ ಲೌಕಿಕ ಸಂಗತಿಗಳ ಬಗ್ಗೆ ತಿಳಿದಿರಲಾಗಿ ಅವುಗಳನ್ನು ಬುದ್ಧಿವಂತಿಕೆಯಿಂದ ವ್ಯವಸ್ಥೆಗೊಳಿಸಬೇಕು. ಅವುಗಳಲ್ಲದೆ ಆತನ ಆತ್ಮೀಕ ಸಂಗತಿಗಳೆಲ್ಲವೂ ದೈವಿಕ ಮೇಲ್ವಿಚಾರಣೆಗೊಳಗಾಗಿದೆ ಮತ್ತು ದೇವರು ಆತನಿಗಾಗಿ ಈ ಸ್ಥಿತಿಗತಿಗೆ ಸಂಬಂಧಿಸಿದಂತೆ ಆಶೀರ್ವಾದಕರ ವಿನ್ಯಾಸವೊಂದನ್ನು ಸಿದ್ಧಪಡಿಸಿದ್ದಾನೆ ಎಂಬ ನಿರ್ಧಾರಕ್ಕೆ ಬರಬೇಕು. ಆದುದರಿಂದ, ಅವುಗಳು ಎಷ್ಟೇ ಕಷ್ಟವಾಗಿದ್ದರೂ ಆತನು ಆ ಬಗ್ಗೆ ಪೂರ್ಣ ತೃಪ್ತಿಯುಳ್ಳವನಾಗಿರಬೇಕು. ಸೂಕ್ತ ಸಮಯದಲ್ಲಿ ದೇವರ ಪ್ರೀತಿ ಮತ್ತು ವಿವೇಕವು ತರಲಿರುವ ಪರಿಹಾರಕ್ಕಾಗಿ ತಾಳ್ಮೆಯಿಂದ ಕಾಯ್ದುಕೊಂಡಿರಬೇಕು. ಆದಾಯವು ಧಾರಾಳವಾಗಿದ್ದಲ್ಲಿ ಸಂಯಮವು ಎಲ್ಲವುಗಳಲ್ಲಿದ್ದಂತೆ ಇದರಲ್ಲೂ ಆತನ ನಡತೆಯು ಕಾನೂನಾಗಿರಬೇಕು. – "ನಿಮ್ಮ ಸೈರಣೆಯು ಎಲ್ಲಾ ಮನುಷ್ಯರಿಗೆ ಗೊತ್ತಾಗಲಿ; ಕರ್ತನು ಹತ್ತಿರವಾಗಿದ್ದಾನೆ" (ಫಿಲಿಪ್ಪ 4:5) . ಆರ್ಥಿಕತೆಯು ದೈವಿಕ ವ್ಯವಸ್ಥೆಯ ಭಾಗವಾಗಿದೆ. ನಮ್ಮ ಕರ್ತನು ಮತ್ತು ಆತನ ಅಪೋಸ್ತಲರುಗಳು ಇದಕ್ಕೆ ಉದಾಹರಣೆಯಾಗಿದ್ದಾರೆ. ವಿಶಿಷ್ಟವಾಗಿ, ಕೇವಲ ಅಲ್ಪ ಆಹಾರದಲ್ಲಿ ಸಹಸ್ರಾರು ಮಂದಿಗೆ ಉಣಬಡಿಸಿದಾಗ, ಮಿಕ್ಕವುಗಳನ್ನು ಕೂಡಿಸಿರಿ ಎಂದು ಕರ್ತನು ತನ್ನ ಶಿಷ್ಯರಿಗೆ ಮಾಡಿದ ಅಪ್ಪಣೆಯ ಮೂಲಕ ಇದನ್ನು ಗ್ರಹಿಸಿಕೊಳ್ಳಬಹುದಾಗಿದೆ.

ಪ್ರಮಾಣದಲ್ಲಿ ನಮ್ಮ ಹಂಚಿಕೆಯು ಮಿತಿಯುಳ್ಳದ್ದಾಗಿರುವುದಾದರೆ, ನಾವು ನಮ್ಮ ಎಲ್ಲಾ ವೆಚ್ಚಗಳನ್ನೂ ಮೊಟಕುಗೊಳಿಸಬೇಕು, ಅವನ್ನು ನಮ್ಮ ಆದಾಯದ ಮಟ್ಟಕ್ಕೆ ತರುವುದು ಮಾತ್ರವಲ್ಲ, ಇನ್ನೂ ಕಡಿಮೆಗೊಳಿಸಬೇಕು. ಹೀಗಾದಲ್ಲಿ ನಾವು ಗಳಿಸುವುದು ಎಷ್ಟೇ ಕಡಿಮೆಯಾದರೂ ಸರಿ, ಸ್ವಲ್ಪ ಭಾಗವನ್ನು ಭವಿಷ್ಯದ ನಮ್ಮ ಸ್ವಂತ ಅಗತ್ಯತೆಗಳಿಗಾಗಲೀ ಅಥವಾ ದೇವರಿಗೆ ಕೃತಜ್ಞತಾ ಕಾಣಿಕೆ ಸಲ್ಲಿಸುವ ಸಲುವಾಗಿ ಪಕ್ಕಕ್ಕೆ ತೆಗೆದಿಡಬಹುದು. ಅಥವಾ ಅಪೋಸ್ತಲನು ಸಲಹೆ ನೀಡುವಂತೆ, ನಾವು ನಮಗಿಂತ ಇನ್ನೂ ಅಗತ್ಯತೆಯುಳ್ಳ ಜನರಿಗೆ ಇದರಿಂದ ಸಹಾಯಮಾಡಬಹುದು. ದೇವರಲ್ಲಿಡುವ ಭಕ್ತಿಯು ತೃಪ್ತಿಯನ್ನುಂಟುಮಾಡುತ್ತದೆಂಬ ಅಭಿಪ್ರಾಯವನ್ನು ಯಾವಾಗಲೂ ಮನಸ್ಸಿನಲ್ಲಿಟ್ಟುಕೊಳ್ಳಬೇಕು; ಇದೆಂದರೆ ಹೃದಯದ ವಿಶ್ರಾಂತಿ. ಇಂತಹ ಪರಿಸ್ಥಿತಿಯಲ್ಲಿ ರೊಟ್ಟಿ ಮತ್ತು ನೀರು, ಅಥವಾ ಆಲೂಗಡ್ಡೆ ಮತ್ತು ಉಪ್ಪು ಇವುಗಳು ಚೆನ್ನಾಗಿ ರುಚಿಸುತ್ತವೆ ಮತ್ತು ಬೇರೆ ವಿಭಿನ್ನ ಪರಿಸ್ಥಿತಿಯಲ್ಲಿ ತೆಗೆದುಕೊಂಡ ಇತರ ಉತ್ತಮ ಆಹಾರಕ್ಕಿಂತ ಹೆಚ್ಚಿನ ಫಲಗಳನ್ನು ನೀಡುತ್ತವೆ. ನಂಬಿಕೆಯೆಂಬುದು ಯಾವಾಗಲೂ ಕೃತಜ್ಞತೆ ಎಂಬ ಅಭಿಪ್ರಾಯವನ್ನೂ ಉಂಟುಮಾಡುತ್ತದೆ. ಆದುದರಿಂದ ಅತ್ಯಂತ ಸರಳವಾದ ಆಹಾರಕ್ಕಾಗಿ ವೆಚ್ಚ ಮಾಡುವ ದೇವರ ಮಗುವು, ಎಲ್ಲಾ ಒಳ್ಳೆಯವುಗಳನ್ನು ನೀಡುವಾತನಿಗೆ ನಿರಂತರವಾಗಿ ಕೃತಜ್ಞತೆಯಿಂದ ತುಂಬಿತುಳಕಬೇಕು ಮತ್ತು ಜೀವನದ ಎಲ್ಲಾ ಸಂಗತಿಗಳಲ್ಲಿ ತೋರಿಬರುವ ಆತನ ವಿವೇಕದ ಬಗ್ಗೆ ಪೂರ್ಣ ಭರವಸೆಯುಳ್ಳವರಾಗಿರಬೇಕು. ಪ್ರಗತಿಯ ಬಗ್ಗೆ ಉದಾಸೀನ ತೋರುವುದು ಎಂಬುದು ಇದರ ಅರ್ಥವಲ್ಲ, ಪ್ರಗತಿ ಮತ್ತು ಹೆಚ್ಚಿನ ಅಭ್ಯುಧಯಕ್ಕೆ ಹೋಗುವ ಬಾಗಿಲು ನೀತಿಯ ಬಾಗಿಲಾಗಿದ್ದಲ್ಲಿ – ಅದು ನಮ್ಮ ಪರಿಸ್ಥಿತಿಯನ್ನು ಇನ್ನಷ್ಟು ಉತ್ತಮಗೊಳಿಸಲು ನಮ್ಮ ಮುಂದಿರುವ ಗೌರವಾನ್ವಿತ ಮಾರ್ಗವಾಗಿದೆ. ಇದು ದೈವಿಕ ಕೊಡುಗೆ ಎಂದು ಭಾವಿಸಿ ಇದನ್ನು ನಾವು ಕೃತಜ್ಞತೆಯಿಂದ ಅಂಗೀಕರಿಸಬೇಕು. ಬಹುಶಃ ನಾವು ಇದರ ಮೂಲಕ ಇನ್ನೂ ಹೆಚ್ಚಿನ ಪಾಠಗಳನ್ನು ನಮ್ಮ ಮಹಾ ಬೋಧಕನಿಂದ ಪಡಕೊಳ್ಳಬಹುದಾಗಿದೆ.

"ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬ ಋಣವೇ ಹೊರತು ಬೇರೆ ಯಾವ ಸಾಲವೂ ನಿಮಗೆ ಇರಬಾರದು" (ರೋಮಾ. 13:8) ಎಂಬ ಪ್ರತಿಬಂಧಕಾಜ್ಞೆಯು, ನಾವು ಯಾವುದೇ ಸಮಯದಲ್ಲಿ ಅಜಾಗರೂಕತೆಯಿಂದ, ದೇವರ ವಿವೇಕಕ್ಕೆ ವ್ಯತಿರಿಕ್ತವಾಗಿ ಇತರರ ಸಾಲಗಾರರಾಗಿರುವಲ್ಲಿ ನಾವು ಪ್ರತಿಯೊಂದು ಕಾರಣದಿಂದ ಮತ್ತು ಗೌರವಾನ್ವಿತವಾಗಿ ಆ ಸಾಲವನ್ನು ತೀರಿಸಬೇಕು ಎಂಬ ಅಭಿಪ್ರಾಯವನ್ನು ನೀಡುತ್ತದೆ. ಹೀಗಿದ್ದಾಗ್ಯೂ ಈ ಸಾಲವು ವ್ಯಾಪಾರದ ವೇಳೆ ಉಂಟಾಗಿದ್ದು, ಸಾಲನೀಡುವಾತನಿಗೆ ತಾನು ಲಾಭಗಳಿಸುವ ದೃಷ್ಟಿಯಿಂದ ಹೆಚ್ಚುಕಡಿಮೆ ದೊಡ್ಡ ಗಂಡಾತರಕ್ಕೆ ಕೈಹಾಕುತ್ತಿದ್ದೇನೆಂಬ ಅರಿವಿದ್ದಲ್ಲಿ, ಮತ್ತು ಈ ಸಾಲವು ನ್ಯಾಯಯುತ ವ್ಯಾಪಾರ ವ್ಯವಹಾರಗಳ ಸೋಲುವಿಕೆಯ ಕಾರಣ ಉಂಟಾಗಿದ್ದಲ್ಲಿ ಮತ್ತು ಅದು ನ್ಯಾಯರಕ್ಷಣೆಯಿಂದ ಬಹಿಷ್ಕರಿಸಲ್ಪಟ್ಟಲ್ಲಿ – ನಿರ್ದಿಷ್ಟವಾಗಿ, ಅವರುಗಳು ಸ್ವಭಾವದ ಬದಲಾವಣೆಯ ಮೊದಲೇ, ನೂತನ ಸೃಷ್ಟಿಗಳಾಗುವ ಮೊದಲೇ ಒಪ್ಪಂದ ಮಾಡಿಕೊಂಡಿರುವಲ್ಲಿ, ನೂತನ ಸೃಷ್ಟಿಯು ದಿವಾಳಿತನದ ಅವಕಾಶ ಪಡಕೊಳ್ಳುವುದರಲ್ಲಿ ಅಥವಾ ಕಾನೂನಿನ ಅನುಕೂಲತೆಗಳನ್ನು ಹೊಂದುವುದರಲ್ಲಿ ಯಾವುದೇ ತಪ್ಪಿಲ್ಲ. ಇದರ ಅಡಿಯಲ್ಲಿ ಸಾಲ ಅಥವಾ ತೀರ್ಪು ಇವುಗಳು ನ್ಯಾಯಲಯದಿಂದ ನವೀಕರಣ ಹೊಂದಿಕೊಳ್ಳದೇ ಹೋದಲ್ಲಿ ಅಥವಾ ಯಾವುದೇ ವ್ಯಕ್ತಿಗತ ವಾಗ್ದಾನಗಳಿಲ್ಲದಲ್ಲಿ ಅವುಗಳು ಐದುವರ್ಷಗಳ ನಂತರ ವ್ಯರ್ಥವಾಗುವುದು.

ಇಂತಹ ಕ್ರಮಗಳ ದೃಷ್ಟಾಂತವು ನಮಗೆ ದೇವರ ವಾಕ್ಯದಲ್ಲಿ ಸಾಂಕೇತಿಕ ಇಸ್ರಾಯೇಲ್ಯರಿಗೆ ಏಳನೆಯ ವರ್ಷದ ಸಬ್ಬತ್ತಿನಲ್ಲಿ ಸಾಲ ಮನ್ನಾ ಮಾಡುವ ಹಾಗೂ 50ನೇ ವರ್ಷದ ಜ್ಯೂಬಿಲಿಯ ಕಾಲದಲ್ಲಿ ಇನ್ನೂ ಹೆಚ್ಚಾಗಿ ಎಲ್ಲಾ ಹಂಗುಗಳನ್ನೂ ಮನ್ನಾ ಮಾಡುವ ಸಂದರ್ಭದಲ್ಲಿ ಕಂಡುಬರುತ್ತದೆ. ಆ ದೈವಿಕ ವ್ಯವಸ್ಥೆಯನ್ನು ಈ ಲೋಕವು ಮೆಚ್ಚಿಕೊಂಡಿದೆ ಮತ್ತು ಅನೇಕ ದೇಶಗಳು ಇದನ್ನು ತಮ್ಮ ನಾಗರೀಕ ಕಾನೂನುಗಳಲ್ಲಿ ದೃಢಪಡಿಸಿದ್ದಾರೆ. ಅಂತಹ ಸಾಲಗಳ ಸಂಧರ್ಭಗಳಲ್ಲಿ ನೂತನ

ಸೃಷ್ಟಿಗಳು ಈ ರೀತಿಯ ಲೌಕಿಕ ವ್ಯವಸ್ಥೆಯ ಅನುಕೂಲತೆ ಪಡೆದು, ದೇವರ ಚಿತ್ತಾನುಸಾರವಾಗಿ ಅಂತಹ ಸಾಲಗಳ ಬಗ್ಗೆ ಆರಾಮಗೊಳ್ಳಬಹುದು. ದೈವಾನುಗ್ರಹದ ಹೊರತಾಗಿ ಅವರು ಅನಂತರದಲ್ಲಿ ಧಾರಾಳವಾಗಿ ಹೊಂದಿಕೊಳ್ಳಬಹುದು. ಆಗ ನಿಸ್ಸಂಧೇಹವಾಗಿ ಸುವರ್ಣನಿಯಮವು ಅವರಿಗೆ ಎಲ್ಲಾ ಸಾಲಗಳನ್ನೂ ಅವು ಕಾನೂನು ರೀತಿಯಲ್ಲಿ ನಿರ್ಮೂಲಗೊಳಿಸಿದ್ದರೂ ಅವುಗಳನ್ನು ತಪ್ಪದೆ ತೀರಿಸಿಬಿಡುವಂತೆ ಆದೇಶನೀಡುತ್ತದೆ. ಹೀಗಿದ್ದಾಗ್ಯೂ, ಒಂದುವೇಳೆ ಸಾಲವು ವ್ಯಾಪಾರಿ ಸಂಬಂಧಿತ ವಾಗಿರದೆ, ಸ್ನೇಹದ ಒಪ್ಪಂದದ ಮೇರೆಯದ್ದಾಗಿದ್ದಲ್ಲಿ, ಹಣದ ಸಾಲದ ಮೇಲೆ ಸ್ನೇಹಿತನು ಯಾವುದೇ ನಿರೀಕ್ಷಿತ ಲಾಭವನ್ನು ಪಡಕೊಳ್ಳದೇ ಇದ್ದಲ್ಲಿ ಅದು ಸಂಪೂರ್ಣವಾಗಿ ಬೇರೆ ರೀತಿಯ ಪ್ರಕರಣವಾಗಿ ಬಿಡುತ್ತದೆ.

ಇಂತಹ ಸಾಲವನ್ನು ಜೀವನ ಪರ್ಯಂತ ಮುಂದುವರೆಯುವ ಸಾಲವೆಂದು ಪರಿಗಣಿಸಲಾಗುವುದು ಮತ್ತು ಅದನ್ನು ಪ್ರಮುಖವಾಗಿ ತೀರಿಸುವ ಪ್ರಯತ್ನವು ಸದಾ ಸಾಲಗಾರನ ಮೇಲೆ ಇದ್ದೇ ಇರುತ್ತದೆ. ಆದರೆ, ಈ ಹಿಂದೆ ಸೂಚಿಸಿದಂತೆ, ನೂತನ ಸೃಷ್ಟಿಯ ಸದಸ್ಯನಾದ ಮೇಲೆ, ಪವಿತ್ರಾತ್ಮನ ಮತ್ತು ದೇವರವಾಕ್ಯದ ಮಾರ್ಗದರ್ಶನದಲ್ಲಿ ಹಾಗೂ ಸದೃಢ ಮನಸ್ಸಿನ ಸ್ಫೂರ್ತಿಯ ನಿರ್ದೇಶನದಲ್ಲಿ ಯಾವೊಬ್ಬ ನೂತನ ಸೃಷ್ಟಿಯೂ ಸಾಲಗಾರನಾಗಬಾರದು. ಆದರೆ, ಅವರು ತಮ್ಮ ಆದಾಯಕ್ಕೆ ಅನುಗುಣವಾಗಿ ಸಮಾಧಾನವಾಗಿ ಜೀವಿಸಬೇಕು. "...ಯಾವ ಸಾಲವೂ ನಿಮಗಿರಬಾರದು" ಎಂಬ ದೈವಾಜ್ಞೆಯು ಒಬ್ಬರು ತಮ್ಮ ಆಸ್ತಿಯನ್ನು ಅದರ ಬೆಲೆಗಿಂತ ಕಡಿಮೆ ಮೊತ್ತಕ್ಕೆ ಅಡವಿಡಬೇಕಾದ ಸಂಧರ್ಭಕ್ಕೆ ಅವಶ್ಯಕವಾಗಿ ಅನ್ವಯಿಸಲಾಗದು. ಇದು ನಿಷೇದದ ಅರ್ಥದಲ್ಲಿ ಎರವಲು ಎನಿಸದು. ಬದಲಾಗಿ ಇದು ಒಂದು ರೀತಿಯಲ್ಲಿ ಆ ಆಸ್ತಿಯ ಸಮಂಜಸವಾದ ಭಾಗದ ತಾತ್ಕಾಲಿಕ ಮಾರಾಟವೆನಿಸುವುದು. ಮತ್ತು ಇದನ್ನು ಪುನಃ ವಶಕ್ಕೆ ತೆಗೆದುಕೊಳ್ಳುವ ಅವಕಾಶವಿರುವುದು.

ಗತಿಸಿದ ಮನೆಯ ಯಜಮಾನನ ಸಾಲಕ್ಕೆ ಯಾವುದೇ ಮಾನವ ಕಾನೂನು ಅಥವಾ ದೈವ ನಿಯಮದ ಪ್ರಕಾರ ಆತನ ವಿಧವೆಯಾಗಲೀ, ಅನಾಥ ಮಕ್ಕಳಾಗಲೀ ಜವಾಬ್ದಾರರಾಗುವುದಿಲ್ಲ. ತಂದೆ ಅಥವಾ ಪತಿ ಮಾರಲ್ಪಟ್ಟ ವಸ್ತುವು ಆತನ ಸ್ವಂತ ಜವಾಬ್ದಾರಿ ಮತ್ತು ಪ್ರಾಮಾಣಿಕತೆಯನ್ನು ಆತುಕೊಂಡು ಮಾರಲಾಗಿದೆ. ಇದಕ್ಕೆ ಬೇರೆ ಯಾರಾದರೂ ನೇರವಾದ ಅಥವಾ ಆ ರೀತಿಯ ಅಭಿಪ್ರಾಯ ಮೂಡಿಸುವಂತಹ ಒಪ್ಪಂದ ಮಾಡಿಕೊಳ್ಳದ ಹೊರತು ಯಾರನ್ನೂ ಹೊಣೆಯಾಗಿಸಲಾಗದು. ಆ ಸಾಲದ ಸಲುವಾಗಿ ಆತನ ಆಸ್ತಿಯ ಮೇಲೆ (ಕುಟುಂಬದ ಭಾಗವು ಕಾನೂನು ಬದ್ಧವಾಗಿ ಕಾದಿರಿಸದ ಹೊರತು) ಈ ಹಿಂದೆ ಹಕ್ಕು ಇತ್ತು. ಆದರೆ ಆ ಕುಟುಂಬದ ಯಾವ ಸದಸ್ಯನಾದರೂ ಸ್ವಯಿಚ್ಛೆಯಿಂದ ಈ ಹಂಗನ್ನು ವಹಿಸಿಕೊಳ್ಳದ ಹೊರತು ಆತನ ಮರಣದಲ್ಲಿ ಇದು ಕೊನೆಗೊಳ್ಳುತ್ತದೆ. ನಾವು ಇದನ್ನು ಯಾತಕ್ಕಾಗಿ ಹೇಳುತ್ತೇವೆಂದರೆ, ಅನೇಕ ಬಡ ವಿಧವೆಯರು ಮತ್ತು ಅನಾಥ ಮಕ್ಕಳು ಮಾನವ ಕಾನೂನೂಗಳ ಪ್ರಕಾರ ಇಲ್ಲವಾದರೂ, ದೈವಿಕ ನಿಯಮದ ಪ್ರಕಾರ ತಾವು ತಮ್ಮ ಅಗಲಿದ ಪತಿ ಅಥವಾ ತಂದೆಯ ಸಾಲವನ್ನು ತೀರಿಸುವ ಹಂಗಿನಲ್ಲಿದ್ದೇವೆಂದು ತಿಳಿದು ಸಾಲವನ್ನು ತೀರಿಸಲು ಹಲವಾರು ವರ್ಷ ಹೆಣಗಿ ಇನ್ನೂ ಹೆಚ್ಚಿನ ದುಃಸ್ಥಿತಿಯನ್ನು ತಂದುಕೊಳ್ಳುತ್ತಿರುವ ಅನೇಕ ಪ್ರಕರಣಗಳ ಬಗ್ಗೆ ನಮಗೆ ತಿಳಿದುಬಂದಿದೆ.

ಈ ಪ್ರಶ್ನೆಯ ಮತ್ತೊಂದು ಭಾಗದ ಬಗ್ಗೆ ಕರ್ತನ ಸಮಾಲೋಚನೆಯು ಅಷ್ಟೇ ಸ್ಪಷ್ಟವಾಗಿದೆ. ತಮ್ಮ ಸಹೋದರರಲ್ಲಿ ಯಾರಾದರೂ ಅಗತ್ಯತೆಯಲ್ಲಿದ್ದಾರೆಂದು ತಿಳಿದು ಬಂದಲ್ಲಿ ಅವರು ಅವರಿಗೆ ಒಳ್ಳೆಯದನ್ನು ಮಾಡಬೇಕು ಮತ್ತು "ಪುನಃ ಯಾವುದನ್ನೂ ನಿರೀಕ್ಷಿಸದೆ ಎರವಲು ಕೊಡಬೇಕು". ಬದಲಾಗಿ ಯಾವುದೇ ಲಾಭದ ಅಥವಾ ಅನುಕೂಲದ ಆಶೆ ಇರಬಾರದು. ಆದಾಗ್ಯೂ, ನಾವು ಸಹೋದರರಿಗೆ 'ಎರವಲು' ನೀಡಬೇಕೆಂಬ ದೈವಾಜ್ಞೆಯು "ನಾವು ಸಾಲ ಪಡೆಯಬಾರದು" ಎಂಬ ಮತ್ತೊಂದು ದೈವಾಜ್ಞೆಯೊಂದಿಗೆ ಹೊಂದಿಕೆಯಾಗುತ್ತದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಹೀಗಾಗಿ ಈ ರೀತಿಯ ತೊಡಗಿಸುವಿಕೆಯು ಆ ಸಹೋದರನು ಸಂಪಾದನೆಯನ್ನು ಹೊಂದಿದ್ದು ಸಾಲ ತೀರಿಸಲು ಶಕ್ತನಾಗಿದ್ದಾನೆ, ಆದರೆ ತಾತ್ಕಾಲಿಕವಾಗಿ ಆತನಿಗೆ ಹಣದ ಅವಶ್ಯಕತೆಯುಂಟು ಮತ್ತು ಇದಕ್ಕಾಗಿ ಆತನು ಏನನ್ನಾದರೂ ಅಡವಿಡುತ್ತಾನೆ ಅಥವಾ ಸಾಲನೀಡುವವರಿಗೆ ಭದ್ರತೆ ಒದಗಿಸುತ್ತಾನೆ ಎಂಬ ಅಭಿಪ್ರಾಯ ನೀಡುತ್ತದೆ. ಆದರೆ, ಈ ರೀತಿಯಲ್ಲಿ ಸಹೋದರನೊಬ್ಬನಿಗೆ ಅವಶ್ಯಕತೆಯ ಸಮಯದಲ್ಲಿ ನೆರವು ನೀಡುವುದನ್ನು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಉಚಿತವಾಗಿ ಮಾಡಬೇಕು – ಯಾವುದೇ ಬಡ್ಡಿ/ಚಕ್ರಬಡ್ಡಿಯನ್ನು ನಿಗಧಿಪಡಿಸಬಾರದು. ಅಸಲನ್ನು ಮಾತ್ರವೇ ನಿಗಧಿತ ಅವಧಿಯಲ್ಲಿ ಹಿಂತಿರುಗಿಸುವಂತಿರಬೇಕು. ಇದು ಶುದ್ಧವಾಗಿ ಸಹೋದರ ಸ್ನೇಹವನ್ನು ಒದಗಿಸುವ ಮತ್ತು ವ್ಯಕ್ತಪಡಿಸುವ ಕಾರ್ಯವಾಗಿದೆ.

ಸಹೋದರನಿಗೆ ಸಾಲ ಮರುಪಾವತಿಮಾಡುವ ಸ್ಥಿತಿಗತಿ ಇಲ್ಲವಾದರೆ ಅಥವಾ ಯಾವುದೇ ಭದ್ರತೆಯನ್ನು ಒದಗಿಸಲು ಶಕ್ತಿಯಿಲ್ಲದವನಾದರೆ ಅಂಥವನಿಗೆ ಸಾಲ ನೀಡಬಾರದು. ಅದಕ್ಕೆ ಬದಲಾಗಿ, ನೀಡುವವರು ತಮ್ಮ ಸಾಮರ್ಥ್ಯಕ್ಕನುಸಾರವಾದ ಮೊತ್ತವನ್ನು, ಸಹೋದರನ ಅಗತ್ಯತೆಯ ಅನುಪಾತಕ್ಕೆ ಅನುಗುಣವಾಗಿ ಧರ್ಮಾರ್ಥವಾಗಿ ನೀಡಬಹುದು. ಸಹೋದರನು ಆ ಮೊತ್ತವನ್ನು ಹಿಂತಿರುಗಿಸಲು ನಿಶ್ಚಯಿಸಬಹುದು, ಆದರೆ ನಂತರದ ದಿನಗಳಲ್ಲಿ ಸಹೋದರನ ವ್ಯವಹಾರಗಳಲ್ಲಿ ನಿರ್ಧಾರಾತ್ಮಕವಾದ ಬದಲಾವಣೆಗಳು ಕಂಡುಬಾರದೇ ಇದ್ದಲ್ಲಿ ಆಗ ಆತನಿಗೆ ನೀಡಿದ್ದು ಬಹುಮಾನ ಸ್ವರೂಪದ ಹಣ ಎಂಬುದನ್ನು ಒತ್ತಿಹೇಳಬೇಕು. ಆತನು ನಿಶ್ಚಯವಾಗಿ ಹಿಂತಿರುಗಿಸುವ ಮಟ್ಟಿನ ಧಾರಾಳವಾದ ಸಾಮರ್ಥ್ಯವನ್ನು ಪುನಃ ಪಡೆಯುವಲ್ಲಿ ಪಡೆದ ಹಣವನ್ನು ಹಿಂತಿರುಗಿಸುವ ಬಯಕೆ ಆತನ ಹೃದಯದಲ್ಲಿ ತಾನಾಗಿಯೇ ಉಂಟಾಗುತ್ತದೆ. ಹೀಗಿದ್ದರೂ, ನೀಡುವಾತನು ವ್ಯಯಮಾಡುವ ಸಾಮರ್ಥ್ಯಹೊಂದಿರುವಲ್ಲಿ ಆತನು ಆ ಸಹೋದರನಿಗೆ "ನನಗೆ ಆ ಹಣವನ್ನು ವಾಪಾಸ್ಸು ಪಡೆಯುವಲ್ಲಿ ಸಂತೋಷವಿಲ್ಲ; ಆದುದರಿಂದ ನಾನು ನಿನ್ನಲ್ಲಿ ವಿನಂತಿ

ಮಾಡಿಕೊಳ್ಳುವುದೇನೆಂದರೆ, ನೀನು ಆ ಹಣವನ್ನು ಅಗತ್ಯವಿರುವವರೆಂದು ನಿನಗೆ ಕಂಡುಬರುವ ಯಾರಿಗಾದರೂ ಈಗ ಅಥವಾ ಮುಂದೆ ಯಾವಾಗಲಾದರೂ ಇದನ್ನು ಕೊಟ್ಟುಬಿಡು" ಎಂದು ಹೇಳಬಹುದು. ಹೇಗೂ ಯಾರಾದರೂ ಸಹೋದರನು ತನ್ನ ವ್ಯಾಪಾರದ ಅಭಿವೃದ್ಧಿಗಾಗಿ ಮತ್ತು ಲಾಭಗಳಿಸುವ ಉದ್ದೇಶದಿಂದ ಹಣಪಡೆಯಲಿಚ್ಛಿಸಿದಲ್ಲಿ, ಆಗಿನ ಸಂಗತಿಯೇ ಬೇರೆ. ಅಂಥವರಿಗೆ ಸಾಲನೀಡುವಾಗ, ವಿಪುಲವಾದ ಭದ್ರತೆ, ಮತ್ತು ಬಡ್ಡಿ ಪಡಕೊಳ್ಳುವುದು ನ್ಯಾಯಸಮ್ಮತವಾಗುತ್ತದೆ. ಅಂತಹ ಬಡ್ಡಿಯು ದುರ್ಭರ ಅಥವಾ ತಪ್ಪಾದ ಅರ್ಥದಲ್ಲಿ ದುಬಾರಿ ಬಡ್ಡಿಯೆನಿಸದು. ಇದು ಕರ್ತನು ತನ್ನ ಸಾಮ್ಯವೊಂದರಲ್ಲಿ ಹೇಳಿದ "ಹಾಗಾದರೆ, ನೀನು ನನ್ನ ಹಣವನ್ನು ಸಾಹುಕಾರರಲ್ಲಿ ಬಡ್ಡಿಗೆ ಹಾಕಬಹುದಿತ್ತು. ನಾನು ಬಂದು ನನ್ನದನ್ನು ಬಡ್ಡಿಸಹಿತ ಪಡಕೊಳ್ಳುತ್ತಿದ್ದೆನು" (ಮತ್ತಾಯ 25:27)ಎಂಬ ಮಾತುಗಳೊಂದಿಗೆ ಹೊಂದಿಕೆಯಾಗುತ್ತದೆ.

ಈ ಪ್ರತಿಬಂಧಕಾಜ್ಞೆಗಳಿಗೆ ಪೂರ್ಣವಾಗಿ ಒಪ್ಪುವಂತೆ, ದೇವಗ್ರಂಥವು ನೂತನ ಸೃಷ್ಟಿಗಳು ಮಾತ್ರವಲ್ಲ ಸಾಮಾನ್ಯವಾಗಿ ಲೋಕದವರೆಲ್ಲರೂ ಯಾವಾಗಲೂ ಗಮನಿಸಬಹುದಾದ ಮತ್ತು ಲಾಭದಾಯಕವಾದ ಮತ್ತೊಂದು ಎಚ್ಚರಿಕೆಯ ಮಾತನ್ನು ನೀಡುತ್ತದೆ – "ನೆರೆಯವನಿಗಾಗಿ ಕೈಮೇಲೆ ಕೈಹಾಕಿ ಹೊಣೆಯಾದವನು ಬುದ್ಧಿಹೀನನೇ ಸರಿ" (ಜ್ಞಾನೋಕ್ತಿ 17:18). ಈ ಸಲಹೆಯ ಪ್ರಕಾರ, ಇತರರಿಗೆ ಹೊಣೆಗಾರನಾಗುವುದು ಇಲ್ಲವೆ ಭದ್ರತೆಯೊದಗಿಸುವುದು, ಯಾವುದೇ ಟಿಪ್ಪಣಿಗಳಿಗೆ ಷರಾ ಬರೆಯುವುದು ಇವೇ ಮುಂತಾದವುಗಳನ್ನು ತಡೆಹಿಡಿಯಬೇಕು. ದೇವರ ಈ ನಿಯಮವನ್ನು ಜಾಗರೂಕತೆಯಿಂದ ಪಾಲಿಸುವುದು ಆತನ ಎಲ್ಲಾ ಜನರಿಗೆ ವಿವೇಕಯುತವಾದುದು. ಯಾವುದೇ ಅಂತಹ ಅತ್ಯಗತ್ಯವಾದ ತುರ್ತು ಪರಿಸ್ಥಿತಿಯಲ್ಲಿಯೂ, ಸಹೋದರನು ಕರಾರು ಪತ್ರವೊಂದನ್ನು ನೀಡಲೇಬೇಕಾದ ಅತ್ಯಗತ್ಯತೆ ಉಂಟಾದಾಗಲೂ ಅದರಲ್ಲಿನ ಶರತ್ತುಗಳನ್ನು ನಿಭಾಯಿಸುವಲ್ಲಿ ಯಾವುದೇ ವಿಪತ್ಕಾರಿ ಸಂಗತಿಗಳನ್ನು ಎದುರಿಸಬಹುದಾದ ಹಂಗುಗಳು ಇಲ್ಲದಿರುವಂತೆ ನೋಡಿಕೊಳ್ಳಬೇಕು. ಒಬ್ಬರು ಸಹೋದರನೊಬ್ಬನಿಗೆ ನೀಡಲು ಇಚ್ಛಿಸುವ ಮೊತ್ತಕ್ಕೆ, ಅಥವಾ ಅಗತ್ಯತೆಯ ಸಂದರ್ಭದಲ್ಲಿ ಹಣ ನೀಡುವುದಾದಲ್ಲಿ ಆಗ ಮಾತ್ರವೇ ಕರಾರು ಪತ್ರವಾಗಲೀ, ಭದ್ರತೆಯಾಗಲೀ ಸೇರಿಸಿಕೊಳ್ಳಬಹುದು, ಇಲ್ಲವಾದರೆ ಇಲ್ಲ–ಯಾರೊಬ್ಬರ ಸ್ವಂತ ಸಾಲದ ಗಂಡಾಂತರಕ್ಕಾಗಿಯಾಗಲೀ, ಅಥವಾ ಒಬ್ಬರ ವ್ಯಾಪಾರಿ ಸಂಬಂಧಿ ಗಂಡಾಂತರಕ್ಕಾಗಲೀ ಇಲ್ಲವೇ ಒಬ್ಬರ ಸ್ವಂತ ಕುಟುಂಬದ ಶಕ್ತಿ ಕುಂದಿಸುವಿಕೆಗಾಗಿ ಅಲ್ಲ. –(ಜ್ಞಾನೋ.22:27. 11:15,6:1–5 ಇವುಗಳೊಂದಿಗೆ ಹೋಲಿಸಿರಿ).

ವಿಶೇಷವಾಗಿ ಗೃಹೋಪಯೋಗಿ ವಸ್ತುಗಳಾದ ಸಾಬೂನು, ಸಕ್ಕರೆ, ಟಬ್, ಇತ್ಯಾದಿ ವಿವಿಧ ಉಪಕರಣಗಳನ್ನು ಸಾಲ ಪಡೆಯುವ ಮತ್ತು ನೀಡುವ ಚಿಲ್ಲರೆ ಹವ್ಯಾಸ ಅನೇಕರಲ್ಲಿ ರೂಢಿಯಲ್ಲುಂಟು. ಇದರ ಬಗ್ಗೆ ಆಲೋಚಿಸಬೇಕಾದ ಅವಶ್ಯಕತೆ ಇದೆ. ಸ್ವಸ್ಥತೆಯುಳ್ಳ ಆತ್ಮನ ನಿಯಂತ್ರಣದಲ್ಲಿರುವ ನೂತನ ಸೃಷ್ಟಿಗಳು ತಮ್ಮ ಹೃದಯಗಳಲ್ಲಿ ಅಂತಹ ಚಿಲ್ಲರೆ ಕಿರುಕುಳಗಳನ್ನು ಜರೆಯಬೇಕು. ಅವರು ತಮ್ಮ ಸ್ವಂತ ವಿಷಯಗಳನ್ನು ನಿಶ್ಚಯವಾಗಿ ಕ್ರಮಪಡಿಸಿಕೊಂಡು ಬಹಳ ಅಪರೂಪವಾಗಿ ಉತ್ಕಟವಾದ ಅಗತ್ಯತೆ ಬಿದ್ದಾಗ ಮಾತ್ರವೇ – ಅಂದರೆ, ತೀವ್ರ ಕಾಯಿಲೆಗೆ ತುತ್ತಾದಾಗ ಅಥವಾ ಅಂತಹುದೇ ಧಾರುಣ ಪರಿಸ್ಥಿತಿ ಎರಗಿ ಬಂದಾಗ ಮಾತ್ರವೇ ಅಂತಹ ಸಾಲಗಳನ್ನು ಪಡೆದುಕೊಳ್ಳಬಹುದು. ಇತರರ ತೊಂದರೆಗಳನ್ನು ಸಾಧ್ಯವಾದ ಮಟ್ಟಿಗೆ ಕಡಿಮೆ ಮಾಡುವುದೇ ದೇವ ಭಕ್ತರೆಲ್ಲರ ನಿರ್ಧಾರದ ಭಾಗವಾಗಿರಬೇಕು. ಆದುದರಿಂದ, ಅವರುಗಳು ತಮ್ಮ ವಿಷಯದಲ್ಲಿ ಸೂಕ್ತವಾದ ಗಮನ ಹರಿಸುವಲ್ಲಿ ನಿರ್ಲಕ್ಷ್ಯ ತೋರಿದಲ್ಲಿ ಅವರ ಆಹಾರದಲ್ಲಿ ಬೆಣ್ಣೆಯು ಕೊರತೆಯಾಗಬಹುದು, ಆದರೆ ಅವರು ಅದಿಲ್ಲದೇ ಸುಧಾರಿಸಬೇಕೇ ಹೊರತು ಅದಕ್ಕಾಗಿ ನೆರೆಯವರನ್ನು ಪೀಡಿಸಿ ಒಂದು ಕೆಟ್ಟ ಉದಾಹರಣೆಯನ್ನು ಹುಟ್ಟಿಹಾಕುವುದಲ್ಲ. ಅವರ ಬಳಿ ಒಂದೇ ಒಂದು ಲಘುವಾದ ಇಸ್ತ್ರಿಪೆಟ್ಟಿಗೆ ಇರುವುದಾಗಿದ್ದು, ಹೊಸದನ್ನು ಕೊಂಡುಕೊಳ್ಳುವ ಸಾಮರ್ಥ್ಯವಿಲ್ಲವಾದಲ್ಲಿ ಅವರು ಪರಿಣಾಮಗಳಿಗೆ ಬದ್ಧರಾಗಿ ಆ ಒಂದರಲ್ಲಿಯೇ ಸುಧಾರಿಸಬೇಕು.

ತಮ್ಮ ಸ್ವಂತ ಸಂಗತಿಗಳಿಗೆ ಸಂಬಂಧಿಸಿದಂತೆ ಅಂಥಹ ಕಟ್ಟುನಿಟ್ಟಿನ ಕಟ್ಟುಪಾಡುಗಳನ್ನು ಪಾಲಿಸುವವರು ತಮ್ಮ ನೆರೆಯುವನು ತಮ್ಮ ಬಳಿಗೆ ಸಾಲ ಕೇಳಲು ಬಂದಾಗ ಸ್ವಾಭಾವಿಕವಾಗಿ ಇತರರಿಗಿಂತ ಹೆಚ್ಚು ಕಿರುಕುಳವನ್ನು ಅನುಭವಿಸುವರು. ಪರಂತು ದೇವಜನರು ನೀಡುವಂತವರಾಗಿರಬೇಕೇ ಹೊರತು ಸಾಲ ಪಡೆಯುವವರಲ್ಲ; ನಮ್ಮ ಬುದ್ಧಿಮಾತೇನೆಂದರೆ, ಎಲ್ಲಾ ವಿವೇಚನಾಪೂರ್ವಕವಾದ ನಿಗ್ರಹಗಳಲ್ಲಿ ದೇವಜನರು ಈ ಎರಡೂ ಸಂಗತಿಗಳಲ್ಲಿಯೂ ವಿಶಿಷ್ಟತೆಯ ಪ್ರಸಿದ್ಧತೆಯನ್ನು ಹೊಂದಿರಬೇಕು ಅವರು ಸದಾ ನೀಡಲು ಮನಃಪೂರ್ವಕವಾಗಿ ಮತ್ತು ಸಂತೋಷವಾಗಿ ಹಾಗೂ ಒಳ್ಳೆಯ ಚಿತ್ತದೊಡನೆ ಸಿದ್ಧರಿರಬೇಕು ಮತ್ತು ಅವರು ಕಳೆದುಕೊಳ್ಳಲು ಶಕ್ತರಿರುವ ಮಟ್ಟಿಗೆ ಮೆಚ್ಚಿಸುವ ಮತ್ತು ಹೊಂದಿಸಿಕೊಳ್ಳುವ ಆಕಾಂಕ್ಷೆ ಯುಳ್ಳವರಾಗಿರಬೇಕು – ಮತ್ತು ಸಾಲಪಡೆಯುವ ಇಚ್ಛೆಯಿಲ್ಲದವರಾಗಿರಬೇಕು. ಅಂತಹ ವ್ಯಕ್ತಿಗಳ ಬಗ್ಗೆ ಅವರು ದೇವರ ಭಕ್ತಿ ಮತ್ತು ಆತನ ಮಾತುಗಳ ಬಗ್ಗೆ ಶ್ರದ್ಧೆಯಿರುವ ಅಥವಾ ಇಲ್ಲದಿರುವ "ವಿಚಿತ್ರ ವ್ಯಕ್ತಿಗಳು' ಎಂಬ ಆಲೋಚನೆಯಿದ್ದರೂ ಸ್ವೀಕಾರಾರ್ಹವಾಗಿ ಅವರನ್ನು "ಒಳ್ಳೆಯ ನೆರೆಯವರು' ಎಂದು ಪರಿಗಣಿಸಲಾಗುವುದು. ನಿಜವಾಗಿ, ವಸ್ತುಗಳನ್ನು ಪಡೆದವರು ಸದಾ ಹಿಂತಿರುಗಿಸುವವರಾಗಿರುವುದಿಲ್ಲ, ಈ ಬಗ್ಗೆ ಮುಂದುವರೆಯುವುದು ತ್ರಾಸದಾಯಕ ಅಥವಾ ಆಹಾರವನ್ನು ಸಾಲವಾಗಿ ಪಡೆದುಕೊಳ್ಳುವುದರ ಬಗ್ಗೆ, ಅವರು ಅದನ್ನು ಎಂದಿಗೂ ಹಿಂತಿರುಗಿಸಲಾರರು. ಆದುದರಿಂದ ಅವರು ಆಹಾರವನ್ನು ಪಡಕೊಂಡರು ಮತ್ತು ಅದನ್ನು ತಿಂದರು, ಆದರೆ ಹಿಂತಿರುಗಿಸುವಲ್ಲಿ ಸೋತುಹೋದರು ಎಂಬುದಾಗಿ ನಾವು ಪ್ರತಿಬಿಂಬಿಸ ಬೇಕು. ಅಂಥವರು ಮತ್ತೊಮ್ಮೆ ಹೆಚ್ಚು ಕೇಳಲು ಬರುವುದು ವಿರಳ. ಸಂಧರ್ಭಗಳು ಅನುಮತಿಸುವುದಾದರೆ, ನಾವು ಅಂಥವರಿಂದ ಅವರು ಪಡೆದುದನ್ನು ಕೇಳದೇ ಇರುವುದು ಒಳ್ಳೆಯದು. ನಾವು ನಿಜವಾಗಿಯೂ ಇಂತಹ ಲೋಭಿ ಮತ್ತು ಅನೀತಿವಂತರ ಸಂಗಡ ಸ್ನೇಹ ಮಾಡುವ

ಅನುಕೂಲಕರ ಅವಕಾಶಗಳನ್ನು ಈ ಲೋಕದ ಕ್ಷುಲ್ಲಕ ಹಿತವನ್ನು ತ್ಯಾಗಮಾಡುವ ಉತ್ತಮ ಅವಕಾಶಗಳೆಂದು ಪರಿಗಣಿಸಿ ಇವುಗಳ ಮೂಲಕ ನಾವು ನಮ್ಮ ನೆರೆಯವರೊಡನೆ ಹೆಚ್ಚಿನ ನೈತಿಕ ಮತ್ತು ಆತ್ಮೀಕ ಪ್ರಭಾವಗಳನ್ನು ಹೊಂದಿಕೊಳ್ಳಬಹುದು.

ನಾವು ಈ ಪ್ರಸ್ತಾಪವನ್ನು ವಿಚಾರ ಮಾಡುತ್ತಿರುವಾಗಲೇ ಸಾಮಾನ್ಯವಾಗಿ ಇದರೊಡನೆ ಸಂಬಂಧಿಸಿರುವ ಮತ್ತೊಂದು ವಿಚಾರದ ಬಗ್ಗೆಯೂ ಹೇಳಬಹುದಾಗಿದೆ. ಯಾವುದೆಂದರೆ, ಕೆಲವರಲ್ಲಿರುವಂತೆ ತಾವು ತಮ್ಮ ಸ್ನೇಹಿತರ ಬಳಿಗೆ ಭೇಟಿಕೊಡುವವರಂತೆ ಹೋಗಿ ನೆರೆಯವರ ಸಮಯವನ್ನು ಪಡಕೊಳ್ಳಲು ಮುಕ್ತರಾಗಿದ್ದೇವೆ ಎಂಬ ಹವ್ಯಾಸ. ಬಂದವರನ್ನು ಆದರಿಸುವುದು ದೇವಜನರಲ್ಲಿ ಇರಬೇಕಾದ ಪ್ರೀತಿಯ ಸರ್ವಸಾಮಾನ್ಯವಾದ ಸ್ಪೂರ್ತಿ. ಮತ್ತು ಈ ಮನೋಧರ್ಮವನ್ನು ಕರ್ತನಿಗೆ ಮೆಚ್ಚಿಗೆಯಾಗುವಂತೆ ಮತ್ತು ತಮ್ಮ ಸ್ವಂತ ಆತ್ಮೀಕ ಬೆಳವಣಿಗೆಗಾಗಿ ಪ್ರತಿಯೊಂದು ಸೂಕ್ತ ಸಮಯದಲ್ಲಿಯೂ ಬೆಳೆಸಿಕೊಳ್ಳಬೇಕು. – "ಅತಿಥಿ ಸತ್ಕಾರ ಮಾಡುವುದನ್ನು ಮರೆಯಬೇಡಿರಿ; ಅದನ್ನು ಮಾಡುವಲ್ಲಿ ಕೆಲವರು ತಿಳಿಯದೆ ದೇವದೂತರನ್ನೂ ಸತ್ಕರಿಸಿದ್ದಾರೆ " (ಇಬ್ರಿಯ 13:2) ಅವರು ತಮ್ಮ ಸ್ನೇಹಿತರನ್ನು, ನೆರೆಯವರನ್ನು ಒಂದು ಸಂದರ್ಭಗಳು ಅನುಮತಿಸುವಂತೆ ಊಟಕ್ಕಾಗಲೀ, ರಾತ್ರಿಗಾಗಲೀ ಉಪಚರಿಸಲು ಸಂತೋಷಿಸಬೇಕು. ಉಪಚರಿಸುವ ಹೃದಯಾಭಿಲಾಷೆ ಯಾವಾಗಲೂ ಅಂದರೆ ಅವಕಾಶವಿರುವಾಗಲೂ ಇಲ್ಲದಿರುವಾಗಲೂ ಕಂಡುಬರಬೇಕು. ಅತಿಥಿ ಸತ್ಕಾರವೆಂದರೆ ಒಬ್ಬರ ಸಾಮರ್ಥ್ಯಕ್ಕೂ ಮೀರಿದ ದುಬಾರಿ ವೆಚ್ಚವನ್ನೇನೂ ಸೂಚಿಸುವುದಿಲ್ಲ ಮತ್ತು ಬಂದ ಅತಿಥಿಗಳಿಗೆ ತಮ್ಮ ಸ್ವಂತ ಕುಟುಂಬಕ್ಕೆ ನೀಡುವುದಕ್ಕಿಂತ ಉತ್ತಮವಾದುದನ್ನು ನೀಡುವ ಅಗತ್ಯವಿಲ್ಲ. ನಮಗಿರುವುದನ್ನು ಮಾತ್ರವೇ ಇತರರೊಡನೆ ಹಂಚಿಕೊಳ್ಳುವ ಇಚ್ಛೆಯನ್ನು ಇದು ಸೂಚಿಸುತ್ತದೆ.

ಆದರೆ, ನಾವು ಈ ಪ್ರಶ್ನೆಯ ಮತ್ತೊಂದು ಮಗ್ಗಲನ್ನು ನೋಡೋಣ. ನೂತನ ಸೃಷ್ಟಿಯ ದೇವ ಪ್ರೇಷಿತ ಜನರು ಎಂದಿಗೂ ಅಕ್ರಮ ಪ್ರವೇಶಿಸುವವರಾಗಿರಬಾರದು. ಅವರು ಊಟವೊಂದಕ್ಕೆ ಅಥವಾ ರಾತ್ರಿಯ ಉಪಚಾರಕ್ಕೆ ಹೋಗುವ ಮೊದಲು ಅದಕ್ಕಾಗಿ ತಮಗೆ ಸಕರಾತ್ಮಕವಾದ ಆಹ್ವಾನವನ್ನು ನೀಡಲಾಗಿದೆ ಎಂಬುದನ್ನು ಮೊದಲು ಖಚಿತಪಡಿಸಿಕೊಳ್ಳಬೇಕು. ಪುನರುತ್ಥಾನಗೊಂಡ ನಮ್ಮ ಕರ್ತನು ಎಮ್ಮಾಹುವಿನ ಹಾದಿಯಲ್ಲಿ ತನ್ನ ಶಿಷ್ಯರೊಡನೆ ನಡೆದು ಹೋದಾಗ ಈ ತತ್ವವನ್ನು ಎಷ್ಟು ಸುಂದರವಾಗಿ ಚಿತ್ರಿಸಿದ್ದಾನೆ! ಆತನಿಗೆ ಆ ಶಿಷ್ಯರೊಂದಿಗೆ ಅವರ ಮನೆಗೆ ಹೋಗುವ ಅವರೊಡನೆ ಸಾಯಂಕಾಲದ ಊಟ ಸ್ವೀಕರಿಸುವ ಮತ್ತು ಅದೇ ಸಮಯದಲ್ಲಿ ಅವರೊಡನೆ ಇನ್ನೂ ಅಧಿಕವಾದ ಆಶೀರ್ವಾದಗಳನ್ನು ಹಂಚಿಕೊಳ್ಳುವ ಬಯಕೆ ಇತ್ತು. ಪರಂತು, "ಅವರು ಹೋಗುತ್ತಿರುವ ಹಳ್ಳಿಯ ಸಮೀಪಕ್ಕೆ ಬಂದಾಗ ಆತನು ಇನ್ನೂ ಮುಂದಕ್ಕೆ ಹೋಗುವವನಂತೆ ಕಾಣಿಸಿದನು"(ಲೂಕ 24:28) ಅವರು ಆತನನ್ನು ಬಲವಂತ ಮಾಡಿ ಕರೆಯುವವರೆಗೆ ಕಾದು ನಂತರದಲ್ಲಿ ಅವರೊಡನೆ ಹೋಗಲು ಒಪ್ಪಿಕೊಂಡನು. ಇದು ಕಪಟವಾಗಿರಲಿಲ್ಲ ಅಥವಾ ನಾವೂ ಹಾಗೆಯೇ ಮಾಡುವುದು ಕಪಟವೆನಿಸದು. ಅವರು ನಮ್ಮ ಕರ್ತನನ್ನು ಒತ್ತಾಯಪಡಿಸದಿದ್ದರೆ ಆತನು ಅವರೊಂದಿಗೆ ಉಳುಕೊಳ್ಳುತ್ತಿರಲಿಲ್ಲ. ನಾವು ಸಹಾ ಯಾರಾದರೂ ನಮಗೆ ಹೃತ್ಪೂರ್ವಕವಾದ ಆಹ್ವಾನ ನೀಡದ ಹೊರತು ಅವರಲ್ಲಿ ತಂಗಬಾರದು ಮತ್ತು ನಮ್ಮ ಪರಿಸ್ಥಿತಿ ಹೇಗೆಯೇ ಇರಲಿ ಅವರ ಆಹ್ವಾನ ಮುಂದುವರೆಯುವುದಕ್ಕಿಂತ ಹೆಚ್ಚು ಕಾಲ ಅಲ್ಲಿ ಉಳಿಯಬಾರದು.

ಕೆಲವರ ಮನಸ್ಸಿನಲ್ಲಿ ನೆಲೆಮಾಡಿರುವ ಕಲ್ಪನೆ ಏನೆಂದರೆ, ಅವರು ತಮ್ಮ ಸ್ವಾಭಾವಿಕ ಅಥವಾ ಆತ್ಮೀಕ ಸಂಬಂಧಿಗಳೊಡನೆ ತಂಗುವ ಸ್ವಾತಂತ್ರ್ಯ ಹೊಂದಿದ್ದೇವೆ ಎಂಬುದು. ಇದು ಮಹಾ ತಪ್ಪು. ಅಂತಹ ಯಾವುದೇ ಹಕ್ಕು ಇರುವುದಿಲ್ಲ. ನಮಗೆ ನೀಡುವ ಹಾಗೂ ಉದಾರತೆ ತೋರುವ ಹಕ್ಕು ಇದೆಯಾದರೂ ಅಂಥವುಗಳನ್ನು ಇತರರರಿಂದ ಕೇಳಿ ಪಡಕೊಳ್ಳುವ ಹಕ್ಕು ಇರುವುದಿಲ್ಲ. ಅದು ಅವರವರ ಸ್ವಂತವಾಗಿದ್ದು ಅದನ್ನೂ ನೀಡಲೂಬಹುದು ಇಲ್ಲವೆ ನೀಡದಿರಲೂಬಹುದು. ಅದರ ಬಗ್ಗೆ ಅವರೇ ಮನೆವಾರ್ತೆಯವರು. ನೂತನ ಸೃಷ್ಟಿಗಳು ತಮ್ಮನ್ನು ಐಹಿಕ ಸಂಗತಿಗಳ ಬಗ್ಗೆ ತಪ್ಪು ತಿಳಿದ ಸಹೋದರರು ಅಥವಾ ಸಂಬಂಧಿಗಳು ವರ್ಚಸ್ಸು ಬೀರುವಂತೆ ಎಷ್ಟರಮಟ್ಟಿಗೆ ಅನುಮತಿಸಬಹುದೆಂಬುದು ಹೆಚ್ಚಾಗಿ ಭೇಟಿಮಾಡುವವರ ದೈಹಿಕ ಮತ್ತು ಆರ್ಥಿಕ ಪರಿಸ್ಥಿತಿಗಳ ಮೇಲೆ ಆತುಕೊಂಡಿದೆ. ಹೇಗೂ ತನಗೂ, ಹಾಗೂ ಈ ಪ್ರಶ್ನೆಯ ಬಗ್ಗೆ ದೃಢ ಮನಸ್ಸಿಲ್ಲದೆ ತನ್ನನ್ನು ಸಂಧಿಸುವವರಿಗೆ ಮತ್ತು ಯಾರು ಈ ಭೇಟಿಯನ್ನು ಅಧಿಕೃತ ಭೇಟಿಯನ್ನಾಗಿ ಮಾಡುತ್ತಾರೋ ಅಂಥವರಿಗೆ ನ್ಯಾಯವುಂಟಾಗುವಂತೆ ಅವರನ್ನು ಉಪಚರಿಸುವವನು "ಬಹುಶಃ ನಿಮ್ಮನ್ನು ಹೆಚ್ಚುಕಾಲ ಉಳಿಸಿಕೊಳ್ಳುವ ಅನುಕೂಲತೆ ನಮ್ಮಲ್ಲಿ ಇಲ್ಲ ಎಂದು ನಾನು ನಿಮಗೆ ತಿಳಿಸಲೇಬೇಕಾಗಿದೆ" ಎಂದು ಸ್ಪಷ್ಟವಾಗಿ ಹೇಳಿಬಿಡಬೇಕು. ಅಥವಾ ಅಂತಹ ಜನರೊಡನೆ ವ್ಯವಹರಿಸಬಹುದಾದ ಮತ್ತೊಂದು ಉತ್ತಮ ರೀತಿಯೆಂದರೆ, ಅವರ ಭೇಟಿಯ ಪ್ರಾರಂಭದ ದಿನಗಳಲ್ಲಿಯೇ ಒಂದು ನಿಶ್ಚಿತ ದಿನದವರೆಗೆ ಮಾತ್ರವೇ ಅವರನ್ನು ತಮ್ಮಲ್ಲಿ ಉಳಿಸಿಕೊಳ್ಳಲು ಸಾಧ್ಯ ಎಂಬುದನ್ನು ಮುಚ್ಚುಮರೆಯಿಲ್ಲದೆ ಹೇಳಿ ಅವರನ್ನು ಒಂದು ಊಟಕ್ಕೋ, ಒಂದು ದಿನ ಅಥವಾ ವಾರದ ಮಟ್ಟಿಗೋ ಆಹ್ವಾನಿಸುತ್ತಿದ್ದೇವೆ ಎಂದು ಮುಂತಿಳಿಸಿ ಅವರಿಗೆ ಅವಧಿ ಕುರಿತು ಊಹಿಸುವದಕ್ಕೆ ಅವಕಾಶವಿಲ್ಲದಂತೆ ಮಾಡಬಹುದಾಗಿದೆ. ಇಂತಹ ಕ್ರಮವು ಮನೆಯ, ಕುಟುಂಬದ ಹಣದ ಬಂಡವಾಳ, ಒಬ್ಬರ ಸ್ವಂತ ಸಮಯ, ದೇವರ ಸೇವೆ ಮುಂತಾದವುಗಳ ಹಿತದೃಷ್ಟಿಯಲ್ಲಿ ಅಗತ್ಯವೆಂದು ಕಂಡುಬರುತ್ತದೆ. ಮತ್ತು ಈ ದೆಸೆಯಲ್ಲಿ ದೃಢವಾದ ತೀರ್ಮಾನವಿಲ್ಲದ ಹೆಚ್ಚಿನ ಜನರಿಗೆ ಹೀಗೆ ಮಾಡುವುದು ಸಹಾಯಕರ. ಆದರೆ ಯಾರೊಡನೆಯೂ ಕರುಣೆಯಿಲ್ಲದೆ ಈ ಬಗ್ಗೆ ಮಾತನಾಡುವುದು ಸರಿಯಲ್ಲ. ಅವರು ಈ ವಿಷಯದಲ್ಲಿ ನಿರ್ದಿಷ್ಟವಾಗಿ ನಮಗಿಂತ ಅಥವಾ ಇತರರಿಗಿಂತ ಹೆಚ್ಚು ದುರ್ಬಲರಾಗಿರಬಹುದು ಮತ್ತು ಬೇರೆ ನಿರ್ದಿಷ್ಟವಾದ ವಿಚಾರಗಳಲ್ಲಿ ಅವರಿಗಿಂತ ಹೆಚ್ಚು ನಾವು ದುರ್ಬಲರಾಗಿರಬಹುದು. ಯಾವುದೇ ಸಂಗತಿಗಳಲ್ಲಿ ನಾವು ದಯಾಪರರಾಗಿ, ಉದಾರತೆಯಿಂದ ಅವರನ್ನು ಗೌರವಿಸುವಂತೆ ಆಲೋಚಿಸಬೇಕು ಮತ್ತು ನಾವು ನಮ್ಮಿಷ್ಟಕ್ಕೆ ಅಡ್ಡಿಪಡಿಸಬಹುದಾದ ಯಾವುದೇ ಕ್ರಮವನ್ನು ಕೈಗೊಳ್ಳದಂತೆ ನಿರ್ಧರಿಸಬೇಕು.

## “ನಾಳಿನ ವಿಷಯವಾಗಿ ಚಿಂತೆಮಾಡಬೇಡಿರಿ” (ಮತ್ತಾಯ–6:34)

## "Take No Thought for the Morrow" -Matt. 6:34,19,20

ಕರ್ತನು ಮೇಲೆ ಹೇಳಿದ ಕಂಠೋಕ್ತಿ ಮತ್ತು ಆತನ ಮತ್ತೊಂದು ಪ್ರಕಟನೆಯಾದ “ಭೂಲೋಕದಲ್ಲಿ ಗಂಟು ಮಾಡಿ ಇಟ್ಟು ಕೊಳ್ಳಬೇಡಿರಿ.... ಆದರೆ ಪರಲೋಕದಲ್ಲಿ ಗಂಟುಮಾಡಿ ಇಟ್ಟುಕೊಳ್ಳಿರಿ” (6:20,21) ಎಂಬಿವುಗಳು ಆತನ ಅನೇಕ ನಿಷ್ಠಾವಂತ ಮತ್ತು ಅರ್ಥ ಪೂರ್ಣ ಅನುಯಾಯಿಗಳಿಂದಲೇ ಗುರುತರವಾದ ರೀತಿಯಲ್ಲಿ ತಪ್ಪಾಗಿ ಅರ್ಥೈಸಲಾಗಿವೆ. ಕೆಲವರು ನಾವು ಕೇವಲ “ಕೈಯಿಂದ ಬಾಯಿಗೆ” ಜೀವಿಸಬೇಕಾಗಿದೆ, ಭವಿಷ್ಯದ ಬಗ್ಗೆ ಆಲೋಚಿಸಬೇಕಾದುದು ಏನೂ ಇಲ್ಲ ಎಂದು ಕರ್ತನು ಹೇಳಿದ್ದಾನೆ ಎಂಬ ನಿರ್ಧಾರಕ್ಕೆ ಬಂದಿರುತ್ತಾರೆ. ಆದರೆ, ಇದಕ್ಕೆ ವ್ಯತಿರಿಕ್ತವಾಗಿ ನಾವು ನೋಡುವುದೇನೆಂದರೆ, ನಮ್ಮ ಪರಲೋಕದ ತಂದೆಯು ನಮ್ಮ ಮುಂದೆ ಅಂತಹ ಯಾವುದೇ ಉದಾಹರಣೆಗಳನ್ನು ಇಟ್ಟಿಲ್ಲ: ಆತನು ನಿರಂತರವಾಗಿ ನಮ್ಮ ಬಗ್ಗೆ ಚಿಂತಿಸುವವನಾಗಿದ್ದಾನೆ ಮತ್ತು ಅದೇ ರೀತಿಯಲ್ಲಿ ವಿವಿಧ ಕಾಲಗಳನ್ನು, ದವಸ ಧ್ಯಾನ್ಯಗಳನ್ನು, ತರಕಾರಿ ಮತ್ತು ಹಣ್ಣುಗಳನ್ನು ಕ್ರಮಬದ್ಧವಾಗಿ ವ್ಯವಸ್ಥೆ ಮಾಡಿರುತ್ತಾನೆ. ನಾವೂ ಕೂಡ ಇದೇ ರೀತಿಯ ತತ್ವಗಳನ್ನು ಗ್ರಹಿಸಿಕೊಳ್ಳಬೇಕೆಂದು ಆತನು ಬಯಸುವವನಾಗಿದ್ದಾನೆ. ಅದೇ ರೀತಿಯಲ್ಲಿ ಆತನು ಪ್ರಕೃತಿಯ ವ್ಯವಸ್ಥೆಯನ್ನು ಮಾಡಿದ್ದು ನಾವು ಮುಂದೆ ಉಣ್ಣುವಂತೆ ಸಕಾಲದಲ್ಲಿ ಬಿತ್ತಬೇಕು, ನೆಡಬೇಕು ಮತ್ತು ನಮಗೆ ಉಡುಪುಗಳು ಬೇಕಾದಲ್ಲಿ ಅವುಗಳಿಗಾಗಿ ನೇಯ್ಗೆ ಮಾಡಬೇಕು. ರಾತ್ರಿಯ ದೀಪಕ್ಕಾಗಿ ಹಗಲಿರುವಾಗಲೇ ಎಣ್ಣೆಯ ಸಿದ್ಧತೆ ಮಾಡಿಕೊಳ್ಳಬೇಕು. ಈ ತತ್ವಗಳು ಜೀವನದ ಎಲ್ಲಾ ಸಂಗತಿಗಳಿಗೂ ಅನ್ವಯವಾಗುತ್ತವೆ. ನಮ್ಮ ಕರ್ತನು ಪ್ರಕೃತಿಯಲ್ಲಿ ಕಂಡುಬರುವ ಈ ದೈವಿಕ ವ್ಯವಸ್ಥೆಗೆ ವಿರುದ್ಧವಾಗಿ, ಅಥವಾ ಅದನ್ನು ತೊಡೆದು ಹಾಕುವ ರೀತಿಯಲ್ಲಿ ಮೇಲಿನ ಹೇಳಿಕೆಗಳನ್ನು ಹೇಳಿದನೆಂಬ ಆಲೋಚನೆಗಳನ್ನು ನಾವು ತಿರಸ್ಕರಿಸತಕ್ಕದ್ದು.

ಹಾಗಾದರೆ, ಕರ್ತನ ಮೇಲಿನ ಮಾತುಗಳ ಅರ್ಥವೇನು? ಇದನ್ನು ನಾವು ಮೊದಲನೆಯ ಆಲೋಚನೆಯಾದ “ನಾಳಿನ ವಿಷಯವಾಗಿ ಚಿಂತೆಮಾಡಬೇಡಿರಿ... ಈ ಹೊತ್ತಿನ ಕಾಟ ಈ ಹೊತ್ತಿಗೆ ಸಾಕು” ಎಂಬುದರ ಬಗ್ಗೆ ಹೀಗೆ ಹೇಳುತ್ತೇವೆ–“ಕರ್ತನ ಜನರು ಭವಿಷ್ಯದ ಬಗ್ಗೆ ಚಿಂತಿಸಲೇಬಾರದು. ಅವರು ತಮ್ಮ ವ್ಯವಹಾರಗಳಲ್ಲಿ ಸೋಮಾರಿಗಳಾಗಿರಬಾರದು, ಆತ್ಮೀಕ ರೀತಿಯಲ್ಲಿ ಉತ್ಸಾಹವುಳ್ಳವರಾಗಿ ಕರ್ತನ ಸೇವೆ ಮಾಡುವವರಾಗಿರಬೇಕು”. ಗಿಡ ನೆಡುವಾಗ, ಬೀಜ ಬಿತ್ತುವಾಗ, ಕಳೆತೆಗೆಯುವಾಗ ಮತ್ತು ಅಗೆಯುವಾಗ ಅವರು ನಂಬಿಕೆಯಿಂದ ತಮ್ಮ ಎಲ್ಲಾ ಸಂಗತಿಗಳೂ ದೈವಿಕ ಮೇಲ್ವಿಚಾರಣೆಗೆ ಒಳಪಟ್ಟಿವೆ ಮತ್ತು ಕರ್ತನು ಎಲ್ಲ ಸಂಗತಿಗಳಲ್ಲಿ ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲವೂ ಒಳಿತಾಗುತ್ತವೆ ಎಂದು ವಾಗ್ದಾನ ಮಾಡಿದ್ದಾನೆ ಎಂಬುದನ್ನು ಗ್ರಹಿಸಿಕೊಳ್ಳಬೇಕು. ಅವರು ದೇವಪಾಲನೆಯ ಈ ಅಮೂಲ್ಯ ವಾಗ್ದಾನಗಳನ್ನು ಸಂಪೂರ್ಣವಾಗಿ ಅನ್ವಯಿಸಿಕೊಂಡಿರುವಾಗ ಅವರ ಹೃದಯವು ಎಲ್ಲಾ ಚಿಂತೆಗಳಿಂದ ಮುಕ್ತಗೊಳ್ಳುತ್ತದೆ.

ನಾವು ನಿರ್ಲಕ್ಷತೆ ಮತ್ತು ವ್ಯಾಕುಲಕರ ಚಿಂತೆ ಇವುಗಳ ಅಗಾಧವಾದ ಭಿನ್ನತೆಯನ್ನು ಗ್ರಹಿಸಬೇಕು. ನಮ್ಮ ಕರ್ತನು ನಾಳಿನ ದಿನದ ಬಗ್ಗೆ ನಿರ್ಲಕ್ಷತೆಯುಳ್ಳವನೂ, ಅಳತೆಗೆಟ್ಟವನೂ, ಅಪ್ರಯೋಜಕನೂ, ಆಲೋಚನೆ ರಹಿತನೂ ಆಗಿದ್ದರೆ ಆತನು ಸಹಸ್ರಾರು ಮಂದಿಗೆ ಉಣಬಡಿಸಿದ ಮೇಲೆ ತನ್ನ ಶಿಷ್ಯರಿಗೆ “ಮಿಕ್ಕಾದವುಗಳನ್ನು ಕೂಡಿಸಿರಿ” ಎಂದು ಹೇಳುತ್ತಿರಲಿಲ್ಲ. ಆದರೆ ಆತನು ಈ ಸಂದರ್ಭದಲ್ಲಿ ಮುಂದಿನ ಊಟದ ಬಗ್ಗೆ, ಮುಂದಿನ ದಿನದ ಬಗ್ಗೆ ಚಿಂತಿಸಬೇಕೆಂಬ ಔಚಿತ್ಯದ ಉತ್ತಮ ಉದಾಹರಣೆಯೊಂದನ್ನು ನೀಡಿದ್ದಾನೆ. ಆದರೆ, ಆತನು ಒಪ್ಪಿಸಿದ ಆ ಕಾರ್ಯವು ಒಂದು ವ್ಯಾಕುಲತೆಯ ಆಲೋಚನೆಯೇನಲ್ಲ. ಆ ಶಿಷ್ಯರುಗಳು ತಮ್ಮ ಕೈಗೆ ಒಪ್ಪಿಸಿದವುಗಳನ್ನು ವ್ಯರ್ಥಗೊಳಿಸದೆ ಉಪಯೋಗಿಸಬೇಕು. ಆದರೆ ಅವರ ತಪ್ಪಿಲ್ಲದೆ ಸರಬರಾಜು ನಿಂತು ಹೋದಲ್ಲಿ, ಮತ್ತು ಅದನ್ನು ತುಂಬಿಸುವ ಯಾವುದೇ ಮೂಲ ಸೌಕರ್ಯ ಅವರ ಬಳಿ ಇಲ್ಲದೇ ಇರುವಾಗ ಅವರು ಯಾವುದೇ ಚಿಂತೆಮಾಡದೆ ತಮ್ಮ ಕರ್ತನನ್ನು ನಿಸ್ಸಂದೇಹವಾಗಿ ನಂಬಬೇಕು. ತಮ್ಮ ಸಾಮರ್ಥ್ಯವನ್ನು ಕಳಕೊಳ್ಳಬೇಕಾದ್ದಿಲ್ಲ. ಇದೇ ಆಲೋಚನೆಯನ್ನು ನಾವು ಐಗುಪ್ತದಲ್ಲಿ ಯೋಸೇಫನ ಬಗ್ಗೆಯೂ ನೋಡಬಹುದು. ಅಲ್ಲಿ ದೇವರ ನಿರ್ದೇಶನದಂತೆ ಆತನು ಗೋಧಿಯ ಫಲವನ್ನು ಏಳುವರ್ಷಗಳ ಸುಭಿಕ್ಷ ಕಾಲದಲ್ಲಿ ಕೂಡಿಸಿಟ್ಟನು ಮತ್ತು ಅದೇ ರೀತಿಯಲ್ಲಿ ಮುಂದೆ ಬಂದ ಏಳು ವರ್ಷಗಳ ದುರ್ಭಿಕ್ಷಕಾಲದಲ್ಲಿ ಅದನ್ನು ಒದಗಿಸಿದನು.

ಎರಡನೆಯ ವಾಕ್ಯಭಾಗವು ಸಹಾ ದಿನನಿತ್ಯದ ಕಾರ್ಯಗಳಲ್ಲಿ – ಪ್ರಸ್ತುತ ಜೀವನದ ಆಸಕ್ತಿಗಳ ಬಗ್ಗೆ, ನಮ್ಮ ಕುಟುಂಬಗಳಿಗೆ ಬೇಕಾದವುಗಳನ್ನು ಒದಗಿಸುವ ಮುಂತಾದವುಗಳ ಬಗ್ಗೆ ಯಾವುದೇ ನಿರ್ಲಕ್ಷತೆಯನ್ನು ತೋರುವಂತೆ ಹೇಳುವುದಿಲ್ಲ. ಹಾಗಾದರೆ, ಇದು ಏನನ್ನು ಸೂಚಿಸುತ್ತದೆ? ಇದರ ಅರ್ಥ, ಈ ಲೋಕದ ಯಾವ ವಸ್ತುವೂ ನಮ್ಮ ಗಂಟು (ನಿಧಿ) ಆಗಿರಬಾರದು. ನಾವು ಪರಲೋಕದವುಗಳಿಗೆ ಹೆಚ್ಚಿನ ಆಧ್ಯತೆ ನೀಡುವವರಾಗಿರಬೇಕು. ಅವುಗಳ ಮೇಲೆ ನಮ್ಮ ಹೃದಯಗಳನ್ನು ಕೇಂದ್ರೀಕರಿಸಬೇಕು ಮತ್ತು ಅವುಗಳಲ್ಲಿ ನಾವು ನಿರಂತರವಾಗಿ ತೃಪ್ತಿಪಡಬೇಕು. ಈ ರೀತಿಯಲ್ಲಿ ನಾವು ಐಶ್ವರ್ಯವಂತರಾಗುವುದರಿಂದ ದೇವರ ವಾಗ್ದಾನಗಳ ಮೇಲಣ ನಂಬಿಕೆಯ ಮೂಲಕವಾಗಿ ನಮಗೆ ವಿಶ್ವಾಸದಿಂದೊಡ ಗೂಡಿದ ಆತ್ಮೀಕ ವಿಶ್ರಾಂತಿ ದೊರೆಯುತ್ತದೆ. ಈ ಲೋಕದವರಿಗೆ ನೂತನ ಸೃಷ್ಟಿಗಳು ವಿಶ್ವಾಸದ ಮೂಲಕ ಹೊಂದಿಕೊಳ್ಳುವ ಈ ರೀತಿಯ ಯಾವುದೇ ಮಹತ್ತರವಾದ ಹಾಗೂ ಅಮೂಲ್ಯವಾದ ಸಂಗತಿಗಳ ಬಗ್ಗೆ ತಿಳಿದಿರುವುದಿಲ್ಲ. ಒಬ್ಬ ಸಂಗೀತಗಾರನು ಹೀಗೆ ರಚಿಸಿದ್ದಾನೆ : “ Each heart will seek and love its own; My goal is Christ and Christ alone” "ಪ್ರತಿ ಹೃದಯವು ತನಗೆ ಬೇಕಾದುದನ್ನು ಹುಡುಕಿ ಪ್ರೀತಿಸುತ್ತದೆ; ನನ್ನ ಗುರಿಯಾದರೋ ಕ್ರಿಸ್ತನೇ ಮತ್ತು ಕ್ರಿಸ್ತನೊಬ್ಬನೇ.

ಕ್ರಿಸ್ತನನ್ನು ಆರಿಸಿಕೊಳ್ಳುವಲ್ಲಿ ನಾವು ಆತನನ್ನು ನಂಬುವವರಿಗೆ ವಾಗ್ದಾನ ಮಾಡಿರುವ ಆತನ ಮಹಿಮೆ, ಗೌರವ ಮತ್ತು ನಿರ್ಲಯತ್ವಗಳನ್ನು ಮಾತ್ರವೇ ಆರಿಸಿಕೊಂಡಿಲ್ಲ, ನಾವು ಪ್ರಸ್ತುತ ಸಮಯದ ಶ್ರಮೆಯನ್ನು, ವಿಶೇಷ ಪರೀಕ್ಷೆ ಮತ್ತು

ಶೋಧನೆಗಳನ್ನು ಮತ್ತು ಆತನ ಹೆಜ್ಜೆಜಾಡಿನಲ್ಲಿ ನಡೆಯುವವರಿಗೆ ದೊರೆಯುವ ಅನುಭವಗಳನ್ನು ಸಹಾ ಆರಿಸಿಕೊಂಡಿದ್ದೇವೆ. ಇವು ಆತನ ಬರಲಿರುವ ಮಹಿಮೆಗೆ ಅಗತ್ಯವಾದ ಶಿಕ್ಷಣ ಮತ್ತು ಸಿದ್ಧತೆಗಳಾಗಿವೆ. ಇದಕ್ಕೂ ಹೆಚ್ಚಾಗಿ, ಯಾರು ಕ್ರಿಸ್ತನನ್ನು ಈ ರೀತಿಯಾಗಿ ಬಯಸುತ್ತಾರೋ, ಯಾರು ಈ ರೀತಿಯಲ್ಲಿ ತಮ್ಮನ್ನು ಕರ್ತನಿಗೆ ಸಂಪೂರ್ಣವಾಗಿ ಪ್ರತಿಷ್ಠಿಸಿಕೊಳ್ಳುತ್ತಾರೋ ಅಂಥವರಿಗೆ ಈ ಲೋಕದಲ್ಲಿ ತಮ್ಮದೆಂದು ಕರೆಯಬಹುದಾದ ಯಾವುದೂ ಇರುವುದಿಲ್ಲ. ಅವರು ಈ ಲೋಕದವರಾಗಿದ್ದಾಗ, ಲೌಕಿಕರಾಗಿ ಅವರು ಈ ಲೋಕದ ಹಿತಾಸಕ್ತಿಗಳನ್ನು ತಮ್ಮ ಸ್ವಂತ ಸ್ವತ್ತೆಂದು ಗಣನೆಗೆ ತಂದುಕೊಳ್ಳುತ್ತಿದ್ದರು; ಆದರೆ, ಅವರು ಕರ್ತನವರಾದ ಮೇಲೆ ಅವರು ಎಲ್ಲವುಗಳ ಸಹಿತ ತಮ್ಮನ್ನೇ ಆತನಿಗೆ ಒಪ್ಪಿಸಿಕೊಟ್ಟರು. ಮನೆಗಳು, ಭೂಮಿ,ಮಕ್ಕಳು ಪತಿ, ಪತ್ನಿ, ಸಹೋದರರು, ಸಹೋದರಿಯರು – ಎಲ್ಲವುಗಳನ್ನು ನಿವೇದಿಸಿದರು, ಕರ್ತನಿಗೆ ಪ್ರತಿಷ್ಠೆಗೊಳಿಸಿದರು. ಆದುದರಿಂದ ಇವುಗಳಲ್ಲಿ ಯಾವುದೂ ಈಗ ನೂತನ ಸೃಷ್ಟಿಗಳ ಅಮೂಲ್ಯ ವಸ್ತುಗಳಲ್ಲ. ಒಬ್ಬ ಪುರುಷನು ತನ್ನ ಪತ್ನಿಯನ್ನು ಅಥವಾ ಒಬ್ಬ ಸ್ತ್ರೀ ತನ್ನ ಪತಿಯನ್ನು ಪ್ರೀತಿಸಬಾರದು, ಪರಸ್ಪರ ಅತಿಶಯವಾಗಿ ಮೆಚ್ಚಿಕೊಳ್ಳಬಾರದು ಎಂದು ಇದರ ಅರ್ಥವಲ್ಲ. ಅವರುಗಳು ತಮ್ಮ ಮಕ್ಕಳನ್ನು ಪ್ರೀತಿಸ ಬಾರದು ಮತ್ತು ಅವರ ಹೃದಯದ ಗುಣಲಕ್ಷಣಗಳನ್ನು ಅತಿಯಾಗಿ ಮೆಚ್ಚಿಕೊಳ್ಳಬಾರದು ಎಂಬುದಾಗಿಯೂ ಅಲ್ಲ. ಅವರು ಇನ್ನು ಮೇಲೆ ಪ್ರಕೃತಿಯ ಸೌಂದರ್ಯವನ್ನು ಮೆಚ್ಚಿಕೊಳ್ಳಬಾರದು ಎಂಬ ಅರ್ಥವೂ ಅಲ್ಲ. ಅವರು ತಮ್ಮ ಸ್ವಂತ ಮನೆಯನ್ನು ಅಥವಾ ಪ್ರಾಣಿಯೊಂದನ್ನು ಹೊಂದಬಾರದು ಎಂಬ ಅರ್ಥವೂ ಅಲ್ಲ. ಆದರೆ ಈ ಯಾವುದೇ ಲೌಕಿಕ ಸ್ವತ್ತುಗಳು ಇನ್ನು ಮುಂದೆ ಅವರ ಬಹು ಅಮೂಲ್ಯ ಆಸ್ತಿಗಳಾಗಿರುವುದಿಲ್ಲ ಅಥವಾ ಯಾವುದೇ ಅರ್ಥದಲ್ಲಿ ಅವುಗಳು– ಅವನು ಹತ್ತು ಸಾವಿರದಲ್ಲಿ ಧ್ವಜಪ್ರಾಯನು, ಅತ್ಯಂತ ಪ್ರಿಯವೆಂದು ಅಂಗೀಕರಿಸಿ ಕೊಂಡಿರುವ ಕರ್ತನೊಂದಿಗೆ ಸ್ಪರ್ಧಿಸಲಾರವು.

ಹಣವನ್ನು ಪ್ರೀತಿಸಲಾಗದು, ಗೌರವಿಸಲಾಗದು ಅಥವಾ ಪೂಜಿಸಲಾಗದು. ನಾವು ಅದರ ಗುಲಾಮರಾಗಲೀ, ಸೇವಕರಾಗಲೀ ಆಗಬೇಕಾದ್ದಿಲ್ಲ. ನಾವು ಸರ್ವಶಕ್ತನಾದ ಸೃಷ್ಟಿಕರ್ತನಿಗೆ ಮಕ್ಕಳಾಗಿಯೂ, ಸೇವಕರಾಗಿಯೂ ನಮ್ಮ ಸ್ವಾಮಿನಿಷ್ಠೆಯನ್ನು ತೋರಿದ್ದೇವೆ. ಹಣವು ಆತನ ಸೇವಕರಲ್ಲಿ ಒಬ್ಬನಂತಿದ್ದು ಆತನ ಸಲಕರಣೆಯಾಗಿದೆ. ಆದುದರಿಂದ ಆತನ ಮನೆವಾರ್ತೆಯವರಾದ ನಾವು ನಮ್ಮ ವಶಕ್ಕೆ ಬರಬಹುದಾದ ದೈವಾನುಗ್ರಹವೆಂದು ಅದನ್ನು ಗಣನೆಗೆ ತೆಗೆದುಕೊಳ್ಳಬೇಕು.

ಆದರೆ, ಒಬ್ಬ ಯೌವನಸ್ಥನು ಸ್ವಾಮಿಯ ಬಳಿಗೆ ಬಂದು "ನನಗೇನು ಕಡಿಮೆಯಾಗಿದೆ?" ಎಂದು ಪ್ರಶ್ನಿಸಿದ್ದು ಮತ್ತು ಕರ್ತನು ಆತನಿಗೆ "ನೀನು ಸಂಪೂರ್ಣನಾಗಬೇಕೆಂದಿದ್ದರೆ, ಹೋಗಿ ನಿನ್ನ ಆಸ್ತಿಯನ್ನು ಮಾರಿ ಬಡವರಿಗೆ ಕೊಡು; ಪರಲೋಕದಲ್ಲಿ ನಿನಗೆ ಸಂಪತ್ತಿರುವುದು. ನೀನು ಬಂದು (ನಿನ್ನ ಶಿಲುಬೆಯನ್ನು ಹೊತ್ತುಕೊಂಡು) ನನ್ನನ್ನು ಹಿಂಬಾಲಿಸು" (ಮತ್ತಾಯ 19:16–22) ಎಂದು ಹೇಳಲು ಆತನು ಬಹಳ ಆಸ್ತಿಯುಳ್ಳವನಾಗಿದ್ದುದರಿಂದ ಮೋರೆಬಾಡಿದವನಾಗಿ ದುಃಖದಿಂದ ಹೊರಟು ಹೋದದ್ದು ನಮಗೆ ನೆನಪಿನಲ್ಲಿಲ್ಲವೇ?. ಕರ್ತನ ಜನರೆಲ್ಲರೂ ಬಡವರಾಗಬೇಕಾದ ಅವಶ್ಯಕತೆಯನ್ನು ಇದು ಬೋಧಿಸುವುದಲ್ಲವೆ? ಎಂಬ ಪ್ರಶ್ನೆಗೆ ನಾವು "ಹೌದು'ಎಂದು ಉತ್ತರಿಸುತ್ತೇವೆ. "ಐಶ್ವರ್ಯವಂತನು ಪರಲೋಕರಾಜ್ಯದಲ್ಲಿ ಸೇರುವುದು ಕಷ್ಟ. ಐಶ್ವರ್ಯ ವಂತನು ದೇವರ ರಾಜ್ಯದಲ್ಲಿ ಸೇರುವುದಕ್ಕಿಂತ ಒಂಟೆಯು ಸೂಜಿಯ ಕಣ್ಣಿನಲ್ಲಿ* ನುಗ್ಗುವುದು ಸುಲಭ" (ಮತ್ತಾಯ 19:23,24) ಐಶ್ವರ್ಯವಂತರಿಗೆ ಪ್ರಸ್ತುತ ಜೀವನದಲ್ಲಿ ಒಳ್ಳೆಯವುಗಳ ಬಗ್ಗೆ ಅತಿಯಾದ ಆಶೆ ಇದ್ದೇ ಇರುತ್ತದೆ. ಅವುಗಳು ಅವರ ಹೃದಯಗಳನ್ನು ಆಕರ್ಷಿಸಿ ಅವರ ಆರಾಧ್ಯವೂ, ಅಮೂಲ್ಯ ವಸ್ತುವೂ ಆಗಿ ಬಿಡುತ್ತವೆ. ಆದುದರಿಂದ ಇವರು ಈ ವಿಷಯದಲ್ಲಿ ಬಡವರಿಗಿಂತ ಪೂರ್ಣ ಕೊರತೆಯುಳ್ಳ ಸ್ಥಾನದಲ್ಲಿರುತ್ತಾರೆ. ಈ ಲೋಕದ ಐಶ್ವರ್ಯವನ್ನು ಹೊಂದಿಲ್ಲದ ಬಡವರು ಕರ್ತನು ತನ್ನಲ್ಲಿ ನಂಬಿಕೆಯಿಟ್ಟು ನಿಷ್ಠೆಯುಳ್ಳವರಿಗಾಗಿ ಕಾದಿರಿಸಿರುವ ಪರಲೋಕದ ಮಹಾ ಸಂಪತ್ತಿನ ಕಡೆಗೆ ಗಮನವಿಟ್ಟು ಸಂತೋಷದಿಂದ ದೈವಕೃಪಾಪೂರಿತ ಶುಭಸಮಾಚಾರವನ್ನು ಆಸಕ್ತಿಯಿಂದ ಕೇಳಲು ಉತ್ತಮ ಸ್ಥಿತಿಯಲ್ಲಿರುತ್ತಾರೆ. ಯಾರೂ ಈ ಲೋಕದ ಸಂಪತ್ತನ್ನು ದುರುಪಯೋಗಪಡಿಸದೆ, ಪೂಜಿಸದೆ, ಆರಾಧಿಸದೆ, ಅವುಗಳು ತಮ್ಮ ಅಮೂಲ್ಯ ನಿಧಿಯೆಂದು ಪರಿಗಣಿಸದೆ ಹೊಂದಲು ಸಾಧ್ಯವಿಲ್ಲ ಎಂದು ಭಾವಿಸುವುದು ತಪ್ಪಾಗುತ್ತದೆ. ಈ ಲೋಕದ ಐಶ್ವರ್ಯಗಳ ಕೊರತೆಯುಳ್ಳವರು ಅವುಗಳನ್ನು ಪೂಜಿಸಲಾಗುವುದಿಲ್ಲ ಮತ್ತು ತಮ್ಮ ಅಮೂಲ್ಯ ನಿಧಿಯನ್ನಾಗಿ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಭಾವಿಸುವುದು ಸಹಾ ಅಷ್ಟೇ ತಪ್ಪಾಗುತ್ತದೆ. ಐಶ್ವರ್ಯವನ್ನು ಪ್ರತ್ಯಕ್ಷವಾಗಿ ಪೂಜಿಸುವ, ಅದಕ್ಕಾಗಿ ಹಂಬಲಿಸುವ, ಮತ್ತು ಅದಕ್ಕಾಗಿ ನಿರಂತರವಾಗಿ ಹೆಣಗದ, ಹಾಗೂ ಅವರ ಹೃದಯಗಳು ಗ್ರಹಿಸಿದಷ್ಟು ಪಡೆಯಲಾಗದಾಗ ಅತೃಪ್ತಿಗೊಂಡ ಬಡ ಜನರ ಬಗ್ಗೆ ಕೇಳರಿಯದವರು ಯಾರಿದ್ದಾರೆ?

ಕರ್ತನ ಬಳಿಗೆ ಬರುವವರೆಲ್ಲರೂ, ಅವರು ಈ ಲೋಕದ ಸಾಮಗ್ರಿಗಳ ಬಗ್ಗೆ ಬಡವರಾಗಿರಲಿ, ಐಶ್ವರ್ಯವಂತರಾಗಿರಲಿ ಅವರು ಸಂಪೂರ್ಣ ಪ್ರತಿಷ್ಠೆಯ ತಿಳುವಳಿಕೆಯೊಂದಿಗೆ, ಅವರ ಹೃದಯದ, ಚಿತ್ತದ ಮತ್ತು ಅವರು ಹೊಂದಿದ ಎಲ್ಲವುಗಳ ಪೂರ್ಣ ತ್ಯಾಗದೊಂದಿಗೆ ಬರಬೇಕು. ಇಲ್ಲವಾದಲ್ಲಿ ಅವರನ್ನು ಅಂಗೀಕರಿಸಲಾಗುವುದಿಲ್ಲ. ಕರ್ತನ ಬಳಿಗೆ ಬರುವ ಬಡ ಜನರು

---

* ಹಿಂದಿನ ಕಾಲದಲ್ಲಿ ಪೌರ್ವಾತ್ಯ ದೇಶಗಳ ದೊಡ್ಡ ನಗರಗಳಿಗೆ ದೊಡ್ಡ ಹೆಬ್ಬಾಗಿಲುಗಳಿದ್ದು ಅವುಗಳನ್ನು ಸೂರ್ಯಾಸ್ತದ ಸಮಯದಲ್ಲಿ ಮುಚ್ಚಲಾಗುತ್ತಿತ್ತು ಮತ್ತು ಬೆಳಗಿನವರೆಗೆ ಅದನ್ನು ತೆರೆಯಲು ಅನುಮತಿಯಿದ್ದಿಲ್ಲ. ಇಲ್ಲವಾದಲ್ಲಿ ಶತ್ರುಗಳು ಇದರ ಪ್ರಯೋಜನ ಪಡೆದು ಆಕ್ರಮಿಸಬಹುದಾದ ಸಂಭವಗಳಿರುತಿತ್ತು. ಆದರೆ, ಅದರ ಪಕ್ಕದಲ್ಲಿ ಸಣ್ಣ ಬಾಗಿಲುಗಳಿದ್ದು ಅವನ್ನು ಪಹರೆಯವರು ಕಾಯುತ್ತಿದ್ದರು. ಆ ಸಣ್ಣ ಬಾಗಿಲುಗಳ ಮೂಲಕ ಮನುಷ್ಯರು ಮತ್ತು ಅವರ ಒಂಟೆಗಳು ಹೊಕ್ಕಿ ಬರಬಹುದಾಗಿತ್ತು. ಆದರೆ ಒಂಟೆಗಳ ಮೇಲಿನ ಸರಕನ್ನು ಇಳಿಸಿ ಅವು ತಗ್ಗಿಕೊಂಡು ಆ ದ್ವಾರದೊಳಗೆ ನುಸುಳಿ ಮುಣಕಾಲೂರಿ ತೆವಳಿಕೊಂಡು ಬರಬೇಕಾಗುತ್ತಿತ್ತು. ಈ ಸಣ್ಣ ಬಾಗಿಲುಗಳನ್ನು "ಸೂಜಿಯ ಕಣ್ಣು' ಎಂದು ಕರೆಯುತ್ತಿದ್ದರು. ಈ ರೀತಿಯಲ್ಲಿ ಒಬ್ಬ ಶ್ರೀಮಂತನು ದೇವರ ಲೋಕವನ್ನು ಈ ಲೋಕದ ಐಶ್ವರ್ಯ ಸಂಪತ್ತುಗಳನ್ನು ಹೇರಿಕೊಂಡು ಪ್ರವೇಶ ಮಾಡಲಾಗದು. ಅವುಗಳನ್ನು ತೆಗೆದುಹಾಕಿ ತನ್ನನ್ನು ತಗ್ಗಿಸಿಕೊಂಡು, ಮೊಣಕಾಲ ಮೇಲೆ ತೆವಳಿಕೊಂದು ಪ್ರಯಾಸದಿಂದ ಪ್ರವೇಶಿಸಬೇಕಾಗುತ್ತದೆ.

ತಮ್ಮ ಊಹೆ ಮತ್ತು ಆಕಾಂಕ್ಷೆಗಳ ವಿಗ್ರಹಗಳನ್ನು. ತಾನಿನ್ನೂ ಗಳಿಸಲಾಗದ ಈ ಲೋಕದ ಸಂಪತ್ತಿನ ಬಗ್ಗೆ ಇರುವ ದುರಾಶೆಯನ್ನು ತೊರೆಯಬೇಕು. ಕರ್ತನ ಬಳಿಗೆ ಬರುವ ಶ್ರೀಮಂತನು ಸಹಾ ಅದೇ ರೀತಿಯಾಗಿ ತನ್ನ ಸಂಪೂರ್ಣ ಚಿತ್ತವನ್ನು ಶರಣಾಗಿಸಿಕೊಂಡು, ಈ ಹಿಂದೆ ತನ್ನ ಜೀವನದ ಉತ್ತಮ ಸಾಮರ್ಥ್ಯವೆನ್ನೆಲ್ಲಾ ಧಾರೆ ಎರೆದ ತನ್ನೆಲ್ಲಾ ಲೌಕಿಕ ಆಲೋಚನೆ ಮತ್ತು ಯೋಜನೆಗಳನ್ನು ತ್ಯಜಿಸಿದವನಾಗಿ ಬರಬೇಕು. ಆತನು ತನ್ನಲ್ಲಿರುವುದನ್ನು ತ್ಯಾಗಮಾಡುವುದು ಮಾತ್ರವಲ್ಲ, ಆತನು ನಿರೀಕ್ಷಿಸಿದ, ಆತನ ಗುರಿಯಾಗಿದ್ದ, ಮತ್ತು ಆತನು ಪಡೆಯಲು ಹಂಬಲಿಸುತ್ತಿದ್ದ ಎಲ್ಲವುಗಳನ್ನೂ ಸಹಾ ತ್ಯಾಗಮಾಡಬೇಕು –

ಎಲ್ಲವುಗಳನ್ನು ಕರ್ತನ ವೇದಿಯಮೇಲೆ ಸಮರ್ಪಿಸಬೇಕು. ಇಲ್ಲವಾದಲ್ಲಿ ಆತನು ಕರ್ತನ ಶಿಷ್ಯನಾಗಲು ಸಾಧ್ಯವಿಲ್ಲ. ಐಶ್ವರ್ಯವಂತನಾಗಿದ್ದ ಆ ಯೌವನಸ್ಥನು ಒಳ್ಳೆಯ ಮನೋವೃತ್ತಿ ಹೊಂದಿದನಾಗಿದ್ದರೆ ಖಂಡಿತವಾಗಿಯೂ ನಮ್ಮ ಕರ್ತನ ಮಾತುಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುತ್ತಿದ್ದ. ಆತನು ಕರ್ತನಿಗೆ –"ಸ್ವಾಮೀ, ನಾನು ನಿನ್ನ ಶರತ್ತುಗಳನ್ನು ಒಪ್ಪಿಕೊಳ್ಳುತ್ತೇನೆ; ನಾನು ನನ್ನಲ್ಲಿರುವುದೆಲ್ಲವನ್ನು ದೇವರ ಪ್ರತಿನಿಧಿಯಾದ ನಿನಗೆ ಒಪ್ಪಿಸುತ್ತೇನೆ. ನಿನ್ನ ಸೂಚನೆಗಳನ್ನು ನೆರವೇರಿಸುವಂತೆ ನಾನು ಯಾವ ರೀತಿಯಲ್ಲಿ ಮುಂದುವರೆಯಬೇಕು? ನಾನು ನನ್ನ ಎಲ್ಲಾ ದನಕರುಗಳನ್ನು, ನನ್ನ ಭೂಮಿಯನ್ನು ಮತ್ತು ಮನೆಗಳನ್ನು ಮಾರಿ ಬಿಡಬೇಕೋ? ಅವುಗಳಿಂದ ಬಂದ ಹಣವನ್ನೆಲ್ಲಾ ಬಡಬಗ್ಗರನ್ನು ಕರೆದು ಅವರ ಮುಂದೆ ಗಾಳಿಯಲ್ಲಿ ತೂರಬೇಕೋ? ಅಥವಾ ನಾನು ಯಾವ ರೀತಿಯಲ್ಲಿ ಮುಂದುವರೆಯಬೇಕು? ದಯಮಾಡಿ ನನಗೆ ಹೆಚ್ಚಿನ ಸೂಚನೆಗಳನ್ನು ನೀಡು"ಎಂದು ಬೇಡಿಕೊಂಡಿದ್ದರೆ ನಮ್ಮ ಕರ್ತನು ಆತನಿಗೆ ಖಂಡಿತವಾಗಿಯೂ ಈ ವಿಷಯವಾಗಿ ಇನ್ನೂ ಹೆಚ್ಚಿನ ವಿವರಗಳನ್ನು ತಿಳಿಸುತ್ತಿದ್ದ ಎಂದು ನಾವು ನಂಬುತ್ತೇವೆ.

ಕರ್ತನು ಈ ರೀತಿಯಾಗಿ ಅವನಿಗೆ ಹೇಳಬಹುದೆಂದು ನಾವು ಕಲ್ಪಿಸಬಹುದು –"ನೀನೀಗ ನಾನು ಬಯಸಿದ ಮಟ್ಟಕ್ಕೆ ತಲುಪಿರುವಿ, ನಾನೀಗ ಇನ್ನಷ್ಟು ನಿರ್ದಿಷ್ಟವಾಗಿ ನನ್ನ ದೈವಾಜ್ಞೆಯನ್ನು ನಿನಗೆ ವಿವರಿಸುತ್ತೇನೆ. ನೀನೀಗ ನಿನ್ನದೆಲ್ಲವನ್ನೂ ಕರ್ತನಿಗೆ ಪ್ರತಿಷ್ಠಿಸಿರುವಿ, ನಿನ್ನ ತಿಳುವಳಿಕೆಯ ಪ್ರಕಾರ ಉಪಯೋಗಿಸುವಂತೆ ಅವುಗಳನ್ನು ಆತನ ಚಿತ್ತಕ್ಕೆ ಒಪ್ಪಿಸಿಕೊಟ್ಟಿರುವಿ. ಆತನ ಚಿತ್ತವೇನೆಂದರೆ' ನೀನು ಆತನ ಮನೆವಾರ್ತೆಯವನಾಗಬೇಕು. ಕೇವಲ ಆಸ್ತಿಯನ್ನು ಕಾಪಾಡುವುದಕ್ಕಾಗಿ ಮಾತ್ರವೇ ಅಲ್ಲ, ಅದನ್ನು ನಿನಗೆ ಗೊತ್ತಿರುವ ಬುದ್ಧಿವಂತಿಕೆಯ ಮೇರೆಗೆ ವಿನಿಯೋಗಿಸುವಲ್ಲಿಯೂ, ಉಪಯೋಗಿಸುವಲ್ಲಿಯೂ ಸಹಾ ನೀನು ಆತನ ಮನೆವಾರ್ತೆಯವನಾಗಿರಬೇಕು. ನಾನು ನಿನಗೆ ನೀಡುವ ಸಲಹೆ ಏನೆಂದರೆ, ನೀನು ನಿನ್ನ ಬ್ಯಾಂಕಿನಲ್ಲಿಟ್ಟಿರುವ ಹಣವನ್ನು ತೆಗೆದು ಉಪಯೋಗಿಸುವುದರೊಡನೆ ಇದನ್ನು ಪ್ರಾರಂಭಿಸು. ನೀನು ಆಯ್ಕೆ ಮಾಡುವುದಾದರೆ, ಇದನ್ನು ನೀನು ನನ್ನ ಅಪೋಸ್ತಲರೊಡನೆ, ಅನುಯಾಯಿಗಳೊಡನೆ ಪ್ರಾರಂಭಿಸಬಹುದು. ನೀನು ಅವರಿಗೆ ಯಾವ ರೀತಿಯಲ್ಲಿ ಒಳ್ಳೆಯದು ಮಾಡಬಹುದೆಂಬುದನ್ನು ನೋಡಿಕೋ. ನೀನು ಆ ಹಣವನ್ನು ಉಪಯೋಗಿಸುತ್ತಿರುವಾಗಲೇ ನೀನು ನಿನ್ನ ಮನೆಯನ್ನು, ಇಲ್ಲವೆ ದನಕರುಗಳನ್ನು ಅಥವಾ ಕುರಿ ಹಿಂಡನ್ನು ಮಾರಿ ಅದರ ಸಂಪಾದನೆಯಿಂದ ದೇವರು ನಿನ್ನ ನಿಯಂತ್ರಣದಲ್ಲಿರಿಸಿರುವ ಸಂಗತಿಗಳಿಗೆ ಉಪಯೋಗಿಸಬಹುದು – ಆತನ ಮನೆವಾರ್ತೆಯವನಾಗಿ, ಎಲ್ಲವನ್ನೂ ಆತನಿಗೆ ಪ್ರತಿಷ್ಠೆ ಮಾಡಿರುವುದಾಗಿ ನಿರೀಕ್ಷಿಸಿ ಆತನು ಅಂತ್ಯದಲ್ಲಿ ನಿನ್ನಿಂದ ಲೆಕ್ಕ ಕೇಳಲಿರುವನು. ನೀನು ಪ್ರತಿಷ್ಠಿಸಿದವುಗಳನ್ನು ನಿನಗೆ ತಿಳಿದಂತೆ ಬುದ್ಧಿವಂತಿಕೆಯಿಂದಲೂ, ಸಮಗ್ರವಾಗಿಯೂ ಉಪಯೋಗಿಸಿದ್ದೇನೆಂದು ತೋರಿಸಲು ಶಕ್ತನಾದರೆ, ನೀನು "ಒಳ್ಳೆಯ ಹಾಗೂ ಪ್ರಾಮಾಣಿಕ ಸೇವಕನೇ, ನೀನು ಒಳ್ಳೆಯದನ್ನು ಮಾಡಿರುವಿ, ನಿನ್ನ ಕರ್ತನ ಸೌಭಾಗ್ಯದಲ್ಲಿ ಸೇರು ಎಂಬ ಆಶೀರ್ವಾದಕರ ಮಾತುಗಳನ್ನು ನಿರೀಕ್ಷಿಸಬಹುದು.

ನಮ್ಮದೆಲ್ಲವನ್ನೂ ಕರ್ತನಿಗೆ ಪ್ರತಿಷ್ಠೆಮಾಡುವುದೆಂದರೆ, ನಮ್ಮ ಎಲ್ಲಾ ಸಂಪತನ್ನೂ ಧಾರ್ಮಿಕ ಕಾರ್ಯಗಳಿಗೆ ಉಪಯೋಗಿಸಬೇಕೆಂಬ ಅರ್ಥವಲ್ಲ. ನಾವು ಕರ್ತನ ಮನೆವಾರ್ತೆಯವರಾಗಿ, ಆತನ ಮಾತುಗಳಿಂದ ಸೂಚನೆಗಳನ್ನು ಪಡೆದವರಾಗಿ ಆತನನ್ನು ಸಂಪ್ರೀತಿಗೊಳಿಸುವುದು ಯಾವುದೆಂದು ನಾವು ನಿರಂತರವಾಗಿ ಹುಡುಕಬೇಕು. ಅಲ್ಲಿ ನಮಗೆ ಆತನ ಮಹಿಮೆಪಡಿಸುವುದನ್ನು ಕಲಿಸಲಾಗಿದೆ. ನಾವು ಆತನನ್ನು ಮಹಿಮೆಪಡಿಸಲು ಬಯಸುವಾಗ ನಾವು ನಮ್ಮ ಧ್ವನಿಯನ್ನು ಮತ್ತು ಲೇಖನಿಯನ್ನು ಉಪಯೋಗಿಸುವುದು ಮಾತ್ರವಲ್ಲ, ನಮ್ಮೆಲ್ಲಾ ತಲಾಂತುಗಳನ್ನು ಉಪಯೋಗಿಸಲು ಪ್ರಯಾಸಪಡಬೇಕು. ನಾವು ಕರ್ತನವರಾಗಿರುವುದರಿಂದ, ನಮ್ಮ ಹಂಗುಗಳೆಲ್ಲವೂ, ನಾವು ಪ್ರತಿಷ್ಠೆಪಡಿಸುವ ಸಮಯ ಮತ್ತು ಆಸ್ತಿಯ ಮೇಲಿನ ಹಂಗುಗಳೇ ಆಗಿವೆ. ಉದಾಹರಣೆಗೆ, ಪತ್ನಿಯನ್ನು ಪಡಕೊಳ್ಳುವುದು ಎಂದರೆ, ಆಕೆಗೆ ಯುಕ್ತವಾದ, ಸೂಕ್ತವಾದ ಗಮನ ಹರಿಸುವುದು ಮತ್ತು ಆಕೆಯನ್ನು ಪೋಷಿಸುವುದು; ಅದೇ ರೀತಿಯಲ್ಲಿ ಮಕ್ಕಳು ಸಹಾ ನಾವು ಹೊಂದಿರುವ ಯಾವುದೇ ಆಸ್ತಿ, ಸಮಯ ಅಥವಾ ಬುದ್ಧಿಶಕ್ತಿಯ ಮೇಲೆ ಆಧಾರವಾಗಿದ್ದಾರೆ.

ನಾವು ಈ ಆಧಾರಗಳನ್ನು ಮಾನ್ಯಮಾಡಬೇಕು ಮತ್ತು ದಿನದಿಂದ ದಿನಕ್ಕೆ ಅವುಗಳ ಅಗತ್ಯತೆಗಳನ್ನು ಸಮಂಜಸವಾದ ರೀತಿಯಲ್ಲಿ ಸಲ್ಲಿಸಬೇಕೆಂಬುದು ದೇವರ ಚಿತ್ತವಾಗಿದೆ. ನಾವು ಕರ್ತನ ದ್ರವ್ಯಾನುಕೂಲತೆಗಳನ್ನು ವ್ಯರ್ಥಪಡಿಸದೆ ಅವುಗಳನ್ನು ಸಾಧ್ಯವಾದ ಮಟ್ಟಿಗೆ ಧಾರ್ಮಿಕ ಸತ್ಯಗಳನ್ನು ಪ್ರೋತ್ಸಾಹಿಸುವಂತೆ, ಮಹಾ ಸಂತೋಷದ ಉತ್ತಮ ಶುಭಸಮಾಚಾರಗಳು ಹರಡುವಂತೆ ಉಪಯೋಗಿಸಬೇಕೆಂಬುದನ್ನು ನಾವು ಮರೆಯಬಾರದು. ಇವುಗಳು ನರಳುವ ಸೃಷ್ಟಿಗಳಿಗೆ ನಮ್ಮ ಶ್ರೇಷ್ಠವಾದ ಭಾವನೆಗಳನ್ನು ಪ್ರತಿನಿಧಿಸುತ್ತವೆ. ನಾವು ಇಲ್ಲಿ ತಿಳಿಸಬಯಸುವ ಅಂಶವೇನೆಂದರೆ ಹೆಂಡತಿ, ಮಕ್ಕಳ ಅಥವಾ ವಯಸ್ಸಾದ ತಂದೆತಾಯಿಗಳ ಅಥವಾ ನಮ್ಮ ಮೇಲೆ ಆತುಕೊಂಡಿರುವ ಇತರರ ಪಾಲನೆಯು ನಾವು ನಮ್ಮ ಕರ್ತನಿಗೆ ಪ್ರತಿಷ್ಠಿಸಿದವುಗಳ ಭಾಗವನ್ನು ಯೋಗ್ಯವಾದ ರೀತೀಯಲ್ಲಿ ಉಪಯೋಗಿಸುವುದು. ಆದರೆ ನಮ್ಮ ಜೀವನದ ಪ್ರಮುಖ ಕಾರ್ಯಗಳಾದ ಸುವಾರ್ತೆಯನ್ನು ಪ್ರಚುರಪಡಿಸುವ, ದೇವರ ರಾಜ್ಯದ ಸುವರ್ತಮಾನವನ್ನು ಪ್ರಸರಿಸುವ ಕಾರ್ಯದಲ್ಲಿ ಯಾವುದೇ ದುಂದುಗಾರಿಕೆಗೆ ಅಥವಾ ವ್ಯರ್ಥವಾಗುವಿಕೆಗಳು ಪ್ರವೇಶಿಸಲು ನಾವು ಅವಕಾಶಕೊಡಬಾರದು.

ನಾವು ನಮ್ಮ ಕುಟುಂಬಗಳ ಪರಿಪಾಲನೆಗೆ ಅಗತ್ಯವಾದವುಗಳನ್ನು ದೋಚದಿರುವಂತೆ ಮಾತ್ರವಲ್ಲ, ಸ್ವಲ್ಪ ಮಟ್ಟಿಗೆ ಭವಿಷ್ಯದ ಬಗ್ಗೆಯೂ ಗಮನವಿಟ್ಟು ಅವರುಗಳಿಗೆ ಅಗತ್ಯವಾದವುಗಳನ್ನು ಒದಗಿಸುವಂತೆ ದೇವರ ವಾಕ್ಯವು ನಮಗೆ ಸೂಚಿಸುತ್ತವೆ. "ಇರುವೆಯ ಹತ್ತಿರ ಹೋಗಿ ಅದರ ನಡವಳಿಕೆಯನ್ನು ನೋಡಿ ಜ್ಞಾನವನ್ನು ತಂದುಕೋ" (ಜ್ಞಾನೋಕ್ತಿ 6:6) ಎಂಬ ಜ್ಞಾನಿಯ ಮಾತುಗಳನ್ನು ಗಮನವಿಟ್ಟು ಆಲಿಸಿರಿ. ಇರುವೆಯು ತನ್ನ ಪ್ರತೀಕ್ಷಿತ ಮರಿಗಳಿಗೆ ಸಾಕಷ್ಟು ಆಹಾರವನ್ನು ಕೂಡಿಸಿಡುವುದನ್ನು ನಾವು ನೋಡುತ್ತೇವೆ; ಅದರಂತೆ "ತಂದೆತಾಯಿಗಳು ಮಕ್ಕಳಿಗೋಸ್ಕರ ದ್ರವ್ಯವನ್ನು ಕೂಡಿಸಿಡುವುದು ಧರ್ಮ" (2 ಕೊರಿಂಥ 12:14) ಎಂಬುದಾಗಿ ಅಪೋಸ್ತಲನು ಹೇಳುತ್ತಾನೆ. ನಮ್ಮ ಸ್ವಾರ್ಥ ಮತ್ತು ಪತನಗೊಂಡ ಸ್ವಭಾವದ ಪ್ರವೃತ್ತಿ ಮತ್ತು ಧೋರಣೆಗಳಿಗನುಸಾರವಾಗಿ, ಬಹುಶಃ ಕೆಲವರಿಗೆ ಮಾತ್ರವೇ ಈ ದೆಸೆಯಲ್ಲಿ ವಿಪರೀತವಾಗಿ ವಿರುದ್ಧ ದಿಕ್ಕಿನಲ್ಲಿ ಮುಂದುವರೆಯದಂತೆ ಎಚ್ಚರಿಸಬೇಕಾದ ಅವಶ್ಯಕತೆ ಉಂಟಾಗುತ್ತದೆ. ಈ ವಿಷಯದ ಬಗ್ಗೆ ಮತ್ತೊಂದು ಆಲೋಚನೆಯು ನಮಗೆ ಈ ಮಾತುಗಳಲ್ಲಿ ದೊರೆಯುತ್ತದೆ – "ಎಲ್ಲರ ದೃಷ್ಟಿಯಲ್ಲಿ ಯಾವುದು ಗೌರವವಾದುದ್ದೋ ಅದನ್ನೇ ಯೋಚಿಸಿ ಸಾಧಿಸಿರಿ" (ರೋಮಾ.12:17) "ಯಾವನಾದರೂ ಸ್ವಂತ ಜನರನ್ನು, ವಿಶೇಷವಾಗಿ ತನ್ನ ಮನೆಯವರನ್ನು ರಕ್ಷಿಸದೆ ಹೋದರೆ ಅವನು ಕ್ರಿಸ್ತನ ನಂಬಿಕೆಯನ್ನು ತಿರಸ್ಕರಿಸಿದವನೂ ನಂಬದವನಿಗಿಂತ ಕಡಿಮೆಯಾದವನೂ ಆಗಿದ್ದಾನೆ" (1 ತಿಮೋಥೆ 5:8)

ಕೇವಲ ಅಸಮರ್ಪಕವೂ, ಮರಣಪಾತ್ರವೂ ಆದ ಸಣ್ಣ ಶರೀರವನ್ನು ಈ ಲೋಕದಲ್ಲಿ ಹುಟ್ಟಿಸುವುದಕ್ಕಿಂತ ಹೆಚ್ಚಾಗಿ ಪ್ರತಿಯೊಬ್ಬ ತಂದೆತಾಯಿಯೂ ತಮ್ಮ ಮಕ್ಕಳ ಜೀವಿತಕ್ಕೆ ಉತ್ತಮವಾದ ಪ್ರಾರಂಭವನ್ನು ನೀಡಲು ಬದ್ಧರಾಗಿದ್ದಾರೆಂಬ ಆಲೋಚನೆಯು ನಮಗೆ ಕಂಡುಬರುತ್ತದೆ. ಮಕ್ಕಳನ್ನು ಈ ಲೋಕಕ್ಕೆ ತಂದ ಮೇಲೆ, ಅವುಗಳು ಸಮಂಜಸವಾಗಿ, ಯೋಗ್ಯವಾದ ರೀತಿಯಲ್ಲಿ ಈ ಲೋಕದಲ್ಲಿ ನೆಲೆಗೊಳ್ಳುವಂತೆ ಮಾಡುವುದು ಆ ತಂದೆತಾಯಿಗಳ ಕರ್ತವ್ಯವಾಗಿದೆ. ಇದರಲ್ಲಿ ಕೇವಲ ಬಾಲ್ಯ ಮತ್ತು ಯೌವನ ಪ್ರಾಯದಲ್ಲಿ ಅವರಿಗೆ ಅಹಾರ, ವಸ್ತ್ರಾದಿಗಳನ್ನು ಒದಗಿಸುವುದು ಮಾತ್ರವಲ್ಲ ಅವರಿಗೆ ನಾವೀಗಾಗಲೇ ಉಲ್ಲೇಖಿಸಿರುವ ಬೌದ್ಧಿಕ ಮತ್ತು ನೈತಿಕವಾದ ಬೋಧನೆಗಳನ್ನು ನೀಡುವುದು ಸಹಾ ಸೇರಿದೆ; ಇವುಗಳೆಂದರೆ, ಮಕ್ಕಳ ಹಿತಕ್ಕಾಗಿ ಸ್ವಂತ ಬಳಕೆಯನ್ನು ಬದಿಗಿರಿಸುವುದು. ಜೀವನದ ಅನಿಶ್ಚಿತತೆಗಳನ್ನು ಕಂಡ ಮೇಲೆ, ತಮ್ಮ ಮಕ್ಕಳು ಪ್ರಭುದ್ಧತೆಗೆ ಬರುವ ಮುನ್ನ ತಂದೆತಾಯಿಗಳು ದುರದೃಷ್ಟವಶಾತ್ ತೀರಿಕೊಂಡಲ್ಲಿ ತಮ್ಮ ಕುಟುಂಬದವರಿಗೆ ಉಪಯೋಗಕ್ಕೆ ಬರುವಂತೆ ದೇವರ ವಾಕ್ಯದ ಎಚ್ಚರಿಕೆಯ ಮಾತುಗಳನ್ನು ಅನ್ವಯಿಸುವುದು ಅಸಮಂಜಸವೆನಿಸುವುದಿಲ್ಲ. ಈ ರೀತಿಯಲ್ಲಿ ಐಶ್ವರ್ಯ ಕೂಡಿಸಿಡುವುದು ಮುಂದೆ ಮಕ್ಕಳು ಕಿತ್ತಾಡುವುದಕ್ಕೆ, ಹಾನಿಗೆ ಕಾರಣವಾಗುತ್ತದೆ ಎಂದು ನಾವು ಯೋಚಿಸುವಂತೆ ಅಪೋಸ್ತಲನು ತಿಳಿಸಿಲ್ಲ. ಒಳ್ಳೆಯ ಕುಟುಂಬದಲ್ಲಿ ಜನಿಸಿ, ಉತ್ತಮವಾದ ವಿದ್ಯೆ ಮತ್ತು ಪ್ರವರ್ಧಮಾನಕ್ಕೆ ಬರುವಂತೆ ಉತ್ತಮ ಮಾರ್ಗದರ್ಶನ ಪಡೆದ ಮಕ್ಕಳು ಒಳ್ಳೆಯ ಸ್ಥಿತಿಗೆ ಬರುತ್ತಾರೆ, ಶ್ರೀಮಂತವಾದ ಪೂರ್ವಾಜಿತ ಆಸ್ತಿಯನ್ನು ತಾವೇ ಪಡಕೊಳ್ಳುತ್ತಾರೆ. ತಮ್ಮ ಮಕ್ಕಳಿಗೆ ಅಂತಹ ಒದಗಿಸುವಿಕೆಯನ್ನು ಮಾಡಿದ ತಂದೆತಾಯಿಗಳು, ಅವರು ಒಂದು ವೇಳೆ ತಮ್ಮ ಮಕ್ಕಳಿಗೆ ಒಂದು ಮನೆ ಅಥವಾ ಆಶ್ರಯದ ಹೊರತಾಗಿ ಹೆಚ್ಚಿನ ಯಾವುದೇ ಆಸ್ತಿ ಬಿಟ್ಟುಹೋಗದೇ ಇದ್ದರೂ ತಾವು ಈ ವಿಷಯದಲ್ಲಿ ಪವಿತ್ರಾತ್ಮನ ಮೂಲಕವಾಗಿ ಸ್ವಸ್ಥ ಮನಸ್ಸಿನಿಂದ ಆಳಲ್ಪಟ್ಟಿದ್ದೇವೆ ಎಂದು ಹೇಳಿಕೊಳ್ಳುವ ಕಾರಣವುಂಟು. ಇದು ದೇವರಿಂದ ಒಪ್ಪಿಗೆ ಪಡೆದ ಸರಿಯಾದ ಮನೋಧರ್ಮವಾಗಿದೆ. ಅಂತಹ ವ್ಯಕ್ತಿಗಳು ತಮ್ಮ ಮನೆವಾರ್ತೆತನವನ್ನು ಸರಿಯಾದ ರೀತಿಯಲ್ಲಿ ನೆರವೇರಿಸಿದ್ದಾರೆ ಮತ್ತು ಅಂತಹ ಮಕ್ಕಳು ಅಂತ್ಯದಲ್ಲಿ ಖಂಡಿತವಾಗಿಯೂ ಅವರ ಪ್ರಾಮಾಣಿಕತೆಯನ್ನು ಮೆಚ್ಚಿಕೊಳ್ಳುತ್ತಾರೆ.

## ಪರಸ್ಪರ ಸಹಾಯಕ್ಕಾಗಿ ಕಲ್ಯಾಣ ಸಂಸ್ಥೆಗಳು,ಇತ್ಯಾದಿಗಳು

## Organizations for Mutual Benefit, etc.

ನಾವಿಂದು ವಿವಿಧ ಸಂಸ್ಥೆಗಳ ದಿನಗಳಲ್ಲಿ ಜೀವಿಸುತ್ತಿದ್ದೇವೆ. ಇವುಗಳು ಕೆಲವೊಂದು ನಿಜವಾಗಿಯೂ ವಿವೇಕತೆ ಯಿಂದೊಡಗೂಡಿದ್ದು ಅನೇಕ ಲಾಭದಾಯಕ ವ್ಯವಸ್ಥೆಗಳನ್ನು ಹೊಂದಿವೆ ಎಂಬುದನ್ನು ನಾವು ಒಪ್ಪಿಕೊಳ್ಳಲೇಬೇಕಾಗುತ್ತದೆ. ನಾನಾ ರೀತಿಯ ವಿಮಾ ಕಂಪನಿಗಳು ಆರ್ಥಿಕ ಆಧಾರವುಳ್ಳವುಗಳಾಗಿದ್ದರೂ, ಇಲ್ಲವಾದರೂ, ಕಟ್ಟುನಿಟ್ಟಾಗಿ ಹೇಳುವುದಾದರೆ, ಜನೋಪಕಾರಿಯಾದವುಗಳು. ಅವುಗಳು ಮಾನವ ಕುಲವನ್ನು ಅದರ ಪಸ್ತುತ ಜೀವಿತದ ಅನಿಶ್ಚತತೆ ಮತ್ತು ಕಷ್ಟಸಂಕಟಗಳ ಮೇಲೆ ಸೇತುವೆ ಹೆಣೆಯುವವುಗಳಾಗಿವೆ– ಮರಣದ, ಆಪತ್ತಿನ ಮುನ್ನವೇ ಅವಲಂಬಿತರಿಗೆ ಬೇಕಾದ ಅಗತ್ಯತೆಗಳನ್ನು ಒದಗಿಸುತ್ತವೆ. ವಿವಿಧ ರೀತಿಯ ವಿಮಾ ಪದ್ಧತಿಗಳ ವಿವರಗಳನ್ನು ನಾವು ತಿಳಿಸಬೇಕಾದ್ದಿಲ್ಲ. ಆದರೆ ಇದು ಶುದ್ಧವಾದ ಒಂದು ವ್ಯಾಪಾರಿ ನಿರ್ಣಯವಾಗಿದೆಯೇ ಹೊರತು ಕರ್ತನ ಜನರು ಈ ವಿಮಾ ಅವಕಾಶಗಳನ್ನು ಪಡೆಯಬಹುದೇ ಎಂಬ ಧಾರ್ಮಿಕ ಪ್ರಶ್ನೆಯು ಇಲ್ಲಿ ಉದ್ಭವಿಸುವುದಿಲ್ಲ.

ಮನೆಯ ತಂದೆಯು ತಮ್ಮ ಹೆಂಡತಿ ಮಕ್ಕಳಿಗಾಗಿ ಬುದ್ಧಿವಂತಿಕೆಯಿಂದ ವಿಮಾಪಾಲಿಸಿ ಹೊಂದಿರುವ ಸಂಧರ್ಭಗಳನ್ನು ನಾವು ತಿಳಿದಿದ್ದೇವೆ. ವಿಶೇಷವಾಗಿ, ಪ್ರಸ್ತುತ ಸತ್ಯ ಮತ್ತು ನಿಕಟ ಭವಿಷ್ಯದ ಬಗ್ಗೆ ಪತಿಯ ದೃಷ್ಟಿಕೋನವನ್ನು ಗೌರವಿಸದ ಪತ್ನಿಯು ಆತನ ವಿಮೆಯು ಆಕೆಯ ಮನಸ್ಸಿಗೆ ಆರಾಮ, ಸುರಕ್ಷತೆ ಮತ್ತು ನೆಮ್ಮದಿ ನೀಡುವುದೆಂದು ನಿರೀಕ್ಷಿಸುವುದು ಬುದ್ಧಿವಂತಿಕೆಯ ಕ್ರಮವೇ? ಪತಿಯ ನಿರ್ಣಯವು ಯಾವುದೇ ಗಣನೀಯ ಮಟ್ಟದಲ್ಲಿ ತನ್ನ ಪತ್ನಿಯೊಂದಿಗೆ ಹೊಂದಿಕೆಯಾಗುವಲ್ಲಿ ಆತನು ಅಂತಹ ವಿಮೆಯನ್ನು ನಡೆಸಿಕೊಂಡು ಬರುವಲ್ಲಿ ಆತನು ಒಳ್ಳೆಯದನ್ನೇ ಮಾಡುತ್ತಾನೆಂದು ನಾವು ಆಲೋಚಿಸುತ್ತೇವೆ. ನಾವು ಯಾವುದೇ ವಿಮೆಯನ್ನು ಪ್ರತಿಪಾದಿಸುತ್ತಿಲ್ಲ, ಈ ಲೇಖಕನ ಬಳಿ ಯಾವುದೇ ವಿಮೆಯೂ ಇಲ್ಲ. ದೇವರ ವಾಕ್ಯದಲ್ಲಿ ಯಾವುದೂ ನೂತನ ಸೃಷ್ಟಿಗಳ ನಡತೆಯನ್ನು ಈ ದೆಸೆಯಲ್ಲಿ ಸರಿಪಡಿಸುವಂತೆ ವಿನ್ಯಾಸಗೊಂಡಿಲ್ಲ ಎಂಬುದನ್ನು ನಾವು ಕೇವಲ ಸೂಚಿಸುತ್ತಿದ್ದೇವೆ. ಈ ವಿಷಯದಲ್ಲಿ ಪ್ರತಿಯೊಬ್ಬನೂ ತನ್ನ ಸ್ವಂತ, ಪ್ರತ್ಯೇಕ ಸ್ಥಿತಿಯ ಸಾಮರಸ್ಯಕ್ಕೆ ತಕ್ಕಂತೆ ನಿರ್ಣಯಿಸಬೇಕು.

ನಮ್ಮ ನಿರೀಕ್ಷೆಗಳ ಪ್ರಕಾರ, ಮಹಾ ಸಂಕಟ ಸಮಯದ ಒತ್ತಡವು ಸಧ್ಯದಲ್ಲೇ ಅಂದರೆ ಬಹುಶಃ 1914ರ ಕೊನೆಯ ಭಾಗದಲ್ಲಿ ಅಂದರೆ ಅನ್ಯ ಜನಗಳ ಕಾಲವು ಅಕ್ಟೋಬರ್ 1914ರಲ್ಲಿ ಮುಕ್ತಾಯವಾಗುವಾಗ.* (2ನೇ ಗ್ರಂಥ ಶ್ರೇಣಿ ಪುಟ 76–78.) ಅದರ ಪ್ರಕಾರ ಒಟ್ಟುಗೂಡಿದ ಶಕ್ತಿಗಳು 1914ರ ವೇಳೆಯಲ್ಲಿ ಮಹಾ ಯೂರೋಪಿಯನ್ ಯುದ್ಧವಾಗಿ ಪರಿಣಮಿಸಿತು. ಅದು ಸೈತಾನ ಸಾಮ್ರಾಜ್ಯವನ್ನು ಲಯ ಮಾಡುವ ಒಂದು ಹಂತ.

ಈ ಆಪತ್ತಿನ ಸಮಯದ ಪ್ರಾರಂಭವನ್ನು ದೇವರ ವಾಕ್ಯದಲ್ಲಿ ನಿರ್ಧಿಷ್ಟವಾಗಿ ಗುರುತಿಸಿಲ್ಲ. ಅದು ಊಹಾತ್ಮಕವಾದುದು. ಇಂತಹ ಮಹಾ ಸಂಕಟವು, ವಿಶ್ವವ್ಯಾಪಿಯಾದ ವಿಪತ್ತು ಮೂರುವರ್ಷಗಳಿಗೂ ಕಡಿಮೆ ಅವಧಿಯಲ್ಲಿ ಖಂಡಿತವಾಗಿಯೂ ನೆರವೇರಲಾರದೆಂದು ಎಂದು ನಾವು ತೀರ್ಮಾನಿಸಬಹುದು. ಒಂದು ವೇಳೆ ಇದು ಮೂರುವರ್ಷಕ್ಕೂ ಹೆಚ್ಚು ಕಾಲ ಮೀರಿದಲ್ಲಿ "ಯಾವುದೇ ಮನುಷ್ಯ ವರ್ಗವೂ ಬದುಕುಳಿಯಲಾರದು". ಈ ಪೂರ್ವ ನಿರೀಕ್ಷಣೆಗಳ ಸಾಮರಸ್ಯದೊಂದಿಗೆ ನಾವು ಪ್ರತೀಕ್ಷಿಸುವುದೇನೆಂದರೆ ಯಾವಾಗ ಆರ್ಥಿಕ ಕ್ಷೋಭೆಯು ಕ್ರೈಸ್ತ ಪ್ರಪಂಚದ ಮೇಲೆ ರಭಸ ಪರಿಣಾಮ ಬೀರುತ್ತದೆಯೋ, ವ್ಯಾಪಾರ ಮತ್ತು ಬ್ಯಾಂಕ್ ಹಾಗೂ ವಿಮಾ ವ್ಯವಹಾರಗಳೆಲ್ಲವೂ ಒಟ್ಟಿಗೇ ಇಳಿಮುಖವಾಗುವುವು; ಇದು ನಿಜವಾಗಿಯೂ ಸಂಕಟದ ಗುರುತರವಾದ ಲಕ್ಷಣವಾಗುತ್ತದೆ ಮತ್ತು ಪರಲೋಕದ ಸಂಪತ್ತಿನ ಮೇಲೆ ಆತುಕೊಳ್ಳಲು ಬೇರೇನು ಇಲ್ಲದ ಹೃದಯಗಳಿಗೆ ಗಾಬರಿ ಮತ್ತು ನಿರಾಸೆಗಳನ್ನು ಹುಟ್ಟಿಸುತ್ತದೆ. (Vol II pp 76-78)

ಭ್ರಾತೃಭಾವದವುಗಳೆಂದು ಕರೆದುಕೊಳ್ಳುವ ವಿಮಾ ಸಂಘಗಳು ತಮ್ಮಲ್ಲಿ ಮೂಲಧನವಿಲ್ಲದೆ ಕೇವಲ ಕರಗಳ ಮೇಲೆ ಆತುಕೊಂಡಿರುವ ಕಾರಣ ಮತ್ತು ಆ ಸಂಘಗಳ ಸದಸ್ಯತ್ವವು ಹೆಚ್ಚಾಗದೇ ಇರುವ ಕಾರಣ ಈ ಕರಗಳು ಹೆಚ್ಚು ಹೊರೆಯಾಗಿರುವುದರಿಂದ ವ್ಯವಸ್ಥಿತ ಕಂಪನಿಗಳ ಮುಂದೆ ಅವುಗಳು ಬಲು ಬೇಗ ಬೀಳುತ್ತವೆ ಮತ್ತು ಇವುಗಳು ಒತ್ತಡದ ಸ್ಥಿತಿಯಲ್ಲಿ ನಶಿಸಿಹೋಗುತ್ತವೆ ಎಂದು ಊಹಿಸುವುದು ಸಮಂಜಸವಾಗಿದೆ. ಈ ವಿವಿಧ ಸಂಘಟನೆಗಳ ವಿಫಲತೆಯು ನಿಸ್ಸಂದೇಹವಾಗಿ ಅನೇಕರ ನಿರೀಕ್ಷೆಗಳನ್ನು ನುಚ್ಚುನೂರು ಮಾಡಿ ಅವರನ್ನು ಇಹಲೋಕದ ಪ್ರತೀಕ್ಷೆಯಲ್ಲಿ ಅಜಾಗರೂಕರಾಗುವಂತೆ ಮಾಡಬಹುದಾಗಿದೆ. ಆದುದರಿಂದ ಪ್ರತಿಯೊಬ್ಬರೂ ತಾವು ಹೊಂದಿರುವ ಯಾವುದೇ ಆಸ್ತಿ ಅಥವಾ ಆದಾಯದ ವಿಷಯದಲ್ಲಿ ಮನೆವಾರ್ತೆಯವರಾಗಿ ಅನುಸರಿಸಬೇಕಾದ ಅತಿ ವಿವೇಕಯುತ ಕ್ರಮವೇನೆಂಬುದನ್ನು ನಿರ್ಧರಿಸಬೇಕಾಗುತ್ತದೆ; ಆದರೆ ದೇವರಿಂದ ನಿಯಂತ್ರಿತಗೊಂಡಿದ್ದು ಮಾರ್ಗದರ್ಶನ ಹೊಂದುತ್ತಿರುವ ಯಾರೊಬ್ಬ ನೂತನ ಸೃಷ್ಟಿಯೂ ಭವಿಷ್ಯದಲ್ಲಿ ತಮ್ಮ ಹೃದಯಗಳಿಗೆ ಅಂಜಿಕೆಯುನ್ನುಂಟುಮಾಡುವ ಯಾವುದೇ ಅಂಥಹ ಕಳವಳಗಳನ್ನು ಅನುಭವಿಸುವುದಿಲ್ಲ: ಅಥವಾ ಈ ವರ್ಗವು ಅವುಗಳು ಇಂಥಹ ಮಾನವ ಪಾರುಪತ್ಯಗಳು ತಮ್ಮ ಸಂಪತ್ತಗಳ ಸಂರಕ್ಷಣೆಯ ಅಥವಾ ಸಹಾಯ ಮಾಡುವುದೆಂಬ ಭರವಸೆಯಿಟ್ಟು ನಂತರದಲ್ಲಿ ಅವುಗಳು ವಿಫಲವಾದಾಗ ತಮ್ಮ ಮನಮುರಿದುಕೊಳ್ಳುವುದಿಲ್ಲ.

ಇದು ಈ ಪಂಥಗಳ, ಸಂಸ್ಥೆ ಮುಂತಾದವುಗಳ ಬಗ್ಗೆ ಮತ್ತು ನೂತನ ಸೃಷ್ಟಿಗಳಿಗೆ ಅಂಥಾ ಸಂಘ ಸಂಸ್ಥೆಗಳಿಂದ ದೊರೆಯಬಹುದಾದ ಸವಲತ್ತುಗಳು ಏನು ಎಂಬುವ ಸಂಪೂರ್ಣವಾದ ಪ್ರಶ್ನೆಗಳನ್ನು ನಮ್ಮ ಮುಂದೆ ತರುತ್ತವೆ. ಅವರುಗಳು ಈ ಸಂಘಗಳ ಸದಸ್ಯರಾಗುವುದು ಸರಿಯೋ? ನಮ್ಮ ಉತ್ತರವೇನೆಂದರೆ, ಕ್ರೈಸ್ತ ಸಭೆಯ ಸಂಘ ಸಂಸ್ಥೆಗಳು ಶುದ್ಧವಾಗಿ ಧಾರ್ಮಿಕವಾದವುಗಳಾಗಿದ್ದು ಕಾರ್ಮಿಕ ಮತ್ತು ಪ್ರಯೋಜನಕಾರಿ ಸಂಘಟನೆಗಳು ಸಾಮಾನ್ಯವಾಗಿ ಅವುಗಳು ಜಾತ್ಯಾತೀತ ವಾದವುಗಳಾಗಿವೆ. ಈ ಧಾರ್ಮಿಕ ಮತ್ತು ಜಾತ್ಯಾತೀತ ಲಕ್ಷಣಗಳೊಂದಿಗೆ ಇನ್ನೂ ಕೆಲವೊಂದು ಪಂಥಗಳು ಒಟ್ಟುಗೂಡಿವೆ. ನಾವು ಇದನ್ನು ಅರ್ಥಮಾಡಿಕೊಳ್ಳುವಂತೆ, ಉದಾಹರಣೆಗಾಗಿ Free Masons, Odd Fellows, Knights of Pythias ಇವೇ ಮುಂತಾದವುಗಳು ಕೆಲವೊಂದು ಧಾರ್ಮಿಕ ವಿಧಿ ಸಂಸ್ಕಾರಗಳನ್ನು ನೆರವೇರಿಸುತ್ತವೆ. ಈ ವಿವಿಧ ಪಂಥಗಳಲ್ಲಿ ಸದಸ್ಯತ್ವ ಪಡೆಯುವವರ ವಿರುದ್ಧ ನಾವು ಯಾವುದೇ ಕಾದಾಟ ಮಾಡುತ್ತಿಲ್ಲ ಎಂದು ತಿಳಿದುಕೊಳ್ಳಬೇಕು. ನಾವು ಯಾವುದೇ ವಿವಿಧ ಪಂಥಗಳ ಧಾರ್ಮಿಕ ವ್ಯವಸ್ಥೆಗಳ ಬಗ್ಗೆಯೂ ಕಾದಾಡುತ್ತಿಲ್ಲ. ನಾವು ಈ ರೀತಿಯ ಧಾರ್ಮಿಕ ಸಂಸ್ಕಾರಗಳನ್ನು, ಬೋಧನೆ ಮುಂತಾದವುಗಳನ್ನು ನೆರವೇರಿಸುವವರನ್ನು ಒಂದು ಮಟ್ಟದಲ್ಲಿ ಇಡುತ್ತೇವೆ ಮತ್ತು ಇವುಗಳೆಲ್ಲವೂ ಬಾಬೇಲಿನ ಭಾಗಗಳಾಗಿವೆ ಎಂದು ಪರಿಗಣಿಸುತ್ತೇವೆ. ಕೆಲವೊಂದು ಭಾಗಗಳು, ವಿಭಾಗಗಳು ಶುದ್ಧವಾಗಿರಬಹುದು, ಮತ್ತೆ ಕೆಲವು ಕಡಿಮೆ ಶುದ್ಧವಾಗಿರಬಹುದು, ಆದರೆ ಅವುಗಳಲ್ಲಿ ಆದಿಸಭೆಗಳಲ್ಲಿ ತೋರಿಬಂದ ಮತ್ತು ಅವುಗಳ ಸಂಸ್ಥಾಪಕರುಗಳಾದ ಹನ್ನೆರಡು ಮಂದಿ ಅಪೋಸ್ತಲರುಗಳು ತಮ್ಮ ಬೋಧನೆಗಳಲ್ಲಿ, ಮಾತುಗಳಲ್ಲಿ ಹೇಳಿರುವ ದೇವರ ಉದ್ದೇಶಕ್ಕೆ ವಿರೋಧವಾದ ಅನೇಕ ಗೊಂದಲಗಳು, ತಪ್ಪು ದೋಷಗಳು ತುಂಬಿಕೊಂಡಿವೆ.

ಈ ಅರೆ ಧಾರ್ಮಿಕ ಸಂಸ್ಥೆಗಳ. ಪಂಥಗಳ. ಒಕ್ಕೂಟಗಳ ಮತ್ತು ಸಭೆಗಳ ಬಗ್ಗೆ ನೂತನ ಸೃಷ್ಟಿಗಳು ಯಾವುದೇ ಸಂಬಂಧವಿರಿಸಕೂಡದೆಂದು "ಅನ್ಯಜನರ ಮಧ್ಯದಲ್ಲಿಂದ ಹೊರಟು ಬಂದು ಪ್ರತ್ಯೇಕವಾಗಿರಿ; ಅಶುದ್ಧವಾದ ಯಾವುದನ್ನೂ ಮುಟ್ಟದಿರಿ" (2 ಕೊರಿ. 6:17) ಎಂದು ನಾವು ಎಚ್ಚರಿಸುತ್ತೇವೆ. ಅವರ ವಸ್ತುಗಳು, ಅವರ ಆರಾಧನೆಗಳು, ಅವರ ಬೋಧನೆಗಳು ಮತ್ತು ಅವರ ಸಿದ್ಧಾಂತಗಳು ನಮಗೆ ಅಶುದ್ಧವಾಗಿವೆ. ಆದರೆ ಅವುಗಳು ಅವರಿಗೆ ಅಶುದ್ಧವಾಗಿಲ್ಲದಿರಬಹುದು. ನಮ್ಮ ತಿಳುವಳಿಕೆಯ ಕಣ್ಣುಗಳು ತೆರೆಯಲ್ಪಟ್ಟಿವೆ. ಈಗ ನಮಗೆ ಎಲ್ಲವುಗಳೂ ನೂತನ ಪ್ರಕಾಶದಲ್ಲಿ ಕಂಡುಬರುತ್ತವೆ. ಆದುದರಿಂದ ನಾವು ಒಮ್ಮೆ ಪ್ರೀತಿಸಿದ್ದ ಸಂಗತಿಗಳನ್ನು ಈಗ ದ್ವೇಷಿಸುತ್ತೇವೆ ಮತ್ತು ಒಮ್ಮೆ ನಾವು ದ್ವೇಷಿಸುತ್ತಿದ್ದವುಗಳನ್ನು ಈಗ ನಾವು ಪ್ರೀತಿಸುತ್ತೇವೆ.

ಆದರೆ, ಯಾವುದೇ ಧಾರ್ಮಿಕ ಸ್ವಭಾವಗಳಿಲ್ಲದ, ಆರಾಧನೆ, ಬೋಧನೆ, ತತ್ವ ಅಥವಾ ಅವುಗಳ ಅಭ್ಯಾಸ ಕ್ರಮಗಳಿಲ್ಲದ ಪಂಥಗಳ ಅಥವಾ ಸಂಘ ಸಂಸ್ಥೆಗಳ ಕುರಿತಾಗಿ ಆದರೆ ಕೇವಲ ಪರಸ್ಪರ ಪ್ರಯೋಜನಕಾರಿಯಾದ ಮತ್ತು ಕೇವಲ ಮನಸೆಳೆಯಲು ಸಂಕೇತಗಳನ್ನು ಮತ್ತು ಸಂಕೇತ ಪದಗಳನ್ನು

ಹಾಕುವ ವಿಮಾ ಸಂಸ್ಥೆಗಳ ಬಗ್ಗೆ ಅಥವಾ ಪರಸ್ಪರರ ಹಿತಕ್ಕಾಗಿ ಕೆಲಸ ಮಾಡುವ, ಅನ್ಯಾಯದ ವಿರುದ್ಧ ಮತ್ತು ಉಚಿತವಾದ ಸಂಬಳಕ್ಕಾಗಿ ಹೋರಾಡುವ ಕಾರ್ಮಿಕ ಸಂಘಟನೆಗಳ ವಿರುದ್ಧವಾಗಿ ನಾವೇನೂ ಹೇಳುವುದಿಲ್ಲ. ಅವುಗಳೆಲ್ಲವೂ ನ್ಯಾಯದ ಪಥದಲ್ಲಿವೆ ಎಂದು ಹೇಳಿಕೊಳ್ಳುವುದನ್ನು ನಾವು ಒಪ್ಪಬಹುದು. ಅವುಗಳು ತಮಗೆ ಮಾನವ ಅಥವಾ ದೈವಿಕ ನಿಯಮಗಳನ್ನು ಉಲ್ಲಂಘಿಸುವ ಯಾವುದೇ ಉದ್ದೇಶಗಳಿಲ್ಲವೆಂದು ಹೇಳಿಕೊಳ್ಳುತ್ತವೆ. ಆದುದರಿಂದ ನೂತನ ಸೃಷ್ಟಿಯವರಿಗೆ ಯಾವುದೇ ಕಾರಣಕ್ಕಾಗಿ ಇವುಗಳೊಂದಿಗೆ ಸಹವಾಸ ಇಟ್ಟುಕೊಳ್ಳುವ ಅಗತ್ಯತೆ ಅಥವಾ ಸಮಯೋಚಿತೆ ಕಂಡುಬಂದಲ್ಲಿ ನಾವು ಅದರ ವಿರುದ್ಧವಾಗಿ ಯಾವುದೇ ಬಲವುಳ್ಳ ವಿರೋಧವನ್ನು ಎತ್ತಲು ಸಾಧ್ಯವಿಲ್ಲವಾಗಿದೆ. ನಮ್ಮ ಸ್ವಂತ ಆಯ್ಕೆ ಅಥವಾ ಇತರರಿಗೆ ಬುದ್ದಿ ಮಾತೇನೆಂದರೆ, ಅವು ಅವರಿಗೆ ಕಾರ್ಯತಃ ಅನ್ವಯಿಸುವವರೆಗೆ, ಯಾವುದೇ ಮಾನವ ಸಂಸ್ಥೆಗಳಿಂದ ಮುಕ್ತವಾಗಿರಬೇಕೆಂದು, ಕರ್ತನೊಂದಿಗೂ ಮತ್ತು ಆತನ ಆತ್ಮವಿರುವುದರೊಂದಿಗೂ ಮಾತ್ರವೇ ಅನ್ಯೋನ್ಯವಾಗಿರಬೇಕು ಎಂಬುದೇ. ಆದರೆ, ನಮಗೆ ಕಾರ್ಮಿಕ ಸಂಘಟನೆಗಳು ಅಸ್ತಿತ್ವಕ್ಕೆ ಬಂದ ಒತ್ತಡಗಳ ಬಗ್ಗೆ ತಿಳಿದಿದೆ. ಅವುಗಳಿಲ್ಲದೇ ಹೋದಲ್ಲಿ, ಕಾರ್ಮಿಕರ ಸಂಬಳವು ಈಗಿದ್ದುದಕ್ಕಿಂತ ಬಹಳ ಕಡಿಮೆಯಾಗಿರುತ್ತಿದ್ದವು ಮತ್ತು ಅವರ ಸಾಮಾನ್ಯ ಪರಿಸ್ಥಿತಿ ದುಸ್ತರವಾಗಿರುತ್ತಿತ್ತು.

ಹೀಗಿದ್ದರೂ, ಈ ಸಂಸ್ಥೆಗಳ ಉದ್ದೇಶಗಳ ಬಗ್ಗೆ ನಾವು ಸಾಮಾನ್ಯ ಅನುಕಂಪ ತೋರಿದರೂ, ಇವುಗಳು ಕೆಲವೊಮ್ಮೆ ಅನುಸರಿಸುವ ಎಲ್ಲಾ ಪದ್ಧತಿಗಳನ್ನೂ ನಾವು ಸ್ವೀಕರಿಸುವುದಿಲ್ಲ. ಯಾಕೆಂದರೆ ಅವರು ಆಗಾಗ್ಗೆ ತಮ್ಮ ಸಂಸ್ಥೆಯ ಶಕ್ತಿಯನ್ನು ಬಲತ್ಕಾರವಾದ ರೀತಿಯಲ್ಲಿ ಪ್ರಯೋಗಿಸುತ್ತಾರೆ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಾವು ಅವರ ಸರ್ವಸಾಮಾನ್ಯ ಉದ್ದೇಶಗಳು ಅಂದರೆ ಸಂಪತ್ತನ್ನು ಕೂಡಿಹಾಕುವ ಬಗ್ಗೆ ಮಾಡುವ ಒತ್ತಾಯಕ್ಕೆ ತಡೆ, ಮತ್ತು ಅಂತಹ ಸಮಯದಲ್ಲಿ ಕೆಲವೊಂದು ಸ್ವಾರ್ಥಿಗಳ ಕೈಯಲ್ಲಿನ ಸಾಮಾನ್ಯ ಧೋರಣೆಗಳು, ಬಡವರನ್ನು ಪ್ರತಿಭಟನೆಗಾಗಿ ಗುಂಪುಗೂಡಿಸುವುದು ಇತ್ಯಾದಿಗಳ ಬಗ್ಗೆ ಸಹಾನುಭೂತಿಯುಳ್ಳವರಾಗಿರಬೇಕು. ಕಾರ್ಮಿಕ ಸಂಘಟನೆಗಳು ಅಧಿಕಾರದಲ್ಲಿದ್ದು ವೇತನವನ್ನು ಸಮರ್ಥಿಸುವ ಸಮಾಜದಲ್ಲಿ ಜೀವಿಸುವ ಸಹೋದರರುಗಳಿಗೆ ನಮ್ಮ ಬುದ್ದಿಮಾತೇನೆಂದರೆ, ಅವರುಗಳು ಇಂತಹ ಸಂಘಟನೆಗಳ ಖರ್ಚಿಗೆ ಅವರು ಒಂದು ವೇಳೆ ಅದರ ಸದಸ್ಯರಾಗುತ್ತಿದ್ದರೆ ನೀಡಬೇಕಾಗಿದ್ದ ಹಣವನ್ನೇ, ಅಷ್ಟೇ ಕ್ರಮಬದ್ಧವಾಗಿ ಸ್ವಯಿಚ್ಛೆಯಿಂದ ನೀಡಬೇಕು ಮತ್ತು ಅವುಗಳ ಆಜ್ಞಾಕ್ರಮಗಳು ಅವರ ಆತ್ಮಸಾಕ್ಷಿಗೆ ವಿರೋಧವಾಗಿರದ ಹೊರತು ಅವುಗಳಿಗೆ ವಿಧೇಯರಾಗಿರಬೇಕು; ಆದರೆ, ಸಾಧ್ಯವಾದಲ್ಲಿ ಅವರು ತಮ್ಮ ಕರ ನೀಡುವ ಸಮಯದಲ್ಲಿ ತಮ್ಮ ಭಾಗವನ್ನು ನೀಡುವಾಗ ತಮ್ಮ ಪರಿಸ್ಥಿತಿಯನ್ನು ವಿವರಿಸಿ ಆದಷ್ಟೂ ಸದಸ್ಯತ್ವದಿಂದ ತಪ್ಪಿಸಿಕೊಳ್ಳಬೇಕು. ಈ ರೀತಿ ಮಾಡುವದರಿಂದ, ಸದಸ್ಯತ್ವದಿಂದ ಮುಕ್ತರಾಗ ಬಯಸುವುದು ಕಾರ್ಮಿಕ ಸಂಘಟನೆಗಳು ಕಾರ್ಮಿಕರ ಒಳಿತಿಗಾಗಿ ಮಾಡುವ ಖರ್ಚಿನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವಂತೆ ಮಾಡುವ ಯಾವುದೇ ಸ್ವಾರ್ಥವಾದ ಬಯಕೆಯಿಂದಲ್ಲ ಎಂಬುದು ಸಹ ಪ್ರಕಟಗೊಳ್ಳುತ್ತದೆ.

ಹೇಗೂ, ಕ್ರಮಬದ್ಧ ಸದಸ್ಯತ್ವಕ್ಕಿಂತ ಕಡಿಮೆಯಾದುದನ್ನು ಒಪ್ಪಿಕೊಳ್ಳದೇ ಹೋದಲ್ಲಿ, ವಿಶೇಷವಾಗಿ ಅವರ ದಿನ ನಿತ್ಯದ ರೊಟ್ಟಿಗೆ (ಆಹಾರಕ್ಕಾಗಿ)ಸದಸ್ಯತ್ವವು ಒಂದು ಶರತ್ತು ಆಗಿರುವಾಗ ದೇವರ ವಾಕ್ಯದ ಯಾವುದೇ ಕಟ್ಟಳೆಯಾಗಲೀ, ಅಥವಾ ಅವರು ಸದಸ್ಯತ್ವದಿಂದ ಏಕೆ ತಪ್ಪಿಸಿಕೊಳ್ಳಬೇಕೆಂಬ ಯಾವುದೇ ಇತರೆ ಕಾರಣವಾಗಲೀ ನಮಗೆ ತಿಳಿದಿರುವುದಿಲ್ಲ. ಅಂತಹ ಪರಿಸ್ಥಿತಿಗಳಲ್ಲಿ ಅವರು ಸೇರಿಕೊಳ್ಳಲಿ ಮತ್ತು ತೆರಬೇಕಾದುದನ್ನು ಕ್ರಮಬದ್ಧವಾಗಿ ನೀಡಲಿ, ಆದರೆ, ಪಂಥದ ಯೋಗ್ಯವಾದ ದೆಸೆಯಲ್ಲಿ ಸಹಾಯವಾಗುವಂತೆ ಶಾಂತಿ ಮತ್ತು ನೈತಿಕತೆ ಸಾಮರಸ್ಯದಲ್ಲಿ ತಾವು ಸೂಕ್ತ ಸಲಹೆಗಳನ್ನು ನೀಡಬಲ್ಲೆವು ಎಂಬ ನಂಬಿಕೆ ಇಲ್ಲದೇ ಹೋದಲ್ಲಿ ಅಂತಹ ಸಭೆಗಳಿಗೆ ಹಾಜರಾಗದೇ ಇರಲಿ. ಮುಷ್ಕರಗಳಾಗುವಾಗ, ಅವರು ಅದರ ಅಪ್ಪಣೆಯನ್ನು ಪಾಲಿಸಲಿ. ಆದರೆ ದಂಗೆಗೆ ಕಾರಣವಾಗುವ ಅಥವಾ ಇತರರ ಹಕ್ಕು ಮತ್ತು ಸ್ವಾತಂತ್ರ್ಯಕ್ಕೆ ವಿರುದ್ಧವಾದ ಯಾವುದರಲ್ಲೂ ಪಾಲುತೆಗೆದುಕೊಳ್ಳದೇ ಇರಲಿ; ಇವುಗಳು ಅವರ ಸಂಘಟನೆಯ ಪದಾಧಿಕಾರಿಗಳಿಗೆ ಸಮಗ್ರವಾಗಿ ತಿಳಿದಿರಲಿ ಮತ್ತು ಅವರು ಅಂಥಹ ಸೇವೆಯನ್ನು ಇವರಿಂದ ಅಪೇಕ್ಷಿಸದಿರಲಿ.

## ಧರ್ಮಶೀಲ ಮಧ್ಯಪ್ರವೇಶಿಕೆ

## Conscientious Meddling

ನೂತನ ಸೃಷ್ಟಿಯು ನೂತನ ಮನಸ್ಸಿಗೆ ಹೊಂದಿಕೆಯಾಗದಂತೆ ಇತರರ ವಿಷಯದಲ್ಲಿ ಕೈಹಾಕುವುದರ ಬಗ್ಗೆ ಅಪೋಸ್ತಲರು ಕಟುವಾಗಿ ಆಕ್ಷೇಪಿಸುತ್ತಾರೆ. (1ತಿಮೋಥೆ 5:13, 1 ಪೇತ್ರ 4:15). ಇತರರ ವಿಷಯದಲ್ಲಿ ಕೈಹಾಕುವುದೆಂದರೆ, ಒಬ್ಬರು ತಮ್ಮನ್ನು ಅನಾವಶ್ಯಕವಾಗಿ ತಮಗೆ ಯಾವುದೇ ಸಂಬಂಧವಿರದ ಇತರರ ಸಂಗತಿಗಳಲ್ಲಿ ತೂರಿಸಿಕೊಳ್ಳುವುದು. ಪ್ರಸ್ತುತ ಕಾಲದ ಬಿಡುವಿಲ್ಲದ ಅಲ್ಪ ಸಮಯದಲ್ಲಿ ದೃಢ ಮನಸ್ಸಿನ ಯಾವುದೇ ವ್ಯಕ್ತಿಯೂ ತಮ್ಮ ಸ್ವಂತ ಕಾರ್ಯಗಳಲ್ಲಿ ಮಾತ್ರವೇ ಯೋಗ್ಯವಾದ ರೀತಿಯಲ್ಲಿ ನಿರತರಾಗಿರಬೇಕೆಂಬುದನ್ನು "ಈ ಲೋಕದ ಮಕ್ಕಳು" ಸಹಾ ಬಲ್ಲವರಾಗಿದ್ದಾರೆ; ಆತನು ಇತರರ ವ್ಯವಹಾರಗಳ ಬಗ್ಗೆ ಉಚಿತವಾದ ಗಮನಹರಿಸುವುದಾದರೆ, ಆತನು ಅವರಿಗೆ ಬುದ್ಧಿವಾತುಗಳನ್ನು ಹೇಳುವ ಸಾಮರ್ಥ್ಯದವನಾಗಿರಬೇಕು. ಅವರ ವಿಷಯಗಳಲ್ಲಿ ತಲೆ ಹಾಕುವಾಗ ಆತನು ಖಂಡಿತವಾಗಿಯೂ ತನ್ನ ಸ್ವಂತ ಸಂಗತಿಗಳ ಬಗ್ಗೆ ಕೆಲಮಟ್ಟಿಗೆ ನಿರ್ಲಕ್ಷವುಳ್ಳವನಾಗಿರುತ್ತಾನೆ. ಇದಕ್ಕೂ ಹೆಚ್ಚಾಗಿ ನೂತನ ಸೃಷ್ಟಿಯು ದೃಢ ಮನಸ್ಸಿನವರಾಗಿರುವಂತೆ ದೇವರಿಂದ ಪಡಕೊಂಡವನಾದ ಕಾರಣ ಈ ಸತ್ಯವನ್ನು ಗ್ರಹಿಸುವವರಾಗಿರುತ್ತಾರೆ. ಇನ್ನೂ ಹೆಚ್ಚಾಗಿ, ಪ್ರಪಂಚದವರಿಗಿಂತ ತಮಗೆ ಇತರರ ವಿಷಯದಲ್ಲಿ ಮಧ್ಯೆಪ್ರವೇಶಿಸಲು ಕಡಿಮೆ ಸಮಯವಿದೆಯೆಂಬುದನ್ನೂ ಅವರು ಗ್ರಹಿಸಿರುತ್ತಾರೆ. ಯಾಕೆಂದರೆ, ಅವರು ತಮ್ಮ ಸಮಯ, ಪ್ರತಿಭೆ, ಪ್ರಭಾವ ಇವುಗಳೆಲ್ಲವನ್ನೂ ಕರ್ತನ ಸೇವೆಗೆ ಪ್ರತಿಷ್ಠಿಸಿರುವ ಕಾರಣ ಅವರ ಸಮಯವು ಅವರ ಸ್ವಂತದ್ದಲ್ಲ.

ಈ ವಿಷಯದಲ್ಲಿ ಸ್ವಾಭಾವಿಕವಾದ ದೃಢಮನಸ್ಸಿನ ಕೊರತೆಯಿರುವವರನ್ನು ಸಹಾ, ದೇವರ ವಾಕ್ಯದ ಪ್ರತಿಬಂಧಕಾಜ್ಞೆಗಳು ಸರಿಯಾದ ದಿಕ್ಕಿನಲ್ಲಿ ನಿರ್ಬಂಧಪಡಿಸುತ್ತವೆ ಮತ್ತು ಒಡಂಬಡಿಕೆಯ ನೆರವೇರಿಸುವಿಕೆಗೆ ತಮ್ಮ ಸಮಯವು

ಕಡಿಮೆಯಾಗಿದೆ ಎಂಬುದನ್ನು ಅವರು ಗ್ರಹಿಸುತ್ತಾರೆ. ಮತ್ತು ನೂತನ ಸೃಷ್ಟಿಗಳ ಸುವರ್ಣ ನಿಯಮವು ಅನ್ಯರ ವಿಷಯದಲ್ಲಿ ಮಧ್ಯೆ ಪ್ರವೇಶಿಸುವ ಸಂಬಂಧವಾದ ಯಾವುದನ್ನು ಅಡ್ಡಿ ಪಡಿಸುತ್ತದೆ ಎಂಬುದನ್ನೂ ಸಹಾ ಅವರು ಗ್ರಹಿಸಿಕೊಂಡಿರುತ್ತಾರೆ. ನಿಶ್ಚಿತವಾಗಿ ಅವರುಗಳು ಸಹಾ ಇತರರು ತಮ್ಮ ವಿಷಯದಲ್ಲಿ ಮಧ್ಯೆ ಪ್ರವೇಶಿಸುವುದನ್ನು ಮೆಚ್ಚಿಕೊಳ್ಳುವುದಿಲ್ಲ ತಮಗೆ ಮಾಡಬೇಕಾದಂತೆ ತಾವು ಇತರರಿಗೆ ಮಾಡುವಲ್ಲಿ ಅವರು ಸಮವಾಗಿ ಜಾಗ್ರತೆ ವಹಿಸುತ್ತಾರೆ. ಇದಕ್ಕೆ ವ್ಯತಿರಿಕ್ತವಾದುದು ಸಾಮಾನ್ಯವಾದ ಈ ಲೋಕದ ಸ್ಪೂರ್ತಿ ಎಂಬುದನ್ನು ಅಪೋಸ್ತಲನು ಗ್ರಹಿಸಿದ್ದಾನೆ. ಆದುದರಿಂದ ಭಕ್ತಜನರು ಈ ದೆಸೆಯಲ್ಲಿ ಅಧ್ಯಯನ ಮತ್ತು ಅಭ್ಯಾಸವನ್ನು ಮಾಡಿ ಕಲಿತುಕೊಳ್ಳಬೇಕೆಂದು ಆತನು ಎಚ್ಚರಿಸುತ್ತಾನೆ. – "ಇದಲ್ಲದೆ ನಾನು ನಿಮಗೆ ಆಜ್ಞೆಕೊಟ್ಟ ಪ್ರಕಾರ ನೀವು ಮತ್ತೊಬ್ಬರ ಕಾರ್ಯದಲ್ಲಿ ತಲೆಹಾಕದೆ ಸುಮ್ಮಗಿದ್ದು ಸ್ವಂತಕಾರ್ಯವನ್ನೇ ನಡಿಸಿಕೊಂಡು ಕೈಯಾರೆ ಕೆಲಸಮಾಡುವುದೇ ನ್ಯಾಯವೆಂದೆಣಿಸಿರಿ" (1 ಥೆಸಲೋನಿಕ 4:11).

ಈ ಸ್ವಾಭಾವಿಕ ಏರ್ಪಾಡುಗಳು ತನ್ನ ಕಣ್ಣಿನಲ್ಲಿರುವ ತೊಲೆಯನ್ನು ನಿರ್ಲಕ್ಷಿಸಿ ಸಹೋದರನ ಕಣ್ಣಿನಿಂದ ಧೂಳಿನ ಕಣವನ್ನು ತೆಗೆಯುವ ರೀತಿಯಲ್ಲಿರದೆ (ಮತ್ತಾಯ 7:3–5) ಇತರರ ಕಾರ್ಯಗಳ ಬಗ್ಗೆ ಮತ್ತು ಅವುಗಳನ್ನು ತಿದ್ದುವುದರಲ್ಲಿ ಕರ್ತನು ಸಾಮ್ಯವೊಂದರಲ್ಲಿ ಹೇಳಿದ ರೀತಿಯಲ್ಲಿ ಎಚ್ಚರಿಕೆಯಿಂದೊಡಗೂಡಿರಬೇಕು. ಇದು ಕೆಲವೊಮ್ಮೆ ನೂತನ ಸೃಷ್ಟಿಗಳನ್ನು ವಿಚಿತ್ರವಾದ ರೀತಿಯಲ್ಲಿ ಆಕ್ರಮಣ ಮಾಡುತ್ತದೆ. ಆತನು ಇತರರರಿಗೆ ಬುದ್ಧಿವಾದ ಹೇಳುವುದು, ಅವರ ತಪ್ಪು ಕಂಡುಹಿಡಿಯುವುದು, ಅವರನ್ನು ತನಿಖೆ ಮಾಡುವುದು, ಗದರಿಸುವುದು ಮತ್ತು ಆಕ್ಷೇಪಿಸುವುದು ತನ್ನ "ಕರ್ತವ್ಯ'ವೆಂದು ನೆನಸುತ್ತಾನೆ. ಈ ಸಂಗತಿಗಳನ್ನು ತನ್ನ ಮನಸ್ಸಿನ ಕಡೆಗೆ ತಿರುಗಿಸುವಾಗ ಆತನು ಹಾಗೆ ಮಾಡದಿರುವುದು ಪಾಪವೆಂದು ತನ್ನನ್ನು ತಾನು ಮನದಟ್ಟು ಪಡಿಸಿಕೊಳ್ಳುತ್ತಾನೆ. ಈ ರೀತಿಯಲ್ಲಿ ನಾವು ಕರೆಯುವಂತೆ ಆತನು ಧರ್ಮಶೀಲ ಮಧ್ಯೆ ಪ್ರವೇಶಿಕ ಅಥವಾ ಪರರ ಕೆಲಸದಲ್ಲಿ ಅನವಶ್ಯಕ ಕೈಹಾಕುವ ಅಧಿಕ ಪ್ರಸಂಗಿಯಾಗಿ ಬಿಡುತ್ತಾನೆ – ತಪ್ಪು ತಿಳುವಳಿಕೆ ಅಥವಾ ತಪ್ಪು ನಿರ್ದೇಶನದ ಮನಸ್ಸಾಕ್ಷಿಯ ಕಾರಣ ಆತನ ಈ ಕಾರ್ಯವು ದುಪ್ಪಟ್ಟು ಬಲಗೊಳ್ಳುತ್ತದೆ. ಇವರುಗಳು ಕೆಲವೊಮ್ಮೆ ನಿಷ್ಕಪಟಿಗಳೂ, ಒಳ್ಳೆಯವರೂ ಆದ ಯಥಾರ್ಥವಾದ ನೂತನ ಸೃಷ್ಟಿಗಳಾಗಿದ್ದು ಈ ನ್ಯೂನತೆಯ ಕಾರಣ ಅವರು ಪ್ರಯತ್ನಿಸುವ ಕರ್ತನ ಎಲ್ಲಾ ಸೇವೆಯಲ್ಲಿ ಅಡಚಣೆಗೊಳ್ಳುವವರಾಗುತ್ತಾರೆ. ಪ್ರತಿಯೊಬ್ಬರೂ ಈಗಾಗಲೇ ಹೇಳಿರುವ ನ್ಯಾಯ ಮತ್ತು ಪ್ರೀತಿಯ ವಿಧಿ ನಿಯಮಗಳನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಅವುಗಳನ್ನು ಅನ್ವಯಿಸಲು ಕಲಿತುಕೊಳ್ಳಬೇಕು. ಸಹೋದರರ ಕರ್ತವ್ಯ ಮತ್ತು ಇತರರ ವಿಷಯಗಳಲ್ಲಿ ಮಧ್ಯೆ ಪ್ರವೇಶಿಸುವುದು ಇವುಗಳ ಭಿನ್ನತೆಯ ಬಗ್ಗೆ ಅವರಿಗೆ ಕಲಿಸಿಕೊಡಬೇಕು. ನಮ್ಮ ಲಕ್ಷ್ಯಕ್ಕೆ ಬಂದಿರುವಂತೆ ಹೆಚ್ಚಿನ ದೇವ ಜನರು, ಮಾತ್ರವಲ್ಲದೆ ಈ ಲೋಕದವರು ನ್ಯಾಯ ಮತ್ತು ಪ್ರೀತಿಯ ನಿಯಮಗಳನ್ನು ಮೆಚ್ಚಿಕೊಂಡ ಮೇಲೆ ಇವುಗಳು ಸುವರ್ಣನಿಯಮದಲ್ಲಿ ಸೇರಿದ್ದಾಗಿದ್ದು ಇತರರೊಂದಿಗಿನ ಜೀವನದ ಸಂಗತಿಗಳಲ್ಲಿ ಹೊಕ್ಕು ಬಳಕೆಗಳಲ್ಲಿ ಅನ್ವಯವಾಗುವಂತೆ ಇತರರನ್ನು ಗದರಿಸುವ, ತೆಗಳುವ, ಇತರರ ತಪ್ಪುಗಳನ್ನು ಕಂಡುಹಿಡಿಯುವ ಅನಿಷ್ಟ ಸಂಗತಿಗಳನ್ನು ಕಡಿಮೆಗೊಳಿಸುತ್ತಾರೆ.

ಈ ದೆಸೆಯಲ್ಲಿ ತಾನಾಗಿಯೇ ಸಲಹೆ ನೀಡುವ ಯಾವುದೇ ವಿಷಯದ ಬಗ್ಗೆ ವಿಚಾರಿಸುವುದು ಸುರಕ್ಷಿತ – ಇದು ನನ್ನ ವ್ಯವಹಾರವೋ? ಪ್ರಪಂಚದೊಳಗಿನ ನಮ್ಮ ಹೊಕ್ಕುಬಳಿಕೆಯಲ್ಲಿ ಜಾಗರೂಕತೆಯಿಂದ ಪರೀಕ್ಷಿಸಿದಾಗ ನಾವು ಅವರನ್ನು ಗದರಿಸುವುದಾಗಲೀ, ತೆಗಳುವುದಾಗಲೀ ಅಥವಾ ಆಕ್ಷೇಪಿಸುವುದಾಗಲೀ ನಮ್ಮ ವ್ಯವಹಾರವಲ್ಲ ಎಂದು ಸಾಮಾನ್ಯವಾಗಿ ಕಂಡುಬರುತ್ತದೆ. ನಾವು ಈ ಲೋಕದ ಮಾರ್ಗವನ್ನು ಬಿಟ್ಟು, ಇಕ್ಕಟ್ಟಾದ ಮಾರ್ಗದಲ್ಲಿ ನಮ್ಮ ಕರ್ತನನ್ನು ಅನುಸರಿಸುವವರಾಗುವಂತೆ ನಮಗೆ ದೇವರ ಕರೆ ನೀಡಲಾಗಿದೆ; ಅದುವೇ ನಮ್ಮ ವ್ಯವಹಾರ. ಈ ಪ್ರಪಂಚವು ನಮ್ಮನ್ನು ನಮ್ಮಷ್ಟಕ್ಕೇ ಬಿಟ್ಟುಬಿಡುವಂತೆ ಬಯಸಬೇಕು, ಆಗ ನಾವು ಕರ್ತನನ್ನು ಹಿಂಬಾಲಿಸಬಹುದು. ಇದಕ್ಕೆ ಅನುರೂಪವಾಗಿ ನಾವು ಸಹಾ ಈ ಲೋಕದ ಚಿಂತನೆಗಳನ್ನು ಅದರಷ್ಟಕ್ಕೇ ಬಿಟ್ಟುಬಿಡಬೇಕು. "ಕೇಳುವ ಕಿವಿಯುಳ್ಳವನಿಗೆ" ಮಾತ್ರವೇ ನಾವು ನಮ್ಮ ಸುವಾರ್ತಾ ಸಂದೇಶವನ್ನು ಬೋಧಿಸಬೇಕು. ದೇವರಿಂದ ಕರೆಯಲ್ಪಡದ ಈ ಲೋಕದವರು, ಇಕ್ಕಟ್ಟಾದ ಮಾರ್ಗಕ್ಕೆ ಬಾರದೇ ಇರುವವರು ತಮ್ಮ ಸ್ವಂತ ಮಾರ್ಗವನ್ನು ಆಯ್ದುಕೊಳ್ಳುವ ಹಕ್ಕುಳ್ಳವರಾಗಿರುತ್ತಾರೆ ಮತ್ತು ಅವರು ನಮ್ಮ ವಿಷಯಕ್ಕೆ ಮಧ್ಯೆ ಪ್ರವೇಶಿಸಬಾರದೆಂದು ನಾವು ಅಪೇಕ್ಷಿಸುವಂತೆ ಅವರೂ ಸಹಾ ಅವರ ವಿಷಯಗಳ ಮಧ್ಯೆ ನಾವು ಪ್ರವೇಶಿಸದಂತೆ ನಿರೀಕ್ಷಿಸುವ ಹಕ್ಕನ್ನು ಹೊಂದಿರುತ್ತಾರೆ. ನಮ್ಮ ಬೆಳಕು ಪ್ರಕಾಶಿಸುತ್ತಿದೆ ಎಂಬ ಸತ್ಯವನ್ನು ಇದು ಮರೆಮಾಚುವುದಿಲ್ಲ. ನಾವು ಅವರನ್ನು ಆಕ್ಷೇಪಿಸದೇ ಇದ್ದರೂ ಅಥವಾ ಬೇರೆ ರೀತಿಯಾಗಿ ಅವರ ವಿಷಯದಲ್ಲಿ ಮಧ್ಯೆ ಪ್ರವೇಶಿಸದೇ ಹೋದರೂ ನಾವು ಈ ರೀತಿಯಲ್ಲಿ ಪರೋಕ್ಷವಾಗಿ ಪ್ರಪಂಚದವರ ಮೇಲೆ ನಿರಂತರವಾದ ಪ್ರಭಾವವನ್ನು ಬೀರುವವರಾಗಿದ್ದೇವೆ. ಸಂಗತಿಯು ಅರ್ಥಿಕ ವಿಷಯದ್ದಾಗಿದ್ದಲ್ಲಿ ನಾವು ಇತರರ ಸಂಗತಿಗಳಲ್ಲಿ ಮಧ್ಯೆ ಪ್ರವೇಶಿಸಿದಂತಾಗುವುದಿಲ್ಲ. ಬದಲಾಗಿ ನಾವು ನಮ್ಮ ಸ್ವಂತ ವ್ಯವಹಾರವನ್ನು ನೋಡುವವರಾಗಿದ್ದು, ಅವುಗಳ ವಿಷಯದಲ್ಲಿ ಸೂಕ್ತವಾದ ಗಮನವನ್ನು ಹರಿಸುವವರಾಗುತ್ತೇವೆ. ತಂದೆತಾಯಿಗಳು ಮನೆಯ ಮತ್ತು ಕುಟುಂಬದ ಹೊರಬೀಳುವ ಎಲ್ಲಾ ಹಿತಾಸಕ್ತಿಯ ಸಂಗತಿಗಳನ್ನು ತಿಳಿದುಕೊಳ್ಳುವುದರ ಬಗ್ಗೆ ನೇರವಾಗಿ ಮಧ್ಯೆ ಪ್ರವೇಶವೆನಿಸುವುದಿಲ್ಲ. ಆದರೆ ಇಲ್ಲಿಯೂ ಕುಟುಂಬದ ಪ್ರತಿಯೊಬ್ಬ ಸದಸ್ಯರ ವೈಯುಕ್ತಿಕ ಹಕ್ಕುಗಳನ್ನು ಪರಿಗಣಿಸಿ ಅವುಗಳನ್ನು ಸಂರಕ್ಷಿಸಬೇಕಾಗುತ್ತದೆ. ಪತಿ ಮತ್ತು ಮನೆಯ ತಂದೆಯಾದಾತನು ಅದರ ಶಿರಸ್ಸು ಮತ್ತು ಮುಖ್ಯ ಹಕ್ಕುದಾರ ಎಂದು ಪರಿಗಣಿಸಲಾಗುತ್ತದೆ. ಅವರು ತಮ್ಮ ಈ ಅಧಿಕಾರವನ್ನು ಪ್ರೀತಿಯುತ ನಿಗ್ರಹ ಮತ್ತು ವಿವೇಕಯುತ ಪರಿಗಣನೆಗಳಿಗೆ ವಿನಿಯೋಗಿಸಬೇಕು. ಪತ್ನಿಯ ವೈಯಕ್ತಿಕತೆ, ಆಕೆಯ ಅಭಿರುಚಿ ಮತ್ತು ಒಲವುಗಳು ಆತನ ಪರಿಗಣಿಸುವಿಕೆಗೊಳಗಾಗಿರಬೇಕು. ಆಕೆಯು ಆತನ ಪ್ರತಿನಿಧಿಯಾಗಿ ತನ್ನ ವಿಶೇಷ ಹಾಗೂ ಸ್ವಂತ ಅಧಿಕಾರಕ್ಕೆ ಒಳಪಟ್ಟವುಗಳಲ್ಲಿ ಆತನ ಸಹಾಯಕ ಸಂಗಾತಿಯಾದ ಗೃಹಿಣಿಯಾಗಿ ಸಂಪೂರ್ಣವಾದ ಶಕ್ತಿ ಮತ್ತು ಅಧಿಕಾರದಲ್ಲಿ

ಅರ್ಹಳಾಗಿರಬೇಕಾಗುತ್ತದೆ. ಮತ್ತು ಆತನ ಅನುಪಸ್ಥಿತಿಯಲ್ಲಿ ಕುಟುಂಬದ ಎಲ್ಲಾ ಸಂಗತಿಗಳಲ್ಲಿ ಆಕೆಯು ಈ ಅಧಿಕಾರವನ್ನು ಪೂರ್ಣವಾಗಿ ಪ್ರದರ್ಶಿಸಬೇಕಾಗುತ್ತದೆ. ಮಕ್ಕಳಿಗೆ ಸಹಾ ಪ್ರಾಯುಕ್ಕನುಸಾರವಾಗಿ ಅವರುಗಳ ಸಂಗತಿಗಳಲ್ಲಿ ಯಥೋಚಿತವಾದ ಸ್ವಕೀಯತೆಯನ್ನು ಮತ್ತು ವೈಯುಕ್ತತೆಯನ್ನು ನೀಡಬೇಕಾಗುತ್ತದೆ. ತಂದೆತಾಯಿಗಳು ಅಂತಹ ಸಂಧರ್ಭಗಳಲ್ಲಿ ಮನೆಯ ಕ್ರಮ ಮತ್ತು ಸೌಕರ್ಯಗಳನ್ನು ನಿರ್ವಹಿಸುವಂತೆ ಮತ್ತು ಅದರ ಸದಸ್ಯರುಗಳ ಮಾನಸಿಕ, ನೈತಿಕ ಮತ್ತು ದೈಹಿಕವಾದವುಗಳ ಯಥೋಚಿತ ಅಭಿವೃದ್ಧಿಗೆ ತಕ್ಕಂತೆ ಕೇವಲ ತಮ್ಮ ಅಧಿಕಾರ ಮತ್ತು ಮೇಲ್ವಿಚಾರಿಕೆಯನ್ನು ನಿರ್ವಹಿಸಬೇಕಾಗುತ್ತದೆ. ಮಕ್ಕಳಿಗೆ ಸಹಾ ಪರಸ್ಪರರ ತಪ್ಪು ಕಂಡುಹಿಡಿಯುವಿಕೆಗೆ ತೊಡಗದಂತೆ, ಇತರರ ಸ್ವತ್ತುಗಳ ಮಧ್ಯೆ ಪ್ರವೇಶಿಸದಂತೆ ಹಾಗೂ ಪರಸ್ಪರರ ಹಕ್ಕುಗಳನ್ನು ಗೌರವಿಸುವಂತೆ ಮತ್ತು ಸ್ವರ್ಣ ನಿಯಮಗಳಿಗೆ ತಕ್ಕಂತೆ ಪರಸ್ಪರ ಕರುಣೆಯುಳ್ಳವರೂ, ಉದಾರಿಗಳೂ ಆಗಿರುವಂತೆ ಮೊದಲಿಗೇ ಕಲಿಸಬೇಕು.

ಮಧ್ಯೆ ಪ್ರವೇಶಿಕೆಯ ಈ ಎಚ್ಚರಿಕೆಯ ಮಾತುಗಳನ್ನು ನೆನಪುಮಾಡಿಕೊಳ್ಳಲು ಸಭೆಯಲ್ಲದೆ ಬೇರೆಡೆ ಅಷ್ಟು ಮುಖ್ಯವಾಗಿರಲಾರದು. ಈ ಲೋಕದವರಿಂದ ಹಾಗೂ ತಮ್ಮ ಹಿರಿಯರ ಆದರ್ಶ ಮತ್ತು ಉದಾಹರಣೆಗಳಿಂದ ಇತರರ ವಿಷಯದಲ್ಲಿ ಮಧ್ಯೆ ಪ್ರವೇಶಿಸುವುದು ಅಥವಾ ಪರಸ್ಪರ ಚರ್ಚಿಸುವುದು ದೇವರ ಉದ್ದೇಶಗಳಿಗೆ ತಕ್ಕದಾದುದಲ್ಲ ಎಂಬುದನ್ನು ಸಹೋದರರು ಬಲು ಶೀಘ್ರವಾಗಿ ಕಲಿತುಕೊಳ್ಳುತ್ತಾರೆ. ಆದರೆ, ಬೇರೆಡೆಗಳಿಗಿಂತ ಇಲ್ಲಿ "ಯಾರ ಬಗ್ಗೆಯೂ ಕೆಟ್ಟದ್ದನ್ನು ನುಡಿಯಬಾರದು" ಎಂಬ ದೇವರ ನಿಯಮವು ಹೆಚ್ಚಾಗಿ ಅನ್ವಯವಾಗುತ್ತದೆ. ಇತರರ ವಿಷಯದಲ್ಲಿ ಮಧ್ಯೆ ಪ್ರವೇಶಿಸುವುದು ಅಂದರೆ ಇತರರ ಖಾಸಗಿ ವಿಷಯಗಳ ಬಗ್ಗೆ ಆಲೋಚಿಸುವುದು, ಅವುಗಳ ಬಗ್ಗೆ ಮಾತನಾಡುವುದು, ಹಿಂದಿನಿಂದ ಚುಚ್ಚು ಮಾತುಗಳನ್ನು ನುಡಿಯುವುದು, ಅವರಿಗೆ ಕೋಪವನ್ನೆಬ್ಬಿಸುವುದು, ಪರಸ್ಪರ ದ್ವೇಷ, ಹಗೆತನ, ಮತ್ಸರ, ಕಚ್ಚಾಟಗಳನ್ನು ಉಂಟುಮಾಡುವುದು ಮತ್ತು ಅಪೋಸ್ತಲನು ಕೊಲೊಸ್ಸೆ 3:5–10ರಲ್ಲಿ ಹೇಳಿರುವ ಐಹಿಕ ಹಾಗೂ ಪೈಶಾಚಿಕವಾದ ವಿವಿಧ ಕಾರ್ಯಗಳನ್ನು ನೆರವೇರಿಸುವುದು ಇವುಗಳನ್ನು ಒಳಗೊಂಡಿರುತ್ತದೆ. ಈ ರೀತಿಯಲ್ಲಿ ಕೆಲವೊಮ್ಮೆ ನಿಂದನೆಯ ಸಣ್ಣ ಬೀಜಗಳು ಬಿತ್ತಲ್ಪಡುತ್ತವೆ ಮತ್ತು ತೀಕ್ಷಣತೆಯ ಆಳವಾದ ಬೇರುಗಳು ಹರಡುತ್ತವೆ ಮತ್ತು ಇವುಗಳಿಂದ ಅನೇಕರು ಕಲುಷಿತರಾಗುತ್ತಾರೆ. ನೂತನ ಮನಸ್ಸುಳ್ಳ ಎಲ್ಲರೂ ಖಂಡಿತವಾಗಿಯೂ ಈ ಕೆಡುಕಿನ ವಿಷಕಾರಿಯನ್ನು ಗ್ರಹಿಸುತ್ತಾರೆ. ಅವರೆಲ್ಲರೂ ತಮ್ಮ ಮನೆಗಳಲ್ಲಿ ಮತ್ತು ನೆರೆಹೊರೆಯಲ್ಲಿ ಮಾದರಿಗಳಾಗಿರಬೇಕು. ಈ ಲೋಕದ ಮನಸ್ಸು ಕೂಡ ಕೊಲೆ ಮತ್ತು ದರೋಡೆಗಳನ್ನು ತಪ್ಪು ಎಂದು ಗ್ರಹಿಸಬಲ್ಲವು. ಆದರೆ ದೇವರ ನಿಯಮದ ಸ್ಫೂರ್ತಿಯನ್ನು ಮೆಚ್ಚಿಕೊಳ್ಳಬೇಕಾದಲ್ಲಿ ಇನ್ನೂ ಹೆಚ್ಚಿನ ನ್ಯಾಯದ ಭಾವನೆಯು ಅಗತ್ಯವಾಗಿರುತ್ತದೆ. ಪರರ ನಿಂದನೆಯು ಅವರ ನಡತೆಯನ್ನೇ ಕೊಲೆ ಮಾಡುವುದಾಗಿದೆ ಮತ್ತು ನೆರೆಯವನ ಒಳ್ಳೆಯ ಹೆಸರನ್ನು ಯಾವುದೋ ನೆಪದಿಂದ ಕದಿಯುವುದು ಒಂದು ರೀತಿಯ ದರೋಡೆಯೇ ಆಗಿದೆ. ಲೌಕಿಕ ಮನಸ್ಸುಳ್ಳವರು ಇದನ್ನು ಸ್ವಲ್ಪ ಮಟ್ಟಿಗಷ್ಟೇ ಗ್ರಹಿಸುತ್ತಾರೆ ಮತ್ತು ಅವರ ಮನೋಭಾವನೆಗಳು ಕವಿಯ ಈ ಮಾತುಗಳಲ್ಲಿ ಮೂಡಿಬರುತ್ತದೆ – "ನನ್ನ ಹಣದ ಚೀಲವನ್ನು ಕದಿಯುವವನು ಕೆಲಸಕ್ಕೆ ಬಾರದ್ದನ್ನು ಕದಿಯುವವನಾಗಿದ್ದಾನೆ... ಆದರೆ ನನ್ನ ಒಳ್ಳೆಯ ಹೆಸರನ್ನು ಅಪಹರಿಸುವವನು ಆತನನ್ನು ಶ್ರೀಮಂತನನ್ನಾಗಿ ಮಾಡಿಕೊಳ್ಳುವುದಕ್ಕಾಗಿ ಕದಿಯುವುದಿಲ್ಲ, ಆದರೆ ನಿಜವಾಗಿಯೂ ನನ್ನನ್ನು ಬಡವನನ್ನಾಗಿ ಮಾಡುತ್ತಾನೆ"

## "ದೇವರನ್ನು ಸ್ತುತಿಸುವುದು ಜನರನ್ನು ಶಪಿಸುವುದು"

### "Blessing God and Cursing Men"

ನಾಲಿಗೆಯು ನಾವು ಆಳಲಾಗದ ಅಂಗವಾಗಿದೆಯೆಂದು ಅಪೋಸ್ತಲನಾದ ಯಾಕೋಬನು ಹೇಳಿರುವುದು ಒಂದು ಸೋಜಿಗದ ಮಾತೇನಲ್ಲ – "ನಾಲಿಗೆಯನ್ನು ಯಾವ ಮಾನವನೂ ಹತೋಟಿಗೆ ತರಲಾರನು... ಅದು ಮರಣಕರವಾದ ವಿಷದಿಂದ ತುಂಬಿ ಇದೆ" (ಯಾಕೋಬ3:8). ಅದು ನಮ್ಮ ದೇಹದಲ್ಲಿನ ಅತ್ಯಂತ ಆಳಲಾಗದ ಅಂಗವಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ! ಅದು ಕಿಚ್ಚಿನೋಪಾದಿಯಲ್ಲಿ ಪ್ರಪಂಚವೆಂಬ ಚಕ್ರಕ್ಕೆ ಬೆಂಕಿ ಹಚ್ಚುತ್ತದೆ. ಇದರ ಅನುಭವ ಯಾರಿಗಿಲ್ಲ? ಜೀವನದಲ್ಲಿನ ಒಂದರ್ಧ ಕಷ್ಟ ಸಂಕಟಗಳಿಗೆ ಈ ಹತೋಟಿಯಿಲ್ಲದ ನಾಲಿಗೆಯೇ ಕಾರಣ ಎಂಬುದು ಎಷ್ಟು ಮಂದಿಗೆ ತಿಳಿಯದೇ ಇದೆ? ಅದರಿಂದ ಹೊರಡುವ ಮುಂದಾಲೋಚನೆಯಿಲ್ಲದ ಅವಸರದ ಮಾತುಗಳು ಲಕ್ಷಾಂತರ ಹಣದ ವೆಚ್ಚದಲ್ಲಿ ಅನೇಕ ಯುದ್ಧಗಳಿಗೆ ಕಾರಣವಾಗಿವೆ ಮತ್ತು ಸಾವಿರಾರು ಜನರು ಪ್ರಾಣನಷ್ಟಪಟ್ಟಿರುತ್ತಾರೆ. ಒಂದರ್ಧ ಮೊಕದ್ದಮೆಗಳಿಗೆ ಇದುವೇ ಬುನಾದಿಯಾಗಿದೆ. ಕಳೆದ ಆರು ಸಹಸ್ರ ವರ್ಷಗಳಲ್ಲಿ ನಮ್ಮ ಜನಾಂಗವನ್ನು ಪೀಡಿಸುತ್ತಿರುವ ಅರ್ಧಕ್ಕೂ ಹೆಚ್ಚು ಗೃಹ ಕಲಹಗಳಿಗೆ ಇದುವೇ ಕಾರಣವಾಗಿದೆ! ನಾಲಿಗೆಯ ಬಗ್ಗೆ ಅಪೋಸ್ತಲನು "ನಾಲಿಗೆಯಿಂದ ತಂದೆಯಾದ ಕರ್ತನನ್ನು ಕೊಂಡಾಡುತ್ತೇವೆ; ಅದರಿಂದಲೇ ದೇವರ ಹೋಲಿಕೆಗೆ ಸರಿಯಾಗಿ ಉಂಟುಮಾಡಲ್ಪಟ್ಟ ಮನುಷ್ಯರನ್ನು ಶಪಿಸುತ್ತೇವೆ. ನನ್ನ ಸಹೋದರರೇ, ಹೀಗಿರುವುದು ಯೋಗ್ಯವಲ್ಲ" (ವಚನ 09) ಎಂದು ಪ್ರಕಟಿಸುತ್ತಾನೆ. ಒಬ್ಬ ಕ್ರೈಸ್ತನು ತನ್ನ ನೆರೆಯವನ ವಸ್ತುವನ್ನು ಕದಿಯಬಾರದು ಅಥವಾ ಆತನ ಹತ್ಯೆ ಮಾಡಬಾರದು ಎಂಬ ವರ್ಗಕ್ಕೆ ಸೇರಿದವನಾಗಿಯೂ ತನ್ನ ನಾಲಿಗೆಯಿಂದ ಕೊಳ್ಳಿಹೊಡೆಯುವವನಾದರೆ, ಆತನ ಪ್ರತಿಷ್ಠೆಗೆ ದಕ್ಕೆಮಾಡುವುದಾಗಲೀ ಅಥವ ಒಳ್ಳೆಯ ಹೆಸರನ್ನು ಕದಿಯುವುದಾಗಲೀ ಮಾಡಿದರೆ ಅಂಥವನು ಸರಿಯಾದ ಮಾರ್ಗದಲ್ಲಿ ಮುಂದುವರೆಯದ ಕ್ರೈಸ್ತನೂ ಮತ್ತು ದೇವರ ರಾಜ್ಯದ ಪರಿಸ್ಥಿತಿಗಳಿಗೆ ಬಹಳ ದೂರವಿರುವವನೂ ಆಗಿದ್ದಾನೆ.

ನಾಲಿಗೆಯು ನಮ್ಮ ಪತನಗೊಂಡ ಸ್ವಭಾವದಲ್ಲಿ ಅನೇಕ ದುಷ್ಟ ಹಾಗೂ ಹಾನಿಕಾರಕ ಪ್ರವೃತ್ತಿಗೆ ಕಾರಣವಾಗಿದೆ ಎಂದು ತಿಳಿದಾಗ್ಯೂ ಅದನ್ನು ಹತೋಟಿಯಲ್ಲಿರಿಸಿಕೊಳ್ಳುವುದು ಎಷ್ಟು ಕಷ್ಟಕರವಾದುದೆಂದು ಎಲ್ಲರೂ ಬಲ್ಲರು. ಆದುದರಿಂದ, ನಾವು ನಾಲಿಗೆಯನ್ನು ನಿರ್ಬಂಧಿಸಬಹುದಾದ ಅಥವಾ ಅದಕ್ಕೆ ಕಡಿವಾಣ ಹಾಕಬಹುದಾದ ಸರಿಯಾದ ಪದ್ದತಿಯ ಬಗ್ಗೆ ಮಾತ್ರವೇ ನಿಮ್ಮ ಗಮನ ಸೆಳೆಯುವವರಾಗಿದ್ದೇವೆ; ಅದು

ಹೃದಯದ ಮೂಲಕ. "ಹೃದಯದಲ್ಲಿ ತುಂಬಿರುವುದೇ ಬಾಯಲ್ಲಿ ಹೊರಡುವುದು"(ಮತ್ತಾಯ 12 :34) ಎಂಬ ಸ್ಫೂರ್ತಿದಾಯಕ ವಾಕ್ಯವೊಂದನ್ನು ನಾವು ನೋಡುತ್ತೇವೆ. ಇದು ನಿಜವಾಗಿದ್ದು, ನಮಗೆ ನಮ್ಮ ನಾಲಿಗೆಯ ಬಗ್ಗೆ ದೊಡ್ಡ ತೊಂದರೆ ಉಂಟಾಗುವಾಗ, ನಮ್ಮ ಹೃದಯವೂ ಒಟ್ಟಾರೆ ಸರಿಯಾಗಿರಲಾರದ ಸಾಧ್ಯತೆ ಇನ್ನೂ ಹೆಚ್ಚಿನದಾಗಿದೆ. ನಾವು ನಮ್ಮ ಹೃದಯವನ್ನು ಸರಿಪಡಿಸಿಕೊಳ್ಳುವ ಅನುಪಾತದಲ್ಲಿ ನಮ್ಮ ನಾಲಿಗೆಯನ್ನು ಹತೋಟಿಯಲ್ಲಿಡುವುದು ಕಡಿಮೆ ಕಷ್ಟವಾಗುತ್ತಾ ಹೋಗುತ್ತದೆ. ಇತರರ ಬಗ್ಗೆ ನಿಂದನಾತ್ಮಕವಾಗಿ ಮಾತನಾಡುವ ತುಟಿಗಳು ಹೃದಯದ ಜಂಬದ, ಉದ್ಧಟತನದ, ದೌರ್ಜನ್ಯದ, ಸ್ವಯಂ ಪ್ರಜ್ಞಾ ಪರಿಸ್ಥಿತಿಯನ್ನು ಸೂಚಿಸುತ್ತವೆ. ಇತರರ ಬಗ್ಗೆ ನೇರವಾಗಿ ಅಥವಾ ವ್ಯಂಗವಾಗಿ ಸದಾ ಕೆಟ್ಟವುಗಳನ್ನೇ ಮಾತನಾಡುವ ತುಟಿಗಳು, ಅದರ ಹಿಂದಿರುವ ಹೃದಯವು ಶುದ್ಧವಾಗಿರುವುದಿಲ್ಲ, ಕರ್ತನ ಪ್ರೀತಿಯ ಆತ್ಮನಿಂದ ತುಂಬಿಕೊಂಡಿರುವುದಿಲ್ಲ ಎಂದು ಸೂಚಿಸುತ್ತದೆ. ಯಾಕೆಂದರೆ "ಪ್ರೀತಿಯು ತನ್ನ ನೆರೆಯವನಿಗೆ ಯಾವ ಕೆಡುಕನ್ನೂ ಬಯಸದು" ಮನಸ್ಸಿನಲ್ಲಿಯೂ ಕೂಡ ಇಲ್ಲ "ಅದು ಯಾವುದೇ ಕೆಡುಕನ್ನೂ ಯೋಚಿಸದು" ಕೆಡುಕುತನವನ್ನು ಊಹಿಸಲೂ ಸಹಾ ಅವಕಾಶವೀಯುವುದಿಲ್ಲ. ಅದು ಪ್ರತಿಯೊಂದು ಶಂಕೆಯ ಲಾಭವನ್ನು ಆತನಿಗೆ ನೀಡುತ್ತದೆ ಮತ್ತು ಅಮಂಗಳಕರ ವಾದವುಗಳಿಗಿಂತ ಹೆಚ್ಚಾಗಿ ಮಂಗಳಕರವಾದವುಗಳನ್ನೇ ಊಹಿಸುವಂತೆ ಮಾಡುತ್ತದೆ.

ಎಲ್ಲಾ ಮಾನವ ಜಾತಿಯಲ್ಲಿ ನಾಲಿಗೆಯು ತನ್ನ ಸ್ವಂತ ಹಾನಿಗಾಗಿ ಮಾತನಾಡುವುದನ್ನು ಅಡ್ಡಿಪಡಿಸುವಲ್ಲಿ ಸಾಮಾನ್ಯವಾಗಿ ಸ್ವಯಂಪ್ರೇಮವು ಸಾಕಷ್ಟು ಬಲಯುತವಾಗಿರುತ್ತದೆ; ಯುಕ್ತವಾದ ಪ್ರೀತಿ, ನಿಸ್ವಾರ್ಥತೆ ಇವುಗಳು ನೆರೆಯವನನ್ನು ತನ್ನಂತೆಯೇ ಪ್ರೀತಿಸುವಂತೆ ಮಾಡುವುದಲ್ಲದೆ. ಒಬ್ಬ ನೆರೆಯವನ ಅಥವಾ ಸಹೋದರನ ಬಗ್ಗೆ ಕೆಡುಕಾಗಿ ಮಾತನಾಡುವ ಇಚ್ಛೆಯಿಲ್ಲದಂತೆ ಮಾಡುತ್ತದೆ ಮತ್ತು ಆತನ ಗುಣನಡತೆಯ ಬಗ್ಗೆ ಕಳಂಕ ತರುವ ವಿಚಾರಗಳನ್ನು ತಿಳಿಯಲೆತ್ನಿಸದಂತೆ ಸಹಾ ಮಾಡುತ್ತದೆ. ಯಾಕೆಂದರೆ ಅಂತಹ ಕ್ರಮವನ್ನು ಸ್ವತಃ ತೆಗೆದುಕೊಳ್ಳಲು ಮನಸ್ಸು ಬರುವುದಿಲ್ಲ. ಈ ಪ್ರಸ್ತಾಪದ ಬಗ್ಗೆ ನಾವು ಯಾವುದೇ ದಿಕ್ಕಿನಿಂದ ನೋಡಿದರೂ, ನೂತನ ಸೃಷ್ಟಿಯಲ್ಲಿರುವ ಪ್ರಮುಖವಾದ ಸಂಗತಿಯೆಂದರೆ ನಮ್ಮ ಹೃದಯಗಳಲ್ಲಿ ಯಥೋಚಿತವಾದ ಪ್ರೀತಿಯನ್ನು ಸಂಪಾದಿಸಿಕೊಳ್ಳುವುದು. ಇದು ದೇವರ ಕಡೆಗೆ ನಮ್ಮನ್ನು ಇನ್ನೂ ಹೆಚ್ಚಿನ ಉತ್ಸಾಹಕ್ಕೆ, ಚೈತನ್ಯಕ್ಕೆ ಮತ್ತು ದೇವರ ಸೇವೆಯಲ್ಲಿ ಸಹಕರಿಸುವಂತೆ ಸ್ವಾರ್ಥತ್ಯಾಗಕ್ಕೆ ಹುರಿದುಂಬಿಸುತ್ತದೆ; ಮಾನವರ ಕಡೆಗೆ ಇದು ನಾವು ನ್ಯಾಯಪರರಾಗಿ ಮತ್ತು ಪ್ರೀತಿಯಿಂದ ವರ್ತಿಸುವಂತೆ ಮಾತ್ರವಲ್ಲ ಎಲ್ಲರೊಡನೆಯೂ ಆದಷ್ಟು ಮಟ್ಟಿಗೆ ವಿನಯಶೀಲತೆಯಿಂದ ಮಾತನಾಡುವಂತೆ ಮಾಡುತ್ತದೆ. ನಮ್ಮ ವಿಮೋಚಕನು ಪ್ರಾರ್ಥಿಸಬೇಕೆಂದು ಹೇಳಿದ ಪವಿತ್ರಾತ್ಮನು ಇದುವೇ. ನಮ್ಮ ಈ ಲೋಕದ ತಂದೆತಾಯಿಗಳು ತಮ್ಮ ಮಕ್ಕಳಿಗೆ ಕೊಡುವ ಬಹುಮಾನಗಳಿಗಿಂತ ಹೆಚ್ಚಾಗಿ ಪರಲೋಕದ ನಮ್ಮ ತಂದೆಯು ಇದನ್ನು ನಮಗೆ ಕೊಡುವವನಾಗಿದ್ದಾನೆ ಎಂಬುದಾಗಿ ಇದರ ಬಗ್ಗೆ ನಮ್ಮ ಕರ್ತನು ಪ್ರಕಟಿಸಿದ್ದಾನೆ. ಈ ಪವಿತ್ರಾತ್ಮನಿಗಾಗಿ, ಪ್ರೀತಿಯ ಆತ್ಮನಿಗಾಗಿ ಬೇಡಿಕೊಳ್ಳುವ ನಿಷ್ಠೆಯು ನಮ್ಮ ಆಲೋಚನೆ, ಮಾತು ಮತ್ತು ಕಾರ್ಯಗಳ ಎಲ್ಲಾ ಮಾರ್ಗಗಳಲ್ಲಿ ಪ್ರೀತಿಯು ಸಮೃದ್ಧಿಯಾಗಿ ಸುರಿದಿರಬೇಕೆಂಬ ಪ್ರಾಮಾಣಿಕ ಬಯಕೆ ಮತ್ತು ಹೆಣಗುವಿಕೆಗಳ ಅರ್ಥನೀಡುತ್ತದೆ. ಹೀಗಾಗಿ ಪರಲೋಕದಲ್ಲಿರುವ ನಮ್ಮ ತಂದೆಯ ಮಕ್ಕಳಾಗಿ ಆತನು ವಾಗ್ದಾನಮಾಡಿದ ಮತ್ತು ಆತನನ್ನು ಪ್ರೀತಿಸುವವರೆಲ್ಲರಿಗಾಗಿ ಕಾದಿರಿಸಿರುವ ಎಲ್ಲಾ ಅಮೂಲ್ಯಸಂಗತಿಗಳಿಗಾಗಿ ಮತ್ತು ಆತನ ಪ್ರೀತಿಗಾಗಿ ಯೋಗ್ಯರಾಗುವಂತೆ ಪರಿಗಣಿಸಲ್ಪಡುವೆವು.

## ಸಾಮಾಜಿಕ ಹಂಗುಗಳು

## Social Obligations

ನೂತನ ಸೃಷ್ಟಿಗಳು ಈ ಮರ್ತ್ಯ ಶರೀರದೊಂದಿಗೆ ಗುರುತಿಸಲ್ಪಡುವವರೆಗೆ ಅದರ ಮೂಲಕವಾಗಿ ಸ್ವಾಭಾವಿಕ ಮನುಷ್ಯರ ಮತ್ತು ಕೆಲವೊಂದು ಸಾಮಾಜಿಕ ಜವಾಬ್ದಾರಿಗಳೊಂದಿಗೆ ಸಂಪರ್ಕ ಹೊಂದಿದವರಾಗಿರುತ್ತಾರೆ. ನೂತನ ಮನಸ್ಸು ಸ್ವಾಭಾವಿಕವಾಗಿ ಮತ್ತೊಂದು ನೂತನ ಮನಸ್ಸಿನ ಸಹವಾಸವನ್ನು ಬಯಸುವುದಾಗಿದೆ. ಸತ್ಯದ ಕೃಪೆಯಲ್ಲಿ ಅಭಿವೃದ್ಧಿ ಹೊಂದಿದಂತೆಲ್ಲಾ ಅದರ ಅನುಪಾತಕ್ಕೆ ಸರಿಯಾಗಿ ಅದು ಈ ಲೋಕದ ಸಹವಾಸಗಳೊಂದಿಗೆ, ಧ್ಯೇಯಗಳೊಂದಿಗೆ, ಅಭಿಲಾಷೆಗಳೊಂದಿಗೆ, ಸಾಹಿತ್ಯದೊಂದಿಗೆ ಮತ್ತು ಸಂಭಾಷಣೆಯ ಪ್ರಸ್ತಾಪಗಳೊಂದಿಗೆ ಸಂಬಂಧಗಳನ್ನು ಕಳಚಿಕೊಳ್ಳುತ್ತಾ ಹೋಗುತ್ತದೆ. ಈ ಲೋಕದ ಸಂಗತಿಗಳಿಗೆ, ಹಿತಾಸಕ್ತಿಗಳಿಗೆ ಸತ್ತು ಹೋಗಿದ್ದೇವೆಂದು ತಿಳಿದುಕೊಂಡಿರುವ ನೂತನ ಸೃಷ್ಟಿಗಳು ಎಷ್ಟರಮಟ್ಟಿಗೆ ತಮ್ಮ ಲೋಕ ಸಂಬಂಧವಾದ, ಪ್ರತಿಷ್ಠೆಗೊಳ್ಳದ ಸ್ನೇಹಿತರೊಡನೆ ಸಂಬಂಧವನ್ನು ಮುಂದುವರಿಸಬಹುದು ಎಂಬ ಪ್ರಶ್ನೆ ಹಲವರಲ್ಲಿ ಉದ್ಭವಿಸುತ್ತದೆ. ಇದು ಪ್ರತಿಯೊಂದು ವ್ಯಕ್ತಿಯ ಬಗ್ಗೆ ಗುರುತರವಾಗಿ ಮತ್ತು ಜಾಗರೂಕವಾಗಿ ಗಮನವನ್ನು ಹರಿಸಲು ಯೋಗ್ಯವಾದ ವಿಷಯವಾಗಿದೆ; ಇಂತಹ ಸ್ಥಿತಿಯಲ್ಲಿನ ಯಾವ ಇಬ್ಬರು ವ್ಯಕ್ತಿಗಳೂ ಒಂದೇ ಸಮನಾಗಿರುವುದಿಲ್ಲ ಮತ್ತು ನೀಡಲಿರುವ ಯಾವುದೇ ಬುದ್ಧಿಮಾತುಗಳೂ ಎಲ್ಲಾ ಪ್ರಕರಣಗಳಲ್ಲಿ ಸರಿಯೆನಿಸುವುದಿಲ್ಲ.

ನೂತನ ಮನಸ್ಸಿನವರೊಂದಿಗೆ ಸಾಮರಸ್ಯಕರ ಸಹವಾಸವನ್ನು ಹೊಂದಿದವರಾದ ನಾವು ಕೆಟ್ಟದ್ದನ್ನು, ಅಶುದ್ಧವಾದುದ್ದನ್ನು ಗ್ರಹಿಸುವಂತೆ ಮಾಡುವವರ ಸಹವಾಸವನ್ನು ಮಾಡಬಾರದೆಂದು ಅಪೋಸ್ತಲನು ಬುದ್ಧಿ ಹೇಳುತ್ತಾನೆ. ಇಂತಹ ಕ್ರಮವು ಪ್ರಶ್ನಾತೀತವಾಗಿ ನಮ್ಮ ಪ್ರಯೋಜನಾರ್ಥವಾಗಿದೆ. ಯಾಕೆಂದರೆ, ಮೊದಲಿಗೆ ಅಂತಹ ಸಹವಾಸವು ನಮ್ಮ ಬಿದ್ದುಹೋದ ಆಶೆಗಳನ್ನು, ಸ್ವಾಭಾವಿಕವಾದ ಹೀನೈಸಲ್ಪಟ್ಟ ಧೋರಣೆಗಳನ್ನು ನಿರಂತರವಾಗಿ ಪ್ರೋತ್ಸಾಹಿಸುವುದಿಲ್ಲ; ಎರಡನೆಯದಾಗಿ ಅಪೋಸ್ತಲನು ನೀಡಿರುವ ದೈವಾಜ್ಞೆಗಳಿಗೆ ತಕ್ಕಂತೆ ನಡೆಯುವ ಮತ್ತು "ಯಾವಾವುದು ಸತ್ಯವೂ, ಮಾನ್ಯವೂ, ನ್ಯಾಯವೂ, ಶುದ್ಧವೂ, ಪ್ರೀತಿಕರವೂ ಮನೋಹರವೂ ಆಗಿವೆಯೋ, ಯಾವುದು ಸದ್ಗುಣವಾಗಿದೆಯೋ, ಯಾವುದು ಕೀರ್ತಿಗೆ ಯೋಗ್ಯವೋ" (ಫಿಲಿಪ್ಪಿ 4:8) ಅವುಗಳನ್ನು ಲಕ್ಷಿಸಿ ಅವನ್ನು ಅನುಸರಿಸುವ ನಮ್ಮ ಪ್ರಯತ್ನದಲ್ಲಿ ಇದು ಹೆಚ್ಚು ಸಹಕಾರಿಯಾಗಿವೆ.

ಹೀಗಿದ್ದಾಗ್ಯೂ, ಸಾಮಾನ್ಯವಾಗಿ ಮಾನವ ಜಾತಿಗಿಂತ ಹೆಚ್ಚಾಗಿ ನಮ್ಮೊಡನೆ ರಕ್ತಸಂಬಂಧದಲ್ಲಿ ಇರುವವರೊಂದಿಗೆ ನಾವು ನಿಜವಾಗಿಯೂ ಹೆಚ್ಚಿನ ಆಸಕ್ತಿವಹಿಸಬೇಕಾಗುತ್ತದೆ. ಅನಂತರದಲ್ಲಿ ದೇವರ ಆತ್ಮನು ನಮ್ಮನ್ನು ಇತರ ಮಾನವ ಜಾತಿಯವರೊಡನೆ ಕೃಪೆ ಕರುಣೆಗಳೊಂದಿಗೆ ಇರುವಂತೆ ಪ್ರೇರೇಪಿಸಿ ನಡಿಸುವುದಾದರೆ, ನಮ್ಮ ಸಂಬಂಧಿಗಳ ಬಗ್ಗೆ ನಮ್ಮ ಮನೋಭಾವಗಳನ್ನು ವಿಶೇಷವಾಗಿ ಪರಿಗಣಿಸಬೇಕೆಂಬ ಅರ್ಥವುಂಟಾಗುತ್ತದೆ ಮತ್ತು ಅವುಗಳು ನಮ್ಮ ಅವಕಾಶಗಳಿಗೆ ಸಹಾಯಕವಾಗಿರುವಷ್ಟು ಕಾಲ ಇದ್ದೇ ಇರುತ್ತವೆ. ಪರಂತು, ನಮ್ಮ ತೀರ್ಮಾನಗಳ ಪ್ರಕಾರ ಅಥವಾ ಸತ್ಯವೇದದ ಬೋಧನೆಗಳಿಗೆ ಸಾಮರಸ್ಯವಾಗಿ ಅಥವಾ ಅವುಗಳು ನಮ್ಮ ಕರ್ತನ ಮತ್ತು ಅಪೋಸ್ತಲರುಗಳ ನಡತೆಯ ಬಗ್ಗೆ ನಮ್ಮ ಮುಂದೆ ಇಡುವ ಉದಾಹರಣೆಗಳಿಗೆ ತಕ್ಕಂತೆ ನಾವು ನಮ್ಮ ಈ ಲೋಕದ ಸಂಬಂಧಿಗಳೊಡನೆ ಅತಿಯಾದ ಸಾಂಗತ್ಯ ತೋರುವುದು, ನಮ್ಮ ವಿಶ್ವಾಸದ ಮನೆಯವರಿಗಿಂತ ಹೆಚ್ಚಾಗಿ ಅವರನ್ನು ಬರಮಾಡಿಕೊಳ್ಳುವುದು, ಅವರನ್ನು ಸತ್ಕರಿಸುವುದು ಬುದ್ಧಿವಂತಿಕೆಯಲ್ಲ. ಅಂತಹ ನಿಕಟವಾದ ಸಂಬಂಧವನ್ನು ನಾವು ಅಪೋಸ್ತಲನ ಈ ಮಾತುಗಳಿಂದ ಮಾನ್ಯ ಮಾಡುತ್ತೇವೆ – "ಯಾವನಾದರೂ, ಸ್ವಂತ ಜನರನ್ನು ವಿಶೇಷವಾಗಿ ತನ್ನ ಮನೆಯವರನ್ನು ಸಂರಕ್ಷಿಸದೆ ಹೋದರೆ ಅವನು ಕ್ರಿಸ್ತ ನಂಬಿಕೆಯನ್ನು ತಿರಸ್ಕರಿಸಿದವನೂ ನಂಬದವನಿಗಿಂತ ಕಡೆಯಾದವನೂ ಆಗಿದ್ದಾನೆ"(1ತಿಮೋ.5:8). ಒಟ್ಟಾರೆಯಾಗಿ ನಾವು "ಸಮಯವಿರಲಾಗಿ ಎಲ್ಲರಿಗೆ ಒಳ್ಳೆಯದನ್ನು ಮಾಡೋಣ; ಮುಖ್ಯವಾಗಿ ಒಂದೇ ಮನೆಯಂತಿರುವ ಕ್ರಿಸ್ತ ನಂಬಿಕೆಯುಳ್ಳವರಿಗೆ ಮಾಡೋಣ" (ಎಫೆಸ 6:10) ಎಂಬುವ ಅಪೋಸ್ತಲನ ಮತ್ತೊಂದು ಮಾತುಗಳನ್ನು ಅನ್ವಯಿಸಬೇಕಾಗುತ್ತದೆ. ನಂಬಿಗಸ್ತ ಮನೆಯವರ ನಂತರ ನಮ್ಮ ದೂರದ ಸಂಬಂಧಿಗಳು ಬರಬೇಕು.

ತನ್ನ ಹಿಂಬಾಲಕರನ್ನು ಒಂದು ನೂತನ ಕುಟುಂಬವನ್ನಾಗಿ ನೂತನ ಮನೆಯವರನ್ನಾಗಿ ಅಂದರೆ ವಿಶ್ವಾಸಿಗಳ ಮನೆಯವರನ್ನಾಗಿ ಮಾಡುವುದು ನಮ್ಮ ಕರ್ತನ ಉದ್ದೇಶವೇ ಆಗಿತ್ತು. ಈ ಕಾರಣದಿಂದ ನಾವು ಅನೇಕ ಪುನಃರುಚ್ಚಿತವಾದ ದೈವಾಜ್ಞೆಗಳನ್ನೂ ಮತ್ತು ಪರಸ್ಪರ ಸಾಂಗತ್ಯಕ್ಕೆ, ಪರಸ್ಪರ ಸಹಾಯಕ್ಕೆ ಮತ್ತು ನಿರಂತರ ಸಹವಾಸಕ್ಕೆ ಪ್ರೋತ್ಸಾಹಕರ ಮಾತುಗಳನ್ನು "ಎಲ್ಲಿ ಇಬ್ಬರಾಗಲೀ, ಮೂವರಾಗಲೀ ನನ್ನ ಹೆಸರಿನಲ್ಲಿ ಕೂಡಿಬರುತ್ತಾರೋ ಅವರ ಮಧ್ಯೆ ಅವರನ್ನು ಆಶೀರ್ವದಿಸುವಂತೆ ನಾನಿರುತ್ತೇನೆ" ಎಂಬಿತ್ಯಾದಿ ವಾಗ್ದಾನದ ಮಾತುಗಳಲ್ಲಿ ಕಾಣುತ್ತೇವೆ ಮತ್ತು ಆತನ ಜನರು ಆತನ ಹೆಸರಿನಲ್ಲಿ ಕೂಡಿಬರಲು ಮರೆಯಬಾರದು. ಕರ್ತನ ಈ ಕ್ರಮವು ವಿಶ್ವಾಸದ ಮನೆಯವರಿಗೆ ತನ್ನ ಪೂರ್ಣ ಗಮನವನ್ನು ನೀಡುವುದಕ್ಕೆ ಹೊಂದಿಕೆಯಾಗಿದೆ. ಪಸ್ಕಹಬ್ಬವನ್ನು ಪ್ರತಿಯೊಂದು ಕುಟುಂಬದವರೂ ಪ್ರತ್ಯೇಕವಾಗಿ ಆಚರಿಸಬೇಕಿತ್ತೆಂದು ನಾವು ನೋಡುತ್ತೇವೆ (ವಿಮೋ. 12:1–21). ಕರ್ತನು ತನ್ನ 12 ಮಂದಿ ಅಪೋಸ್ತಲರನ್ನು ಒಂದು ಪ್ರತ್ಯೇಕ ಕುಟುಂಬದವರಂತೆ ಭೇಟಿಯಾಗುತ್ತಾನೆ. ಅವರುಗಳು ಆತನ ಮತ್ತು ಸ್ವಂತ ಸಂಬಂಧಗಳನ್ನೆಲ್ಲಾ ಬಿಟ್ಟು ಬಂದವರಾಗಿದ್ದರು. ಆತನ ತಾಯಿ ಮತ್ತು ಸಹೋದರರು ಆತನಿಗಾಗಿ ಹೊರಗಡೆ ಕಾಯುತ್ತಿದ್ದಾರೆಂದು, ಆತನೊಡನೆ ಮತನಾಡಬೇಕೆಂದು ಇಚ್ಛೆಯುಳ್ಳವರಾಗಿದ್ದಾರೆಂದು ಒಮ್ಮೆ ಆತನಿಗೆ ತಿಳಿಸಿದಾಗ ಆತನು "ನನಗೆ ತಾಯಿ ಯಾರು? ನನಗೆ ಅಣ್ಣತಮ್ಮಂದಿರು ಯಾರು?... ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ನನಗೆ ತಮ್ಮನೂ ತಂಗಿಯೂ ತಾಯಿಯೂ ಆಗಬೇಕು" (ಮತ್ತಾಯ 12:48–50) ಎಂಬ ಮಾತುಗಳಲ್ಲಿ ನಾವು ಇದೇ ಆಲೋಚನೆಯನ್ನು ನೋಡಬಹುದಾಗಿದೆ.

ಆದುದರಿಂದ, ದೇವರ ಉದಾಹರಣೆಯನ್ನು ಪಾಲಿಸುವವರಾಗಿ, ನಮ್ಮ ಮಮತೆ ಮತ್ತು ಹಿತಾಸಕ್ತಿಗಳು ನೂತನ ಸೃಷ್ಟಿಯಲ್ಲಿ ಅನ್ಯೋನ್ಯಗೊಂಡಿರುವ "ಕ್ರಿಸ್ತನ ದೇಹದ" ಅಂಗಗಳ ಕಡೆಗೆ ಹೆಚ್ಚಾಗಿ ಸೆಳೆಯಲ್ಪಟ್ಟಿರಬೇಕು. ಹೇಗೂ, ಇದು ಯಾವುದೇ ಮಟ್ಟದಲ್ಲಿ ನೂತನ ಸೃಷ್ಟಿಯ ಎರಡು ಲಿಂಗಗಳ ನಡುವಿನ ಕಠಿಣವಾದ ಲಕ್ಷಣಗಳನ್ನು ತೊಡೆದುಹಾಕುತ್ತದೆಂದು ಅಥವಾ ಇದು ಅವಿಶ್ವಾಸಿಯಾದ ಗಂಡ ಅಥವಾ ಹೆಂಡತಿಯನ್ನು ನಿರ್ಲಕ್ಷಿಸಬೇಕು ಮತ್ತು ಸಾಂಗತ್ಯವನ್ನು ಕೇವಲ ನೂತನ ಮನಸ್ಸಿನವರಿಗೆ ಮಾತ್ರವೇ ನೀಡಬೇಕು ಎಂಬ ಅರ್ಥಕೊಡುತ್ತದೆಂದು ತಿಳಿಯಬಾರದು. ಇದಕ್ಕೆ ವ್ಯತಿರಿಕ್ತವಾಗಿ, ಪ್ರತಿಯೊಬ್ಬರ ಹಂಗೂ ಅವರ ಬಾಳ ಸಂಗತಿಯ ಕಡೆಗೆ ಇರುವುದಾಗಿದ್ದು ಅವರುಗಳು ಯಾವುದೇ ಸೂಕ್ತವಾದ ಅನುಕೂಲತೆಗಳಿಂದ, ಸೌಕರ್ಯಗಳಿಂದ ಅಥವಾ ಸಹವಾಸದಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕಾಗುತ್ತದೆ. ಹೀಗಿದ್ದಾಗ್ಯೂ, ದೈವಾಜ್ಞೆಯನ್ನು ಅನುಸರಿಸಲು ಅಂದರೆ, "ಸಭೆಯಾಗಿ ಕೂಡಿಕೊಳ್ಳುವುದನ್ನು ಕೆಲವರು ರೂಢಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟು ಬಿಡದೆ ಒಬ್ಬರನ್ನೊಬ್ಬರು ಎಚ್ಚರಿಸೋಣ. ಕರ್ತನ ಪ್ರತಕ್ಷತೆಯ ದಿನವು ಸಮೀಪಿಸುತ್ತಾ ಬರುತ್ತದೆ ಎಂದು ನೀವು ನೋಡುವುದರಿಂದ ಇದನ್ನು ಮತ್ತಷ್ಟು ಮಾಡಿರಿ" (ಇಬ್ರಿಯ 10:25)

## ಎಲ್ಲಾ ಜನರನ್ನೂ ಗೌರವಿಸಿರಿ.
## "Honor All Men"

**ಸ್ವತಂತ್ರರಂತೆ ನಡೆದುಕೊಳ್ಳಿರಿ ಆದರೆ ಕೆಟ್ಟತನವನ್ನು ಮರೆಮಾಚುವುದಕ್ಕೆ ನಿಮ್ಮ ಸ್ವಾತಂತ್ರ್ಯವನ್ನು ಉಪಯೋಗಿಸಬೇಡಿರಿ... ಎಲ್ಲರನ್ನೂ ಸನ್ಮಾನಿಸಿರಿ, ಸಹೋದರರನ್ನು ಪ್ರೀತಿಸಿರಿ; ದೇವರಿಗೆ ಭಯಪಡಿರಿ, ಅರಸನನ್ನು ಸನ್ಮಾನಿಸಿರಿ..."ಅವರವರಿಗೆ ಸಲ್ಲಿಸತಕ್ಕದ್ದನ್ನು ಸಲ್ಲಿಸಿರಿ; ಯಾರಿಗೆ ಕಂದಾಯವೋ ಅವರಿಗೆ ಕಂದಾಯವನ್ನು, ಯಾರಿಗೆ ಸುಂಕವೋ ಅವರಿಗೆ ಸುಂಕವನ್ನು, ಯಾರಿಗೆ ಭಯವೋ ಅವರಿಗೆ ಭಯವನ್ನು, ಯಾರಿಗೆ ಮರ್ಯಾದೆಯೋ ಅವರಿಗೆ ಮರ್ಯಾದೆಯನ್ನು ಸಲ್ಲಿಸಿರಿ, ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬ ಋಣವೇ ಹೊರತು ಬೇರೆ ಯಾವ ಸಾಲವೂ ನಿಮಗೆ ಇರಬಾರದು " (1 ಪೇತ್ರ 2:15,16 ರೋಮಾ. 13: 7,8).**

ನೂತನ ಸೃಷ್ಟಿಗಳು ಎಲ್ಲಾ ದ್ವೇಷಾಸೂಯೆಗಳಿಂದ ಮತ್ತು ದೈಹಿಕ ಇಚ್ಛೆಗಳಿಂದ ಮುಕ್ತರಾಗಿದ್ದು ಪವಿತ್ರಾತ್ಮನ ಉದಾರವಾದ ಮತ್ತು ಕೃಪಾಪೂರಿತವಾದ ಪ್ರವೃತ್ತಿಗಳಿಂದ ಚೈತನ್ಯಗೊಂಡವರಾಗಿ ಇತರರ ಒಳ್ಳೆಯ ಮನಸ್ಸು ಮತ್ತು ಹೃದಯವನ್ನು ಮೆಚ್ಚಿಕೊಳ್ಳಲು ಅಡ್ಡಿಪಡಿಸುವಂತೆ ಗರ್ವಪಟ್ಟುಕೊಳ್ಳುವ ಮತ್ತು ದುರಾಶೆಯುಳ್ಳ ಸಂಘರ್ಷವನ್ನು ಉಂಟು ಮಾಡುವ ಯಾವುದೇ ಸಂಧರ್ಭಗಳಿರುವುದಿಲ್ಲ.

ಆತನು ಇತರರ ಈ ಲೋಕದ ಹಕ್ಕುಗಳನ್ನು ಮತ್ತು ಕೇಳಿಕೆಗಳನ್ನು ಮತ್ತು ಪರಲೋಕದ ಆತ್ಮೀಕತೆಯ ಸಲುವಾಗಿ ತಿರಸ್ಕರಿಸಿದ್ದ ತನ್ನ ಸ್ವಂತ ಹಕ್ಕು ಮತ್ತು ಕೇಳಿಕೆಗಳನ್ನು ಗ್ರಹಿಸಲು ಮತ್ತು ಅವುಗಳನ್ನು ಸಂಪೂರ್ಣವಾಗಿ ಮತ್ತು ಮುಕ್ತವಾಗಿ ಒಪ್ಪಿಕೊಳ್ಳಲು ಸಂತೋಷಿಸಬೇಕು. ಅಂಥವರು ಸ್ವಾಭಾವತಃ ಈ ಲೋಕದ ಮಹತ್ವವಾದವುಗಳನ್ನು ಗ್ರಹಿಸಲು ಬಹಳ ನಿಷ್ಠೆಯುಳ್ಳವರಾಗಿರುತ್ತಾರೆ ಮತ್ತು ಕಾನೂನುಗಳಿಗೆ ಮತ್ತು ಕಾನೂನುಗಳ ಅಗತ್ಯತೆಗಳು ಪರಲೋಕದ ಕೇಳಿಕೆಗಳೊಂದಿಗೆ ಮತ್ತು ಆಜ್ಞೆಗಳೊಂದಿಗೆ ಘರ್ಷನೆಗೊಳ್ಳದಿರುವಲ್ಲಿ ಅವುಗಳಿಗೂ ಅವರು ಅತ್ಯಂತ ವಿಧೇಯರಾಗಿರುತ್ತಾರೆ. ಸರ್ವೋಚ್ಚ ಸೃಷ್ಟಿಕರ್ತನ ಮತ್ತು ಆತನ ಆಜ್ಞೆಗಳಿಗೆ ಸರ್ವೋಚ್ಚವಾದ ನಿಷ್ಟಾಪೂರ್ವಕ ಭಕ್ತಿ ತೋರಿಸುವವರನ್ನು ವಿರೋಧಿಸುವ ಈ ಲೋಕದ ರಾಜರುಗಳು ಬಹಳ ವಿರಳ. ಅದುದರಿಂದ, ಪ್ರಸ್ತುತ ಕಾಲದ ನಿಯಮ ಪಾಲಕರಲ್ಲಿ ನೂತನ ಸೃಷ್ಟಿಗಳನ್ನು ಕಾಣಬಹುದು – ಪ್ರತಿಭಟಿಸುವವರನ್ನಲ್ಲ, ಜಗಳಕೋರರನ್ನಲ್ಲ ಮತ್ತು ತಪ್ಪು ಕಂಡುಹಿಡಿಯುವವರನ್ನಲ್ಲ. ಇತರರು ನೋಡುವುದಕ್ಕಿಂತ ಸ್ಪಷ್ಟವಾಗಿ ಅವರು ಸತ್ಯವನ್ನು ನೋಡುತ್ತಾರೆ. ಸ್ವಾರ್ಥದ ಆಧಾರದ ಮೇಲೆ ರೂಪುಗೊಂಡಿರುವ ಪ್ರಸ್ತುತ ವ್ಯವಸ್ಥೆಯಲ್ಲಿ ತಪ್ಪು ಕಂಡುಹಿಡಿಯಬಹುದಾದ ಮೂಲಕಾರಣವನ್ನು ಅವರು ತಿಳಿದಿರುತ್ತಾರೆ. ಆದರೆ ಅವರು ದೇವರ ವಾಕ್ಯದ ಮೂಲಕ ಜ್ಞಾನೋದಯಗೊಂಡ ತಮ್ಮ ತಿಳುವಳಿಕೆಯ ದೃಷ್ಟಿಯ ಮೂಲಕವಾಗಿ ಮಾನವರ ಪ್ರತಿಭಟನೆ ಮತ್ತು ಕ್ರಾಂತಿಗೆ ಬೇಕಾದ ಬದಲಾವಣೆಗಳನ್ನು ತರುವಷ್ಟು ಪ್ರಭಲವಾಗಿರುವುದಿಲ್ಲ ಎಂಬುದನ್ನು ಕಂಡುಕೊಳ್ಳುತ್ತಾರೆ. ಮಾನವ ಜಾತಿಯು ಸದಭಿಪ್ರಾಯ ಹೊಂದಿದ್ದು ನೆರವೇರಿಸಲು ಹತ್ತು ಪಾಲು ಶಕ್ತವಾಗಿದ್ದರೂ ನಮ್ಮ ಕರ್ತನು ನಮಗೆ ತೋರಿಸಿರುವ ಪರಿಪೂರ್ಣತೆಯ ಮಟ್ಟವನ್ನು ತಲುಪಲು ಬಹು ದೂರವಾಗಿರುವದು; ಸೂಕ್ತಕಾಲದಲ್ಲಿ ಆತನು ತನ್ನ ರಾಜ್ಯದ ಆಡಳಿತಾವಧಿಯಲ್ಲಿ ದೇವರ ಚಿತ್ತವು ಪರಲೋಕದಲ್ಲಿ ನೆರವೇರುತ್ತಿರುವಂತೆ ಈ ಭೂಮಿಯ ಮೇಲೆಯೂ ನೆರವೇರುವಂತೆ ಮಾಡುವುದನ್ನು ನಂಬಿರುವ ನಮ್ಮನ್ನು ಪ್ರೋತ್ಸಾಹಿಸುತ್ತಾನೆ.

ಮಾನವ ಪ್ರಯತ್ನಗಳ ಪ್ರಾಮುಖ್ಯತೆಯನ್ನು ಗ್ರಹಿಸಿ ನೂತನ ಸೃಷ್ಟಿಯು ಇತರರು ಪ್ರಸ್ತುತ ಪರಿಸ್ಥಿತಿಗಳಲ್ಲಿ ಕಡಿಮೆ ಕಾಣುವ ಮತ್ತು ಹೊಂದಿಲ್ಲದ ದೃಢ ಮನಸ್ಸಿನ ಚೈತನ್ಯ ಹೊಂದಿರುತ್ತಾನೆ. ಕಾನೂನು ಮತ್ತು ಕ್ರಮಗಳನ್ನು ಕಾಪಾಡುವುದರಲ್ಲಿ ನಿರಂಕುಶವಾಗಿ ಶಕ್ತಿ ಮತ್ತು ಅಧಿಕಾರಗಳ ದುರುಪಯೋಗ ಮಾಡಿಕೊಳ್ಳಬಹುದಾದ ಅತ್ಯಂತ ಕೆಟ್ಟದಾದ ಮಾನವ ಸರ್ಕಾರವು ಸಹಾ, ಕಾನೂನುಗಳಿಲ್ಲದ ಅರಾಜಕತ್ವಕ್ಕಿಂತ ಉತ್ತಮವಾದುದು ಎಂದು ಆತನು ಕಂಡುಕೊಳ್ಳುತ್ತಾನೆ. ಮಹಾ ಶ್ರೇಷ್ಠನಾದ ಯೆಹೋವನು ಈ ವಿಷಯುಗಳಲ್ಲಿ ಆಸಕ್ತಿಯುಳ್ಳವನಾಗಿದ್ದಾನೆ ಮತ್ತು ಬಯಸಿದ ಫಲಿತಾಂಶಗಳನ್ನು ತರಲು ಸಮಯ ಮತ್ತು ಮಾರ್ಗಗಳು ವಿವೇಕಯುತವಾದುದು ಮತ್ತು ಅನುರೂಪವಾದುದು ಎಂಬುದನ್ನು ಸಹಾ ಆತನು ಕಲಿತಿರುತ್ತಾನೆ. ಆದುದರಿಂದ ನೂತನ ಸೃಷ್ಟಿಯು ತಾಳ್ಮೆಯುಳ್ಳವನೂ, ಉಲ್ಲಾಸಭರಿತನೂ ಮತ್ತು ನಿರೀಕ್ಷೆಯುಳ್ಳವನೂ ಆಗಿರುತ್ತಾನೆ. ಅಪೋಸ್ತಲನಾದ ಯಾಕೋಬನು ಹೇಳುವಂತೆ"ಸಹೋದರರೇ, ಕರ್ತನು ಪ್ರತ್ಯಕ್ಷನಾಗುವತನಕ ದೀರ್ಘಶಾಂತಿಯಿಂದಿರಿ...ನಿಮ್ಮ ಹೃದಯಗಳನ್ನು ದೃಢಪಡಿಸಿಕೊಳ್ಳಿರಿ. ಕರ್ತನ ಪ್ರತ್ಯಕ್ಷತೆಯು ಹತ್ತಿರವಾಯಿತು" (ಯಾಕೋಬ5:7,8). ಆತನ ರಾಜ್ಯವು ಶೀಘ್ರದಲ್ಲಿಯೇ ನೀತಿವಂತಿಕೆಯನ್ನೂ, ಸಕಲ ಆಶೀರ್ವಾದಗಳನ್ನೂ ಈ ಲೋಕದ ಮಾನವ ಜಾತಿಯವರಿಗೆಲ್ಲಾ ತರುವುದಾಗಿದೆ.

ನೂತನ ಸೃಷ್ಟಿಯು "ಕೆಡುಕರಮೇಲೆ ಉರಿಗೊಳ್ಳದಿರು; ದುಷ್ಟರನ್ನು ನೋಡಿ ಹೊಟ್ಟೆಕಿಚ್ಚು ಪಡಬೇಡ" (ಜ್ಞಾನೋಕ್ತಿ 24:19) ಮತ್ತು "ಕೆಟ್ಟ ನಡತೆಯವರನ್ನು ನೋಡಿ ಉರಿಗೊಳ್ಳದಿರು; ದುರಾಚಾರಿಗಳಿಗೋಸ್ಕರ ಹೊಟ್ಟೆಕಿಚ್ಚು ಪಡಬೇಡ, ಅವರು ಹುಲ್ಲಿನಂತೆ ಬೇಗನೇ ಒಣಗಿಹೋಗುವರು; ಸೊಪ್ಪಿನ ಪಲ್ಯದಂತೆ ಬಾಡಿಹೊಗುವರು" (ಕೀರ್ತನೆ 37:1,2) ಎಂಬ ಕರ್ತನ ಸಂದೇಶಗಳನ್ನು ಕೇಳುವವನಾಗಿದ್ದಾನೆ. ಆದುದರಿಂದ ರಾಜಕೀಯ, ಒಳ್ಳೆಯ ಸರ್ಕಾರ, ಆರ್ಥಿಕತೆ ಇವುಗಳ ವಿವಿಧ ವೈಶಿಷ್ಟಗಳ ಬಗ್ಗೆ ಮಾತನಾಡುವುದು ಮಹತ್ವವಾದವುಗಳೆಂದು ಇತರರು ಪರಿಗಣಿಸುವಾಗ, ಇದಕ್ಕೆ ವ್ಯತಿರಿಕ್ತವಾಗಿ, ದೇವರು ಪ್ರಸ್ತುತ ಪರಿಸ್ಥಿತಿಯನ್ನು ಮುಂಗಂಡಿದ್ದಾನೆ ಮತ್ತು ಪ್ರಸ್ತುತ ಸ್ವಾರ್ಥ ಸಂಸ್ಥೆಯ ವಿರುದ್ಧವಾಗಿ ಆಗಲೇ ತೀರ್ಮಾನವಾಗಿದೆ. ಏನೆಂದರೆ – **"ಮೆನೇ, ಮೆನೇ, ತೆಕೇಲ್, ಉಫರ್ಸಿನ್''** ಅಂದರೆ "ದೇವರು ನಿನ್ನ ಆಳಿಕೆಯ ಕಾಲವನ್ನು ಲೆಕ್ಕಿಸಿ ಕೊನೆಗಾಣಿಸಿದ್ದಾನೆ ...ನೀನು ತಕ್ಕಡಿಯಲ್ಲಿ ತೂಗಲ್ಪಟ್ಟು ಕಡಿಮೆಯಾಗಿ ಕಂಡುಬಂದಿದ್ದೀ ...ನಿನ್ನ ರಾಜ್ಯವು ಭಿನ್ನವಾಗಿ ಮೇದ್ಯರಿಗೂ ಪಾರಸಿಯರಿಗೂ ಕೊಡಲ್ಪಟ್ಟಿದೆ" (ದಾನಿಯೇಲ 5:25–28). ಈ ವಿಷಯದಲ್ಲಿ ದೇವರ ತೀರ್ಮಾನವು ದೇವರ ಪರಿಶುದ್ಧ ಗ್ರಂಥದಲ್ಲಿ ಹೇಳುವಂತೆ ನಿಖರವಾದುದು ಮತ್ತು ಇದನ್ನು ಬದಲಾಯಿಸಲಾಗದು ಎಂದು ಆತನು ಗ್ರಹಿಸಿಕೊಳ್ಳುತ್ತಾನೆ ಮತ್ತು ದೇವರು ತನ್ನ ದೈವಿಕ ಚಿತ್ತಕ್ಕೆ ಅನುಸಾರವಾಗಿ, ಮತ್ತು ತನ್ನ ಕೃಪಾಪೂರ್ಣವಾದ ವಾಗ್ದಾನಗಳಿಗೆ ಅನುಸಾರವಾಗಿ ಬೇಕಾದ ಪರಿವರ್ತನೆಗಳನ್ನು ತರುವಂತೆ ತಾಳ್ಮೆಯಿಂದ ಕಾಯುತ್ತಾನೆ. ಇದಾವುದೆಂದರೆ, ಈ ಲೋಕವು ಮಹಾ ವಿಪತ್ತಿಗೆ ಒಳಗಾಗುವುದು ಎಂದು ಆತನು ಗ್ರಹಿಸಿರುವುದಾದರೂ ನೂತನ ಸೃಷ್ಟಿಯು ದೇವರ ವಾಗ್ದಾನಗಳ ಮೇಲೆ ಆತುಕೊಳ್ಳುತ್ತಾನೆ ಮತ್ತು "ನಾಳಿನ ಭವಿಷ್ಯದ ಕೀಲಿ ಕೈಗಳನ್ನು ಕ್ರಿಸ್ತನಿಗೆ ಅಧೀನ ಮಾಡುತ್ತಾನೆ" ತನ್ನ ಮಾತುಗಳು ಅಥವಾ ಆಲೋಚನೆಗಳು ಅಥವಾ ಕಾರ್ಯಗಳು ಅಂತಿಮವಾದ ಫಲಿತಾಂಶವನ್ನು ಬದಲಿಸಲು ಸಾಧ್ಯವಿಲ್ಲ ಮತ್ತು ತನ್ನ ಹೃದಯವು ದೇವರ ಜ್ಞಾನ ಮತ್ತು ಶಕ್ತಿಗಳ ಮೇಲೆ ವಿಶ್ರಮಿಸಿಕೊಳ್ಳುತ್ತದೆ ಎಂದು ನೂತನ ಸೃಷ್ಟಿಯು ಬಲ್ಲನಾಗಿರುತ್ತಾನೆ. ಬರುತ್ತಿರುವ ಮಹಾಸಂಕಟದ ಕಾಲಕ್ಕೆ ಸಂಬಂಧಪಟ್ಟಂತೆ ನೂತನ ಸೃಷ್ಟಿಯ ಬಗ್ಗೆ ಪ್ರವಾದಿಯು ಸಮಂಜಸವಾಗಿ "ದೇವರು ಇದರಲ್ಲಿದ್ದಾನೆ; ಇದಕ್ಕೆ (ಚಿಯೋನಿಗೆ) ಚಲನವೇ ಇಲ್ಲ" (ಕೀರ್ತನೆ 46:5) ಎಂದಿದ್ದಾನೆ. ಆಕೆಯ ಭರವಸೆ, ನಂಬಿಕೆ ಮತ್ತು ವಿಶ್ವಾಸಗಳೆಲ್ಲವೂ ಉತ್ತಮವಾಗಿ ಸ್ಥಿರವಾಗಿರುವುದು ಅಜ್ಞಾನದಲ್ಲಿ ಅಥವಾ ಮೂಢನಂಬಿಕೆಯಲ್ಲಿ ಅಲ್ಲ, ಆದರೆ ದೇವರ ಜೀವಕರವಾದ, ಶಾಶ್ವತವಾದ ವಾಕ್ಯಗಳಲ್ಲಿಯೇ.

ಈ ಲೋಕದ ಮೇಲೆ ಎರಗಿ ಬರುತ್ತಿರುವ ಗಂಡಾಂತರದ ಬಗ್ಗೆ ಎಚ್ಚರಿಸುವ ಅಗತ್ಯವಾಗಲೀ, ದೂರದೃಷ್ಟಿಯಾಗಲೀ ನೂತನ ಸೃಷ್ಟಿಗೆ ಕಂಡುಬರುವುದಿಲ್ಲ. ಆತನು ಮೊಟ್ಟಮೊದಲಿಗೆ "ದುಷ್ಟರು ದುಷ್ಟರಾಗಿಯೇ ನಡೆಯುವರು, ಅವರಲ್ಲಿ ಯಾರಿಗೂ ವಿವೇಕವಿರದು" (ದಾನಿಯೇಲ 12:10) ಎಂಬ ಕರ್ತನ ಮಾತುಗಳನ್ನು ನೆನಪಿನಲ್ಲಿಟ್ಟುಕೊಂಡಿರುತ್ತಾನೆ. ಬಡವರು, ನರಳುವ ಸೃಷ್ಟಿಗಳು ಮುಂಬರುವ ಸಂಕಷ್ಟಗಳ ಅರಿವಿಲ್ಲದೆ ಅವುಗಳನ್ನು ತಮ್ಮ ದೈನಂದಿನ ಹಂಚಿಕೆಯಲ್ಲಿ ಸಾಕಷ್ಟು ಮಟ್ಟಿಗೆ ಸಹಿಸಿಕೊಳ್ಳುತ್ತಾ ಇದ್ದಾರೆ ಮತ್ತು ಅವುಗಳನ್ನು ನಿವಾರಿಸಲಾಗದು ಮತ್ತು "ಈ ಹೊತ್ತಿನ ಕಾಟ ಈ ಹೊತ್ತಿಗೆ ಸಾಕು" ಎಂಬುದನ್ನು ಸಹಾ ನೆನಪಿನಲ್ಲಿ ಇಟ್ಟುಕೊಂಡಿರುತ್ತಾರೆ. ಅದೇ ವೇಳೆ, ಅವರು ಕೇಳುವ ಕಿವಿಯಿದೆ ಎಂದು ತೋರಿಬರುವವರಿಗೆ ದೇವರ ಸಮಗ್ರವಾದ ಸಮಾಲೋಚನೆಗಳನ್ನು ಪ್ರಕಟಿಸದೇ ಇರುವುದಿಲ್ಲ. ಅವರು ಬುದ್ಧಿವಂತಿಕೆಯಿಂದ ಮತ್ತು ಯುಕ್ತವಾಗಿ ತಮ್ಮ ಚೈತನ್ಯವನ್ನು ವ್ಯರ್ಥಪಡಿಸಿಕೊಳ್ಳುವುದಿಲ್ಲ ಮತ್ತು ಕರ್ತನ ಮತ್ತು ಆತನ ಮಾತುಗಳ ಬಗ್ಗೆ ಮೆಚ್ಚಿಗೆಯಿಲ್ಲದವರ ಕೋಪವನ್ನು ಎಬ್ಬಿಸುವುದಿಲ್ಲ. ಅವರು ಹಂದಿಗಳ ಮುಂದೆ ತಮ್ಮ ಮುತ್ತುಗಳನ್ನು ಚೆಲ್ಲ ಬಯಸುವುದಿಲ್ಲ. ಆದರೆ ಮೇಲಿನಿಂದ ಬರುವ ವಿವೇಕವು ಅವರಲ್ಲಿರುತ್ತದೆ– "ಮೇಲಣಿಂದ ಬರುವ ಜ್ಞಾನವು ಮೊದಲು ಪರಿಶುದ್ಧವಾದದ್ದು. ಆಮೇಲೆ ಸಮಾಧಾನಕರವಾದದ್ದು, ವಿನಯವುಳ್ಳದ್ದು, ಸಂತೋಷವಾಗಿ ಒಪ್ಪಿಕೊಳ್ಳುವಂಥದ್ದು, ಕರುಣೆ ಮುಂತಾದ ಒಳ್ಳೇ ಫಲಗಳಿಂದ ತುಂಬಿರುವಂಥದು ಆಗಿದೆ " (ಯಾಕೋಬ 3:17).

ಮನುಷ್ಯರನ್ನು ಗೌರವಿಸುವುದು, ಅವರ ಗುಣಲಕ್ಷಣ ಮತ್ತು ಸ್ಥಾನಮಾನಕ್ಕೆ ತಕ್ಕಂತೆ ಅವರಿಗೆ ಮರ್ಯಾದೆ ತೋರುವುದು, ಮತ್ತು ಕಾನೂನುಗಳಿಗೆ ವಿಧೇಯರಾಗಿರುವುದು ಇವುಗಳೆಲ್ಲವೂ ಈ ಲೋಕದ ಸರ್ಕಾರದ ಕಾರ್ಯಗಳಲ್ಲಿ ಭಾಗವಹಿಸುವುದು ಎಂದು ತಿಳಿಯುವ ಅಗತ್ಯವಿಲ್ಲ. ಪ್ರತಿಯೊಬ್ಬರೂ ಮತ ಚಲಾಯಿಸಬೇಕೆಂಬ ಕಾನೂನು ಪ್ರಸ್ತಾಪಿಸಲಾಗಿದೆ. ಯಾವುದೇ ಕಾನೂನು ಅಂಗೀಕರಿಸಲ್ಪಡುವಾಗಲೂ ನೂತನ ಸೃಷ್ಟಿಗಳು ಸಹಾ ಅದಕ್ಕೆ ಬದ್ಧರಾಗುತ್ತಾರೆ ಮತ್ತು ಅವರು ಅದಕ್ಕೆ ಯಾವುದೇ ಗುಣುಗುಟ್ಟುವಿಕೆ ಇಲ್ಲದೆ ವಿಧೇಯರಾಗಬೇಕಾಗುತ್ತದೆ. ಈ ಅಗತ್ಯತೆಯನ್ನು ಕಾರ್ಯಗೊಳಿಸುವಾಗ ಅವರು ತಮ್ಮ ಉತ್ತಮ ತೀರ್ಮಾನವನ್ನು ತೆಗೆದುಕೊಂಡು ಅವರು ಉತ್ತಮರೆಂದು ಪರಿಗಣಿಸುವ ಅಭ್ಯರ್ಥಿಗೆ ತಮ್ಮ ಮತ ಚಲಾಯಿಸಬೇಕು. ಅದೇ ಸಮಯದಲ್ಲಿ, ಹೇಗೂ ಅವರನ್ನು ಈ ವಿಷಯದಲ್ಲಿ ಒತ್ತಾಯ ಪಡಿಸಲಾಗುವುದಿಲ್ಲ. ನಮ್ಮ ಬುದ್ದಿಮಾತೇನೆಂದರೆ, ಅವರು ರಾಜಕೀಯ ವಿಷಯವಾಗಿ ಪಕ್ಷಾತೀತರಾಗಿರಬೇಕು ಮತ್ತು ಮತಚಲಾಯಿಸುವುದಲ್ಲಿ ಒಟ್ಟಾರೆಯಾಗಿ ತಪ್ಪಿಸಿಕೊಳ್ಳಬೇಕು. ಇದಕ್ಕೆ ನಾವು ಕೊಡುವ ಕಾರಣಗಳೆಂದರೆ :–

**(ಅ)** ನಮ್ಮ ನಿರ್ಣಯದ ಮಟ್ಟದ ಪ್ರಕಾರ ಯಾವುದೇ ಚುನಾವಣೆಯ ಅಭ್ಯರ್ಥಿಗಳ ಪಟ್ಟಿಯಲ್ಲಿ ಆ ಹುದ್ದೆಗೆ ಅತ್ಯಂತ ಯೋಗ್ಯ ಅಭ್ಯರ್ಥಿಯ ಹೆಸರನ್ನು ಕಾಣುವ ನಿರೀಕ್ಷೆ ನಮಗಿಲ್ಲ.

**(ಆ)** ನಮ್ಮ ಮತಗಳು ಚುನಾವಣೆಯ ಫಲಿತಾಂಶಗಳ ಮೇಲೆ ಯಾವುದೇ ಮೆಚ್ಚಿಕೊಳ್ಳುವ ಪ್ರಭಾವ ಬೀರೀತೆಂಬ ನಿರೀಕ್ಷೆಯೂ ನಮಗಿಲ್ಲ.

**(ಇ)** ನೂತನ ಸೃಷ್ಟಿಗಳು ರಾಜಕೀಯದಲ್ಲಿ ಮತ್ತು ಅದರ ವಿಭಿನ್ನ ವಾದ–ವಿವಾದಗಳಲ್ಲಿ ನಿರತರಾಗಿರುವವರು ತಮ್ಮ ಸಮಯವು ಆ ರೀತಿಯಾಗಿ ವ್ಯರ್ಥಗೊಳ್ಳುವುದು ಮಾತ್ರವಲ್ಲ, ತಮ್ಮ ಚೈತನ್ಯವು ಮತ್ತು ಸಾಧನೆಯು ಸಹಾ ವ್ಯರ್ಥ್ಯವಾಗುತ್ತಿದೆ ಎಂದು ಕಂಡುಕೊಳ್ಳುತ್ತಾರೆ. ಇವುಗಳೆಲ್ಲವೂ ಕರ್ತನ ಕಡೆಗೆ, ಆತನ ಪರಲೋಕದ ಕಾರ್ಯಗಳ ಬಗ್ಗೆ, ಮಹಾ ಸಂತೋಷವನ್ನುಂಟುಮಾಡುವ ಶುಭ ಸಮಾಚಾರವನ್ನು ಪ್ರಚುರಪಡಿಸಲು ಕೇಂದ್ರೀಕರಿಸಬೇಕಾದುದು; ಅಷ್ಟು ಮಾತ್ರವಲ್ಲ, ಅವರ ಉತ್ತಮ ಸಂಗತಿಗಳ ಖಾಸಗಿ ಧ್ಯಾನಕ್ಕೂ, ಕರ್ತನೊಡನೆ ಅವರ ಸಂಪರ್ಕ ಮತ್ತು ಸಹವಾಸಗಳಿಗೂ ಅಡ್ಡಿಯನ್ನುಂಟುಮಾಡುವ ಮಟ್ಟದಲ್ಲಿ ಅವರ ಮನಸ್ಸುಗಳು ಈ ರಾಜಕೀಯ ಹಿತಾಸಕ್ತಿಗಳ ಮೇಲೆ ಆತುಕೊಂಡಿರುತ್ತದೆ.

**(ಈ)** ಯಾವುದೇ ವ್ಯಕ್ತಿ ಅಥವಾ ಪಕ್ಷಕ್ಕೆ ಮತನೀಡಿದವರು, ಚುನಾವಣೆಯ ಫಲಿತಾಂಶಕ್ಕೆ, ಅವಶ್ಯ ಬಿದ್ದಲ್ಲಿ ಕೋವಿ ಕತ್ತಿಗಳನ್ನು ಬಳಸಿಯೂ ಬೆಂಬಲಿಸಲು ಹೆಚ್ಚು ಕಡಿಮೆ ಮುಂದಾಗುತ್ತಾರೆ. ಪ್ರತಿಯೊಬ್ಬ ಪ್ರಜೆಯೂ ಆತನು ಜೀವಿಸುವ ಕಾನೂನು ಮತ್ತು ಸಂಸ್ಥೆಗಳ ಅಡಿಯಲ್ಲಿ ತನ್ನನ್ನು ರಕ್ಷಿಸಿಕೊಳ್ಳಬೇಕಾಗುತ್ತದೆ. ಪರಂತು, ಚುನಾವಣೆಯಲ್ಲಿ ಸಕ್ರೀಯವಾಗಿ ಭಾಗವಹಿಸುವದರಿಂದ ಅದರ ಫಲಿತಾಂಶ ಮತ್ತು ಅದರಿಂದ ರಚನೆಗೊಳ್ಳಲು ಆತನು ಸಹಾಯ ಮಾಡಿದ ಸರ್ಕಾರದ ಬಗ್ಗೆ ನಿರ್ದಿಷ್ಟವಾದ ಒಂದು ನೈತಿಕ ಹಂಗು ಮತ್ತು ಜವಾಬ್ದಾರಿಯು ಆತನಿಗೆ ಉಂಟಾಗುತ್ತದೆ. ಆದುದರಿಂದ ನಾವು ಆರಿಸಿಕೊಳ್ಳುವ ಸ್ಥಾನವೆಂದರೆ – ಸಮಾಜದಲ್ಲಿಯೂ, ನಮಗೂ ಕರ್ತನಿಗೆ ಹೆಚ್ಚಿನ ಗೌರವವನ್ನುಂಟು ಮಾಡುವ ಸ್ಥಾನ. ಇದನ್ನು ದೇವರ ವಾಕ್ಯವು "ಪರದೇಶಿಗಳ ಸ್ಥಾನ' (ಕೀರ್ತನೆ 39:12 ಮತ್ತು 1 ಪೇತ್ರ 2:11 ) ಎಂದು ತಿಳಿಸಿದೆ. ಪರದೇಶಿಗಳು ಸಹಾ ಎಲ್ಲಾ ಕಾನೂನುಗಳಿಗೆ ವಿಧೇಯರಾಗಬೇಕಾಗುತ್ತದೆ ಅದರಂತೆ ನಾವೂ ಸಹಾ. ಪರದೇಶಿಗಳು ಕಾನೂನು ರೀತಿಯಲ್ಲಿ ಕಂದಾಯ ತೆರಬೇಕಾಗುತ್ತದೆ. ಅದರಂತೆ ನಾವೂ ಸಹಾ. ಪರದೇಶಿಗಳು ಕಾನೂನಿನ ಅಡಿಯಲ್ಲ ರಕ್ಷಣೆ ಕೋರಬೇಕಾಗುತ್ತದೆ. ಅದರಂತೆ ನಾವೂ ಸಹಾ. ಆದರೆ ಪರದೇಶಿಗಳು ತಮ್ಮ ಸ್ವಂತ ರಾಜನ ವಿರುದ್ಧ, ತಾವು ಪ್ರಾಥಮಿಕವಾಗಿ ಗುರುತಿಸಿರುವ ರಾಜನಿಷ್ಠೆಯ ವಿರುದ್ಧ ಹೋರಾಡುವ ಒತ್ತಡವನ್ನು ಅನುಭವಿಸುವುದಿಲ್ಲ; ನಾವು ಸಹಾ ಸಾಧ್ಯವಾದ ಮಟ್ಟಿಗೆ ಅಂಥಹುದೇ ಪರಿಸ್ಥಿತಿಯನ್ನು ಇಷ್ಟಪಡುತ್ತೇವೆ. ಯಾಕೆಂದರೆ – "ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು" ಅದರ ಗರ್ಭಾವಸ್ಥೆ ಸ್ಥಿತಿಯಿಂದ ನಾವು ಕರೆಯಲ್ಪಟ್ಟವರಲ್ಲವೇ? (ಕೊಲೊಸ್ಸೆ 1:13).

ನಾವು ಆ ಮಹಾರಾಜನ ಪ್ರಜೆಗಳಲ್ಲವೆ? ಈ ಲೋಕದ ರಾಜ್ಯಗಳೆಲ್ಲವೂ ಇಹಲೋಕದ ಅರಸನೊಂದಿಗೆ ಗುರುತಿಸಿಕೊಂಡಿರುವ ಮತ್ತು ಸ್ವಾರ್ಥತೆಯಿಂದ ತುಂಬಿದ ಆತನ ಕಾನೂನುಗಳುಳ್ಳ ರಾಜ್ಯಗಳಲ್ಲವೆ? ಅದುದರಿಂದ, ನಾವು ಇಲ್ಲಿ ಅಪರಿಚಿತರೂ, ಪ್ರವಾಸಿಗಳೂ ಆಗಿದ್ದೇವಲ್ಲವೆ? ಸ್ವಲ್ಪ ಮಟ್ಟಿಗೆ ನಾವು ಪರಕೀಯರೂ, ಪರದೇಶಿಗಳೂ ಆಗಿದ್ದೇವಲ್ಲವೆ? ನಾವು ಪ್ರತಿಯೊಂದು ಒಳ್ಳೆಯ ಕಾನೂನನ್ನು ಮತ್ತು ಈ ಲೋಕದ ಕಾನೂನುಗಳ ಎಲ್ಲಾ ಸೇವಕರುಗಳನ್ನು ಪ್ರೀತಿಸಬೇಕು ಮತ್ತು ಮೆಚ್ಚಿಕೊಳ್ಳಬೇಕು ಮತ್ತು ಹೀಗಾಗಿ ನೂತನ ಸೃಷ್ಟಿಗಳಲ್ಲಿ ಹೆಚ್ಚಿನವರು ಈ ಲೋಕದಲ್ಲಿ ಇಂದು ಕಂಡು ಬರುವ ಅತ್ಯುತ್ತಮ

ಮಟ್ಟದ ನಾಗರೀಕ ಸರ್ಕಾರದಲ್ಲಿ ಸಂತೋಷದಿಂದ ಬಾಳಬೇಕೆಂಬುದು ಯುಕ್ತವಾಗಿದೆ ಮತ್ತು ಇದನ್ನು ದೇವರ ಕೃಪೆ ಮತ್ತು ಆಶೀರ್ವಾದವೆಂದು ಮೆಚ್ಚಿಕೊಳ್ಳಬಹುದಾಗಿದೆ. ಆದುದರಿಂದ ನಾವು ನಮ್ಮ ಸ್ವದೇಶವನ್ನಾಗಲೀ, ಆದರ ರಾಜ್ಯಭಾರ ಮಾಡುವವರನ್ನಾಗಲೀ, ಅದರ ಕಾನೂನುಗಳನ್ನಾಗಲೀ ನಿಂದಿಸುವುದಿಲ್ಲ; ಆದರೆ ಅವುಗಳಿಗಾಗಿ ನಾವು ಐಹಿಕ ಆಯುಧಗಳನ್ನು ಹಿಡಿದುಕೊಂಡು ಹೋರಾಡಬೇಕೆಂಬ ಅರ್ಥವಲ್ಲ ಅಥವಾ ನಾವು ಅವರಿಗೆ ಮತ ನೀಡುವ ಮೂಲಕ ನಮ್ಮ ಜವಾಬ್ದಾರಿಗಳನ್ನು ಹೆಚ್ಚಿಸಿಕೊಳ್ಳಬೇಕೆಂದಲ್ಲ. ಯುದ್ಧಗಳನ್ನು ವಿರೋಧಿಸುವವರಿಗೆ ಅದರಲ್ಲಿ ಭಾಗವಹಿಸದಂತೆ ಸರ್ಕಾರವು ಯಾವಾಗಲೂ ವಿನಾಯಿತಿ ನೀಡುವುದಿಲ್ಲ ಎಂಬುದು ಸತ್ಯ ಸಂಗತಿ. ಯುದ್ಧಗಳು ಅನೈತಿಕವಾದವು ಎಂದು ನಮ್ಮಂತೆ ಹೇಳುತ್ತಿದ್ದವರಿಗೆ ಬಹಳ ಹಿಂದೆ ಇಂತಹ ಕೃಪಾ ಭಾಗ್ಯವು ಇತ್ತಾದರೂ (Friends or Quakers ಗಳಿಗೆ ಸೈನಿಕ ಕರ್ತವ್ಯಗಳಲ್ಲಿ ವಿನಾಯಿತಿಯುಳ್ಳ ಉದಾರ ನೀತಿಯಿದ್ದ ಕಾಲವೊಂದಿತ್ತು.) ಆದರೆ ಈಗ ಹಾಗಿಲ್ಲ. ಮತ ಚಲಾಯಿಸಲಿ, ಚಲಾಯಿಸದೇ ಇರಲಿ, ನಾವುಗಳು ಸೈನಿಕ ಕರ್ತವ್ಯಗಳನ್ನು ಮಾಡಲೇಬೇಕಾಗಬಹುದು. ಅವಶ್ಯ ಬಿದ್ದಲ್ಲಿ ನಾವು ಅಧಿಕಾರಕ್ಕೆ ವಿಧೇಯರಾಗುವ ಹಂಗಿನಲ್ಲಿದ್ದೇವೆ ಮತ್ತು ಕರ್ತನ ಅನುಗ್ರಹವು ಬಲಾತ್ಕಾರದಿಂದ ಸೈನಿಕ ಸೇವೆಗೆ ಸೇರುವುದನ್ನು ಅನುಮತಿಸಿದೆ ಮತ್ತು ಆತನೇ ನಮ್ಮ ಮತ್ತು ಇತರರ ಒಳಿತಿಗಾಗಿ ಅದನ್ನು ರದ್ದುಪಡಿಸಬಹುದೆಂದು ನಾವು ಪರಿಗಣಿಸಬೇಕಾಗುತ್ತದೆ. ಅಂತಹ ಸಮಯಗಳಲ್ಲಿ ನಾವು ಸೂಕ್ತ ಅಧಿಕಾರಿಗಳಿಗೆ ಪಾರ್ಶ್ವ ವಿವರಣೆಯನ್ನು ನೀಡುವುದು ಮತ್ತು ತಾವು ಪೂರ್ಣ ಮನಸ್ಸಾಕ್ಷಿಯಿಂದ ಸೇವೆ ಮಾಡಬಹುದಾದ ವೈದ್ಯಕೀಯ ಮತ್ತು ಆಸ್ಪತ್ರೆ ವಿಭಾಗಗಳಿಗೆ ತಮ್ಮನ್ನು ಸ್ಥಳಾಂತರಿಸುವಂತೆ ವಿನಂತಿಸಿಕೊಳ್ಳುವುದು ಅಕ್ರಮವೆಂದು ಪರಿಗಣಿಸಬಾರದು. ಆದರೆ ನಾವು ಬೇರೆ ಸೈನಿಕ ಪಂಕ್ತಿಯಲ್ಲಿದ್ದು ನಮ್ಮ ಬಂದೂಕುಗಳನ್ನು ಚಲಾಯಿಸಬೇಕಾದರೂ ನಾವು ನಮ್ಮ ಸಹ–ಜೀವಿಗಳನ್ನು ಕೊಲ್ಲುವಂತೆ ಬಲಾತ್ಕರಿಸಲಾಗುತ್ತಿದೆ ಎಂದು ಭಾವಿಸಬಾರದು.

## ನೂತನ ಸೃಷ್ಟಿಗಳು ಮತ್ತು ನೈತಿಕ ಸುಧಾರಣೆಗಳು

## The New Creature and Moral Reforms

ನೂತನ ಸೃಷ್ಟಿಯ ಪ್ರತಿಯೊಬ್ಬ ಸದಸ್ಯನಿಗೂ ನೈತಿಕತೆ, ಧರ್ಮಶೀಲತೆ, ಶುದ್ಧತ್ವ ಮತ್ತು ಎಲ್ಲಾ ವಿಧವಾದ ಒಳ್ಳೆಯತನಗಳು ಇವುಗಳ ಬಗ್ಗೆ ಸಹಾನುಭೂತಿ ತೋರುವ ಅಗತ್ಯತೆ ಇರಬೇಕು. ಆತನು ಹೃದಯದಲ್ಲಿ ಶುದ್ಧನಾಗಲು ಬಯಸುವುದು ಮಾತ್ರವಲ್ಲ, ಆದರೆ ಇದು ಪ್ರಗತಿ ಹೊಂದುತ್ತಿರುವಂತೆ ಆತನನ್ನು ವ್ಯಕ್ತಿಗತವಾಗಿಯೂ ಮತ್ತು ನಡತೆಯಲ್ಲಿಯೂ ಶುದ್ಧನನ್ನಾಗಿ ಮಾಡಿಬಿಡುತ್ತದೆ. ಇದು ಹೊರಗಣ ವಸ್ತ್ರವನ್ನು ಮಾತ್ರವಲ್ಲ ಆತನ ಬಾಯನ್ನು ಸಹಾ ಒಳಗೊಂಡಿದೆ. ಹೀಗಿದ್ದರೂ, ಈ ಲೋಕದವರು ಮಾಡುವ ತಪ್ಪುಗಳನ್ನು ಅಂದರೆ ಬಾಯೊಳಗೆ ಹೋಗುವ ವಸ್ತುಗಳು ಬಾಯಿಂದ ಹೊರಡುವ ಮಾತುಗಳಿಗಿಂತ ಮಲಿನವಾಗಿರುವಂತೆ ಅವರು ಮಾಡುವುದಿಲ್ಲ. ಹೃದಯ ಪರಿಶುದ್ಧತೆಯು ಆತನ ತುಟಿಗಳ ಶುದ್ಧತೆ ಮತ್ತು ಸತ್ಯತೆಗೆ ನಡೆಸುತ್ತದೆ. ಇದಕ್ಕೆ ಬದಲಾಗಿ ತಿನ್ನುವುದರ ಬಗ್ಗೆ, ಕುಡಿಯುವುದರ ಬಗ್ಗೆ, ಅದೇ ಪ್ರಕಾರ ಬಟ್ಟೆಧರಿಸುವ ಬಗ್ಗೆ ಆತನು ದೇವರದ್ದೇ ಆದ ತನ್ನ ದೇಹ, ಮಾತು, ಆತ್ಮನ ಮೂಲಕವಾಗಿ ಕರ್ತನನ್ನು ಮಹಿಮೆಪಡಿಸುವ ಉದ್ದೇಶದಿಂದ ಆತನು ಜಾಗರೂಕನಾಗಿರುವನು. ದೇವರ ವಾಕ್ಯದಲ್ಲಿ ಕಂಡು ಬಾರದ ನಿರ್ಬಂಧ ಮತ್ತು ದಾಸ್ಯವನ್ನು ಇತರರ ಮೇಲೆ ಹೇರುವುದು ನಮ್ಮ ಕೆಲಸವಲ್ಲ. ನೂತನ ಸೃಷ್ಟಿಯ ಪ್ರತಿಯೊಬ್ಬ ಸದಸ್ಯನೂ ತನ್ನ ಪ್ರತಿಷ್ಠೆಯ ಪ್ರತಿಜ್ಞೆಯು ಸಾಧ್ಯವಾದಷ್ಟು ಮಟ್ಟಿಗೆ ತನ್ನ ಜೀವನದ ಪ್ರತಿಯೊಂದು ಕ್ರಿಯೆಯಲ್ಲಿಯೂ ಮುಟ್ಟುವಂತೆ ನೋಡಿಕೊಳ್ಳಬೇಕು. ಆದುದರಿಂದ ಆತನು ಹೊಟ್ಟೆಬಾಕತನ ಅಥವಾ ಕುಡಿತಕ್ಕೆ ಅಥವಾ ಬೇರೆ ಯಾವುದೇ ದುಶ್ಚಟಗಳ ಬಗ್ಗೆ ಒಲವು ಹೊಂದಿರುವಲ್ಲಿ ಆತನು ಇವೆಲ್ಲವುಗಳಲ್ಲಿ ತಾನು ದೇವರನ್ನು ಮಹಿಮೆ ಪಡಿಸುತ್ತಿದ್ದೇನೋ ಮತ್ತು ಆತನ ಪ್ರಭಾವವನ್ನು ತನ್ನ ಸಹ ಜೀವಿಗಳ ಮೇಲೆ ಸಾಧ್ಯವಾದಷ್ಟು ವಿಶಾಲವಾಗಿ ಪ್ರಯೋಗಿಸುತ್ತಿದ್ದೇನೋ, ಇಲ್ಲವೋ ಎಂಬುದನ್ನು ಜಾಗರೂಕತೆಯಿಂದ ಮತ್ತು ಪ್ರಾರ್ಥನಾಪೂರ್ವಕವಾಗಿ ಪರಿಗಣಿಸುವುದು ಆತನಿಗೆ ಬಿಟ್ಟದ್ದು. ನೂತನ ಸೃಷ್ಟಿಗಳಲ್ಲಿ ಕೆಲವರು ಮಾತ್ರವೇ ತಾವು ತಮ್ಮ ಉಣ್ಣೋಣ ಮತ್ತು ಕುಡಿಯೋಣಗಳಲ್ಲಿ ದೇವರನ್ನು ಮಹಿಮೆ ಪಡಿಸುತ್ತಿದ್ದೇವೆ ಮತ್ತು ಇವುಗಳು ಯಾವುದೇ ಮಟ್ಟದಲ್ಲಿಯಾದರೂ ಅವರ ಮಾನಸಿಕ, ನೈತಿಕ ಮತ್ತು ಆತ್ಮಿಕ ಕಾರ್ಯಗಳ ಉತ್ತಮ ನಿರ್ವಹಣೆಯಲ್ಲಿ ಮಧ್ಯೆಪ್ರವೇಶಿಸುವುದೆಂಬ ಸಲಹೆ ನೀಡಲು ನಾವು ಸಾಹಸಪಡುತ್ತೇವೆ.ನಿಶ್ಚಯವಾಗಿಯೂ, ಹೆಚ್ಚಿನವರು ತಮ್ಮ ಬಲ, ಮೇಧಾಶಕ್ತಿ ಮತ್ತು ಸಾಮರ್ಥ್ಯಗಳು ನಮ್ಮ ಬೀಳುವಿಕೆಯಿಂದ ಬಲಹೀನಗೊಂಡಿವೆ ಮತ್ತು ಇವುಗಳನ್ನು ಕಡೆಗಣಿಸುವುದಕ್ಕಿಂತ ಬಲಪಡಿಸಿಕೊಳ್ಳುವ ಅಗತ್ಯವಿದೆ ಎಂದು ಗ್ರಹಿಸುತ್ತಾರೆ.

## ದುಬಾರಿಯಾದ ಉಡುಪುಗಳನ್ನು ಧರಿಸುವುದು

## Wearing of Costly Apparel

ತನ್ನ ಜೀವಿತವನ್ನು ಮತ್ತು ತನ್ನದೆಲ್ಲವನ್ನು ದೇವರ ಸೇವೆಗೆ ಪ್ರತಿಷ್ಠಿಸಿಕೊಂಡಿರುವ ಆತನ ನಿಜವಾದ, ನಿಷ್ಠಾವಂತ, ಕುಲೀನ ಮಕ್ಕಳಿಗೆ ಅತಿಯಾದ ಯಾವುದೂ ಒಳ್ಳೆಯದಲ್ಲ ಎಂಬುದಾಗಿ ನಾವು ಗಣನೀಯವಾಗಿ ವಾದಿಸಬಹುದು. ಸಂಶಯಾತೀತವಾಗಿ ಪರಲೋಕದ ದೇವದೂತರುಗಳು ಮತ್ತು ಪರಲೋಕದ ವ್ಯವಸ್ಥೆಗಳೆಲ್ಲವೂ ನೋಡಲು ಭವ್ಯವೂ, ದಿವ್ಯವೂ ಆದವುಗಳೆಂದು ನಾವು ಇದಕ್ಕೆ ಕಾರಣ ನೀಡಬಹುದು. ಆದುದರಿಂದ ಈ ಭವ್ಯತೆಯು ದೇವರ ಮನಸ್ಸನ್ನು ಪ್ರತಿನಿಧಿಸುತ್ತದೆ ಮತ್ತು ದೇವರ ಮಕ್ಕಳಿಗೆ ಗೌರವ ತರುತ್ತದೆ. ಈ ಅಂಶವನ್ನು ಈ ದೃಷ್ಟಿಕೋನದಿಂದ ನೋಡುವಾಗ, ನಾವು ಮೊದಲಿಗೆ ನೂತನ ಸೃಷ್ಟಿಯ ಸದಸ್ಯರುಗಳು ತಮ್ಮ ಮರ್ತ್ಯ ದೇಹಗಳನ್ನು ಚಿನ್ನಾಭರಣಗಳಿಂದ ಮತ್ತು ದುಬಾರಿಯಾದ ಉಡುಪುಗಳಿಂದ ಪುಷ್ಕಳವಾಗಿ ಶೃಂಗರಿಸಿಕೊಳ್ಳಬೇಕು ಎಂದು ಹೇಳುವ ಒಲವು ತೋರುತ್ತೇವೆ; ಆದರೆ ಹಾಗೆ ನಿರ್ಧರಿಸುವ ಮುನ್ನ ನಾವು ಈ ಪ್ರಶ್ನೆಯ ಮತ್ತೊಂದು ಕಡೆಯನ್ನೂ ಅಂದರೆ – ನೂತನ ಸೃಷ್ಟಿಗಳು ತಮ್ಮ ಮರ್ತ್ಯ ದೇಹವನ್ನು ಯಾತಕ್ಕಾಗಿ ದುಂದುಗಾರಿಕೆಯಿಂದ ವಿಪರೀತವಾಗಿ ಅಲಂಕರಿಸಿಕೊಳ್ಳಬಾರದು ಎಂಬುದುನ್ನ ಪರಿಶೀಲಿಸೋಣ :

(1) ವಿಪರೀತವಾದ ದುಂದುಗಾರಿಕೆಯಿಂದ ಅಲಂಕರಿಸಿ ಕೊಳ್ಳುವುದರಿಂದ ಸ್ವಾಭಾವಿಕವಾಗಿ ಹೆಚ್ಚು ಕಡಿಮೆ ಜಂಬ ಹುಟ್ಟಿಕೊಳ್ಳುತ್ತದೆ; ಬಹಿರಂಗವಾಗಿ ತೋರಿಸಿಕೊಳ್ಳುವುದು, ಇತರರ ಮುಂದೆ ನಮ್ಮನ್ನು ನಾವು ಚೆನ್ನಾಗಿ ಪ್ರದರ್ಶಿಸುವುದು ಇವುಗಳು ನಮ್ಮ ಪತನಗೊಂಡ ದೇಹಕ್ಕೆ ವಿಚಿತ್ರವಾದ ಪ್ರಲೋಭನೆಯನ್ನುಂಟುಮಾಡುತ್ತದೆ ಮತ್ತು ಇದು ಭಕ್ತಿಯುತ ಮತ್ತು ದೈನ್ಯ ಸ್ವಭಾವಗಳನ್ನು ಬೆಳೆಸಿಕೊಳ್ಳಲು ಅನುಕೂಲಕರವಾಗಿರುವುದಿಲ್ಲ ಎಂಬುದು ನಮಗೆಲ್ಲಾ ತಿಳಿದಿದೆ. ಆದುದರಿಂದ ದೈನ್ಯತೆಯನ್ನು ಬೆಳೆಸಿಕೊಳ್ಳಲು ಅಡ್ಡಿಪಡಿಸುವ ಮತ್ತು ಗರ್ವವನ್ನುಂಟುಮಾಡುವ ಯಾವುದೂ ನೂತನ ಸೃಷ್ಟಿಗಳ ಬೆಳವಣಿಗೆಗೆ ಮಾರಕವಾಗಿವೆ.

(2) ಮಾನವ ಕುಟುಂಬದ ಹೆಚ್ಚಿನವರು ತಮ್ಮ ಬಡತನದ ಕಾರಣ ಯಾವುದೇ ಹೊರಗಣ ವಿಲಾಸಿ ಶೃಂಗಾರಗಳಿಗೆ ಅಡಚಣೆಯುಳ್ಳವರಾಗಿದ್ದಾರೆ ಮತ್ತು ಪ್ರಾಕೃತ ಮನಸ್ಸಿನ ನಿಯಂತ್ರಣ ಹೊಂದಿರುವವರೆಗೆ ಅವರು ಖಂಡಿತವಾಗಿಯೂ ಶ್ರೀಮಂತರ ಬಗ್ಗೆ, ವಿಶೇಷವಾಗಿ ಅವರ ಸಂಪತ್ತಿನ ಆಡಂಬರವಾದ ಪ್ರದರ್ಶನದ ಬಗ್ಗೆ ಅಸೂಯೆ ಪಟ್ಟುಕೊಳ್ಳುತ್ತಾರೆ. ಆದುದರಿಂದ, ಪ್ರೀತಿಯ ಆತ್ಮವು ನೂತನ ಸೃಷ್ಟಿಯವರನ್ನು ಇತರರ ಪರಿಸ್ಥಿತಿ ಮತ್ತು ಮನೋಭಾವನೆಗಳಲ್ಲಿ ಯಾರಿಗೂ ಕಹಿ ಅನುಭವವನ್ನುಂಟು ಮಾಡದಂತೆ ಒತ್ತಾಯಿಸುತ್ತದೆ.

(3) ನೂತನ ಸೃಷ್ಟಿಯ ಪ್ರತಿಯೊರ್ವ ಸದಸ್ಯನೂ ತನ್ನದೆಲ್ಲವನ್ನೂ ಕರ್ತನಿಗೆ ಮತ್ತು ಆತನ ಸೇವೆಗೆ ಪ್ರತಿಷ್ಠೆ ಮಾಡಿದವನಾಗಿರುತ್ತಾನೆ. ಈ ಲೋಕದ ಸಂಪತ್ತಾಗಿ ಆತನಿಗೆ ಬರುವ ಯಾವುದೇ ವಸ್ತುವಾದರೂ ದುರುಪಯೋಗವಾಗದೆ ಅವು ನಮ್ಮ ವಿಮೋಚಕನ ಮತ್ತು ನಾಯಕನಾಗಿರುವವನ ಮಾದರಿಗೆ ತಕ್ಕಂತೆ ಉಪಯೋಗಿಸಬೇಕಾಗುತ್ತದೆ. ನಮ್ಮ ಮುಂದೆ ಇಡಲ್ಪಟ್ಟಿರುವ ಮಾದರಿಯೆಂದರೆ "ತ್ಯಾಗ'– ಪ್ರಭಾವ ಮತ್ತು ಸಮಯ ಮಾತ್ರವಲ್ಲದೆ ಸಂಪಾದನೆ ಮತ್ತು ಸಂಪತ್ತು ಮುಂತಾದವುಗಳ ತ್ಯಾಗವೂ ಹೌದು. "ಶ್ರೀಮಂತನಾಗಿದ್ದವನು ನಮಗೋಸ್ಕರ ಬಡವನಾದನು". ಆದುದರಿಂದ, ನೂತನ ಸೃಷ್ಟಿಯ ಪ್ರತಿಯೊಬ್ಬ ಸದಸ್ಯನೂ, ತಾನು ಒಡಂಬಡಿಕೆಯನ್ನು ಮೆಚ್ಚುವ ಮತ್ತು ಅದರ ಪ್ರಕಾರ ಜೀವಿಸಲು ಬಯಸುವ ಅನುಪಾತದಲ್ಲಿ ತಮ್ಮ ಮನೆವಾರ್ತೆತನಕ್ಕೆ ವಶಮಾಡಲ್ಪಟ್ಟಿರುವ ಹಣವನ್ನು ಅತಿಯಾಗಿ ದುಂದುವೆಚ್ಚಮಾಡದೆ ಉತ್ತಮ ರೀತಿಯಲ್ಲಿ ವಿನಿಯೋಗಿಸಬೇಕು. ಇಲ್ಲವಾದಲ್ಲಿ ಅದು ಆತನನ್ನು ಹಾನಿಗೊಳಿಸುವುದು ಮಾತ್ರವಲ್ಲ ಇತರರನ್ನೂ ಹಾನಿಗೊಳಗಾಗುವಂತೆ ಪ್ರಚೋದಿಸುತ್ತದೆ. ಆತನು ತನ್ನ ಪ್ರತಿಯೊಂದು ರೂಪಾಯಿ(ಡಾಲರ್)ಯನ್ನೂ ಕರ್ತನ ಸೇವೆಯಲ್ಲಿ ಸಾಧ್ಯವಾದ ಮಟ್ಟಿಗೆ ಪ್ರಯೋಜನಕಾರಿಯಾಗಿ ವಿನಿಯೋಗಿಸಬೇಕಾಗುತ್ತದೆ.

ಆಭರಣಗಳನ್ನು ಅಥವಾ ಆಡಂಬರವಾದ ಅಥವಾ ವಿಪರೀತ ಬೆಲೆಯುಳ್ಳ ವಸ್ತ್ರಗಳನ್ನು ಕೊಂಡುಕೊಳ್ಳಲು ನಾವು ಮಾಡಿಕೊಂಡಿರುವ ಪ್ರತಿಷ್ಠೆಯು ಅನುಮತಿಸುವುದಿಲ್ಲ ಎಂಬುದು ಇನ್ನು ಮುಂದೆ ಮನೆವಾರ್ತೆಯವರು ಅವನ್ನು ತಮ್ಮ ಮೇಲೆ ಧರಿಸುವ ಇಲ್ಲವೆ ಮನೆಯ ಶೃಂಗಾರದಲ್ಲಿ ಉಪಯೋಗಿಸುವ ಬದಲಾಗಿ ಅವನ್ನು ಬಂಡವಾಳ ಇಲ್ಲವೇ ಬಾಂಡಿನ ರೂಪದಲ್ಲಿ ಅಥವಾ ಸ್ಥಿರ ಸ್ವತ್ತಿನ ವಹಿವಾಟುಗಳು ಮುಂತಾದವುಗಳಲ್ಲಿ ಪ್ರಾಮಾಣಿಕವಾಗಿ ವಿನಿಯೋಗಿಸುವುದು ಒಂದು ನಿಯಮದಂತೆ ಅನ್ವಯಿಸಲಾಗದು ಎಂಬ ಸತ್ಯದ ಬಗ್ಗೆ ಗಮನ ಹರಿಸುವುದರಿಂದ ಬಹುಶಃ ನಾವು ಒಳಿತನ್ನೇ ಮಾಡುವವರಾಗಿದ್ದೇವೆ. ಹಣವು ನಾವು ಉಪಯೋಗಿಸುವ ಸಂಗತಿಗಳಿಗೆ ಬಲು ಮೌಲ್ಯವುಳ್ಳದ್ದಾಗಿದ್ದು ಸಂಪತ್ತುಳ್ಳ ನೂತನ ಸೃಷ್ಟಿಯ ಪ್ರತಿಯೊಬ್ಬ ಸದಸ್ಯನೂ ಮನೆವಾರ್ತೆತನದ ತನ್ನ ಜವಾಬ್ದಾರಿಗಳನ್ನು ಜಾಗರೂಕತೆಯಿಂದ ಪರಿಗಣಿಸಬೇಕು ಮತ್ತು ದೈವಿಕ ಚಿತ್ತದ ನಿರ್ಣಯಗಳಿಗನುಸಾರವಾಗಿಯೇ ಅದನ್ನು ವಿನಿಯೋಗಿಸುವುದರಲ್ಲಿ ಚುರುಕಾಗಿರಬೇಕು. ಪತನಗೊಂಡ ಸ್ವಾಭಾವದ ಎಲ್ಲಾ ಧೋರಣೆಗಳೂ ಸ್ವಾರ್ಥಪರವಾಗಿರುತ್ತದೆ ಎಂಬುದನ್ನು ಆತನು ನೆನಪಿನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಈ ಕಾರಣದಿಂದ ನೂತನ ಮನಸ್ಸು ಬಹುಮಾನಗಳಿಸಬೇಕಾದಲ್ಲಿ ತನ್ನ ದೇಹದ ಸ್ವಭಾವಗಳೊಡನೆ ಕಾದಾಡಿ ಅದನ್ನು ಸೋಲಿಸಬೇಕು.

ತಾನು ಕ್ರೈಸ್ತನಲ್ಲವೆಂದು ಹೇಳಿಕೊಳ್ಳುವ ಶ್ರೇಷ್ಠ ತತ್ವಗಳುಳ್ಳ ಈ ಲೋಕದ ವ್ಯಕ್ತಿಗೆ ಬೇರೆ ಯಾವದಾದರೂ ಬೌದ್ಧ ಧರ್ಮದಲ್ಲಿರುವುದಾದರೆ ಆತನು "ಶ್ರೀಮಂತನಾಗಿ ಸಾಯುವುದು ಯಾವ ಮನುಷ್ಯನಿಗಾದರೂ ಅವಮಾನ" ಎಂಬ ಸೂತ್ರವನ್ನು ಹೊಂದಿರುವದಕ್ಕೆ ಬದ್ಧನಾಗಿರುತ್ತಾನೆ. ತಮ್ಮದೆಲ್ಲವನ್ನೂ ಕರ್ತನಿಗೆ ಪ್ರತಿಷ್ಠಿಸಿಕೊಂಡಿರುವ ನೂತನ ಸೃಷ್ಟಿಗಳು ಎಷ್ಟರ ಮಟ್ಟಿಗೆ ಈ ರೀತಿಯಾಗಿ ಭಾವಿಸುತ್ತಾರೋ, ತಾವು ಪ್ರತಿಷ್ಠಿಸಿದ ಹಣವನ್ನು ತಮಗಾಗಿ, ತಮ್ಮ ಸ್ವಂತ ಜನರಿಗಾಗಿ ದುಬಾರಿಯಾಗಿ ಖರ್ಚು ಮಾಡುವುದಾದರೆ ಅಥವಾ ಅವರಿಗೆ ಜೀವನದಲ್ಲಿ ಅದನ್ನು ಪರೋಪಕಾರಕ್ಕಾಗಿ ಬಳಸಲು ಅನೇಕ ಅವಕಾಶಗಳು ಬರುವಾಗ ಹಾಗೆ ಮಾಡದೆ ಅದನ್ನು ಕೂಡಿಟ್ಟಿದ್ದೇ ಆದಲ್ಲಿ ಅದು ಅವರಿಗೆ ಅವಮಾನಕರವಾಗಿದೆ! ಅಪೋಸ್ತಲನು ಪ್ರಕಟಿಸುವಂತೆ ಎಲ್ಲಾ ಸೃಷ್ಟಿಗಳೂ ನರಳುತ್ತಿದ್ದಾರೆ, ನೋವಿನಿಂದ ಶ್ರಮೆಪಡುತ್ತಾ ಇದ್ದಾರೆ. ನಮ್ಮ ಪ್ರಭುವು ಹೇಳುವಂತೆ ಬಡವರು ಯಾವಾಗಲೂ ನಮ್ಮ ಮಧ್ಯೆಯೇ ಇರುತ್ತಾರೆ. ನಿಸ್ಸಂಶಯವಾಗಿ, ಉತ್ತಮ ಪ್ರವೃತ್ತಿಯನ್ನು ಹೊಂದಿದವರೆಲ್ಲರಿಗೆ ಪರೋಪಕಾರಮಾಡಲು, ಲೋಕ ರೀತಿಯಲ್ಲಿ ಐಹಿಕ ವಿಷಯಗಳಲ್ಲಿ ಉಪಕಾರ ಮಾಡಲು ಅನೇಕ ಅವಕಾಶಗಳು ದೊರೆಯುತ್ತವೆ. ನೂತನ ಸೃಷ್ಟಿಗಳಿಗೆ ತಮ್ಮ ಮನೆವಾರ್ತೆತನವನ್ನು ಎಷ್ಟರ ಮಟ್ಟಿಗೆ ವಿವೇಕಯುತವಾಗಿ ಬಳಸಿಕೊಳ್ಳುವ ಅವಕಾಶಗಳನ್ನು ಮತ್ತು ತಮ್ಮ ಸ್ವಂತ ವಿಷಯಗಳಲ್ಲಿ ಸುಧಾರಣೆ ತೋರಲು ಗ್ರಹಿಸುತ್ತಾರೋ, ಅವರು ದೇವರು ತಮಗೆ ಮುಕ್ತವಾಗಿ ದಯಪಾಲಿಸಿರುವ ಆತ್ಮೀಕ ಔದಾರ್ಯವನ್ನು ಹಂಚುವಂತೆ ಎಲ್ಲೆಡೆ ತೋರಿಬರುವ ಅವಕಾಶಗಳನ್ನು ಸದ್ವಿನಿಯೋಗ ಪಡಿಸಿಕೊಳ್ಳಬಹುದು. ಪ್ರಾಯಶಃ ಅವರು ಈ ಸಾಧನದ ಮೂಲಕ ಕರ್ತನ ಧರ್ಮಶೀಲತೆ ಎಂಬ ನಿಲುವಂಗಿಯನ್ನು ಮತ್ತು ಮೇಲಿನಿಂದ ಇಳಿದು ಬರುವ ಜೀವಕರವಾದ ರೊಟ್ಟಿಯನ್ನು ಇತರರೆಡೆಗೆ ಸಾಗಿಸಬಹುದು; ಈ ಮನೆವಾರ್ತೆತನದ ಮೂಲಕವಾಗಿ ತಮ್ಮನ್ನು ಕತ್ತಲೆಯ ಅಂಧಕಾರದೊಳಗಿಂದ ಪ್ರಕಾಶಮಯವಾದ ಬೆಳಕಿನೆಡೆಗೆ ತಂದಾತನ ಬಗ್ಗೆ ಸ್ತುತಿಸ್ತೋತ್ರಗಳನ್ನು ಹೆಚ್ಚು

ಪರಿಣಾಮಕಾರಿಯಾಗಿ ವ್ಯಕ್ತಪಡಿಸಿ ಆ ಬೆಳಕು ಇನ್ನೂ ಪ್ರಕಾಶಮಯವಾಗಿ ಬೆಳಗುವಂತೆ ಮಾಡಬಹುದು.

ಈ ವಿಷಯಗಳಲ್ಲಿ ಜನರಿಗೆ ಸೇವೆಮಾಡುವ ಮತ್ತು ಅವರು ಮನೆವಾರ್ತೆಯವರಂತೆ ತಮ್ಮ ಭಯಭಕ್ತಿ ಮತ್ತು ಪ್ರಮಾಣಿಕತೆಗಳನ್ನು ವ್ಯಕ್ತಪಡಿಸುವ ಅವಕಾಶಗಳನ್ನು ಅವರಿಗೆ ನೀಡುವುದು ಸಂಶಯಾತೀತವಾಗಿ ಕ್ರಮಬದ್ಧವಾಗಿದೆ. ಅಂಥಹ ಸಂಧರ್ಭಗಳಲ್ಲಿ ಕರ್ತನು ತನಗೆ ಪ್ರತಿಷ್ಠಿಸಿಕೊಂಡವರಿಗೆ ಅವರು ತಮ್ಮನ್ನು ನಿರಾಕರಿಸಿಕೊಳ್ಳುವಂತೆ ಮತ್ತು ತಮ್ಮ ತಮ್ಮ ಶಿಲುಬೆಯನ್ನು ಹೊತ್ತುಕೊಂಡು ತಂದೆ ದೇವರು ಒಬ್ಬ ಅತ್ಯುತ್ತಮ ಮಾದರಿಯಾಗಿ ಈ ಲೋಕಕ್ಕೆ ಕಳುಹಿಸಿಕೊಟ್ಟಿರುವಾತನನ್ನು ಹಿಂಬಾಲಿಸುವ ಕರೆಯನ್ನು ನಿರಂತರವಾಗಿ ನೀಡುವವನಾಗಿದ್ದಾನೆ. ಭವಿಷ್ಯ ಜೀವನಕ್ಕಾಗಿ ಒಂದು ಬೀಜವನ್ನಾದರೂ ಉಳಿಸಿಕೊಳ್ಳದೆ ಎಲ್ಲವನ್ನೂ ಕರ್ತನ ಸೇವೆಗೆ ಅರ್ಪಿಸಿ ಭಿಕ್ಷುಕರಂತೆ ಬೇರೊಬ್ಬರ ದಾನಧರ್ಮದ ಮೇಲೆ ಆತುಕೊಳ್ಳುವಂತೆ ನಾವು ಯಾರನ್ನೂ ಒತ್ತಾಯಪಡಿಸುತ್ತಿಲ್ಲ. ಅಥವಾ ತ್ಯಾಗವನ್ನು ವಿಪರೀತವಾಗಿ ಮಾಡಿ ಕರ್ತನ ಜನರು ವಿಚಿತ್ರವಾಗಿ, ಕ್ಷುದ್ರರಾಗಿ, ಜಿಪುಣರಂತೆ ಕಾಣಿಸಿಕೊಳ್ಳುವಂತೆಯೂ ನಾವು ಯಾರನ್ನೂ ಒತ್ತಾಯಪಡಿಸುವುದಿಲ್ಲ. ನಮ್ಮ ತಿಳುವಳಿಕೆಗೆ ಅನುಸಾರವಾಗಿ ಯೋಗ್ಯವಾಗಿ ಬಟ್ಟೆಧರಿಸುವುದು ಎಂದರೆ ಶುಭ್ರವಾಗಿ, ಚೊಕ್ಕಟವಾಗಿ, ಸುತ್ತಮುತ್ತಲ ಪರಿಸ್ಥಿತಿಗೆ ತಕ್ಕಂತೆ, ಇತರರು ಕಣ್ಣು ಹಾಕದಂತೆ, ಅವರವರ ಆರ್ಥಿಕ ಸ್ಥಿತಿಗತಿಗೆ ಸಮಂಜಸವಾಗಿ ಇರುವುದು. ಖಂಡಿತವಾಗಿಯೂ ಈ ದೆಸೆಯಲ್ಲಿ ನೂತನ ಸೃಷ್ಟಿಗಳು ಈ ಲೋಕಕ್ಕೆ ಮಾದರಿಯಾಗಿರಬೇಕು. ತಮ್ಮ ಪರಿಸ್ಥಿತಿಗಳು ಅನುಮತಿಸುವುದಕ್ಕಿಂತಲೂ ಹೆಚ್ಚಿನ ರೀತಿಯ ಉಡುಪುಗಳನ್ನು ಧರಿಸದಂತೆ ಅವರುಗಳು ನಿರ್ಧಿಷ್ಟರಾಗಿರಬೇಕು. ಅವರಿಗಿಲ್ಲದ ಸಂಪತ್ತನ್ನು ಪ್ರದರ್ಶಿಸುವ ಪ್ರಯತ್ನಮಾಡಬಾರದು. ಆದರೆ ನಿಜವಾಗಿಯೂ ಅವರ ಯೋಗ್ಯತೆಗೆ, ಸಂಬಳಕ್ಕೆ, ಆದಾಯ ಮುಂತಾದವುಗಳ ಪೂರ್ಣ ಮಟ್ಟಕ್ಕೆ ತಕ್ಕಂತೆ ಅವರು ಬಟ್ಟೆ ಧರಿಸಬೇಕು ಮತ್ತು ಜೀವಿಸಬೇಕು. ಕರ್ತನ ಜನರು ಅವರ ಸಂಪಾದನೆಗಳಿಗೆ ತಕ್ಕಂತೆ ಜೀವಿಸಬೇಕು. ಅವರ ಸರಬರಾಜು ಅವರ ಜೀವನದ ಸಾಮಾನ್ಯ ಅಗತ್ಯತೆಗಿಂತ ಮುಂದಾಗಿಯೇ ಇರಬೇಕಲ್ಲದೆ ಅವರು ಪರೋಪಕಾರ ಮತ್ತು ಅಗತ್ಯವಿರುವವರಿಗೆ ದಾನ ಧರ್ಮಗಳನ್ನು ಮಾಡಲು ಸಿದ್ಧವಾಗುವಂತೆ ಅವರನ್ನು ಶಕ್ತರನ್ನಾಗಿಸಬೇಕು. ■

* * * * * *